ವಿಷಯ : ಶ್ರೀ ಸುನಿಲ್‌ರಾಠೋಡ್, ವಾಹನ ಚಾಲಕರು, ಅಭಿಯೋಗ ಉಪನಿರ್ದೇಶಕರ ಕಛೇರಿ, ಗುಲ್ಬರ್ಗ, ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಉಲ್ಲೇಖ : ಅಭಿಯೋಗ ಉಪನಿರ್ದೇಶಕರು, ಗುಲ್ಬರ್ಗ ವಲಯ ಗುಲ್ಬರ್ಗ, ಇವರ ಫ್ಯಾಕ್ಸ್ ಸಂದೇಶ : 22–08–2011.

ಪ್ರಸ್ತಾವನೆ :

ಅಭಿಯೋಗ ಉಪನಿರ್ದೇಶಕರು, ಗುಲ್ಬರ್ಗ ವಲಯ, ಗುಲ್ಬರ್ಗ, ಇವರ ಉಲ್ಲೆಖಿತ ಫ್ಯಾಕ್ಸ್ ಸಂದೇಶದಲ್ಲಿ ಶ್ರೀ ಸಿ. ಎಸ್. ಮುಟಗಿ, ಅಭಿಯೋಗ ಉಪನಿರ್ದೇಶಕರು, ಗುಲ್ಬರ್ಗ ವಲಯ, ಗುಲ್ಬರ್ಗ, ಇವರು ಗುಲ್ಬರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರ ಪ್ರಭಾರದಲ್ಲಿದ್ದು ದಿನಾಂಕ : 18–08–2011 ರಂದು ನ್ಯಾಯಾಲಯದ ಕಡೆಗೆ ಮಿನಿ ವಿಧಾನಸೌಧದ ಆವರಣದಿಂದ ಹಾದುಹೋಗುವಾಗ, ಅವರ ಕಛೇರಿಯ ವಾಹನ ಚಾಲಕರಾದ ಶ್ರೀ ಸುನಿಲ್ ರಾಠೋಡ್, ಇವರು ಮಾರಕಾಸ್ತ್ರದಿಂದ ಹಲ್ಲೆ ಮಾಡಿದ್ದರಿಂದ ಅವರನ್ನು ಕೂಡಲೇ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದಾಗಿ ತಿಳಿಸಿರುತ್ತಾರೆ, ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ವಾಹನ ಚಾಲಕರ ವಿರುದ್ಧ ಗುನ್ನಾ ನಂ : 150/2011, ಕಲಂ : 341, 504, 506 ಮತ್ತು 307 ಭಾದಂಸಂರಡಿಯಲ್ಲಿ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ನೌಕರರು ದಿನಾಂಕ : 17–08–2011 ರಿಂದ ಅನಧಿಕೃತವಾಗಿ ಕಛೇರಿಗೆ ಗೈರುಹಾಜರಾಗಿರುವುದಾಗಿ ತಿಳಿಸಿರುತ್ತಾರೆ. ದೂರಿನ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ, ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. ಆದ್ದರಿಂದ ನೌಕರರನ್ನು ಸದರಿ ಹುದ್ದೆಯಲ್ಲಿ ಮುಂದುವರೆಸುವುದು ಸಮಂಜಸವಾಗಿರುವುದಿಲ್ಲ. ಆದ್ದರಿಂದ, ಸದರಿ ನೌಕರರನ್ನು ಅಮಾನತ್ತಿನಲ್ಲಿಡುವುದು ಸಮಂಜಸವೆಂದು ಕಂಡು ಬಂದಿದ್ದರಿಂದ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂ. ಡಿಪಿಎನ್ : ಸಿಶಾ–2:96:2011–12, ಬೆಂಗಳೂರು, ದಿನಾಂಕ : 29ನೇ ಆಗಸ್ಟ್, 2011.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಶ್ರೀ ಸುನಿಲ್ ರಾಠೋಡ್, ವಾಹನ ಚಾಲಕರು, ಅಭಿಯೋಗ ಉಪನಿರ್ದೇಶಕರ ಕಛೇರಿ, ಗುಲ್ಬರ್ಗ, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಎ)ರ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಅವರನ್ನು ದಿನಾಂಕ : 17–08–2011 ರಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಶ್ರೀ ಸುನಿಲ್ ರಾಠೋಡ್, ಇವರು ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಎಸ್. ಪಿ. ಅಣ್ಣೇಗೌಡ,
ಜಂಟಿ ಅಭಿಯೋಗ ನಿರ್ದೇಶಕರು (ಆಡಳಿತ),
ಬೆಂಗಳೂರು.

ಪಿ.ಆರ್. 983

ಸಹಕಾರ ಇಲಾಖೆ

ಚೀಟಿ ನಿಧಿಗಳ ಉಪ ನಿಬಂಧಕರು, ಕೇಂದ್ರ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ನ್ಯಾಯಾಲಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–3

ದಾವಾ ಸಂಖ್ಯೆ: ಡಿಆರ್‌ಬಿ–ಸಿ: ಸಿಎಫ್‌ಎಸ್: ಡಿಐಎಸ್: 31:2011–2012.

ವಾದಿ:–	ಪ್ರತಿವಾದಿ:–
ಮೆ॥ ಎಂ.ಸಿ.ಐ. (ಬೆಂಗಳೂರು) ಚಿಟ್ಸ್ ಲಿ. ನಂ.ಬಿ–104, 1ನೇ ಮಹಡಿ, ಬ್ರಿಗೇಡ್ ಮೆಜೆಸ್ಟಿಕ್, 1ನೇ ಮೈನ್, ಗಾಂಧಿನಗರ, ಬೆಂಗಳೂರು–09	1. ವಿ.ಜೆ.ಧನಪಾಲ್, ಬಿನ್ ವಿ.ಆರ್.ಜಯರಾಮಯ್ಯನಾಯ್ಡು, ನಂ .37/25, 1ನೇ ಬಿ ಮೈನ್‌ರೋಡ್, ಪೈಪ್‌ಲೈನ್ ರಸ್ತೆ, ವಿಜಯನಗರ, ಬೆಂಗಳೂರು–40. 2. ಸಿ.ಎನ್.ರಾಘವೇಂದ್ರ, ಬಿನ್ ಸಿ.ಎಸ್.ನರಸಿಂಹಯ್ಯ, ನಂ.2360, 1ನೇ ಸಿ ಮೈನ್, ವಿಜಯನಗರ, 2ನೇ ಸ್ಟೇಜ್, ಬೆಂಗಳೂರು–40.

ಚಿಟ್‌ಫಂಡ್ ಕಾಯ್ದೆ 1982 ಕಲಂ 68(1) ರನ್ವಯ ಸ್ಥಿರಾಸ್ತಿಗಳನ್ನು ಅಟ್ಯಾಚ್‌ಮೆಂಟ್ ಮಾಡಿರುವ ಬಗ್ಗೆ.

ಮೆ॥ ಎಂ.ಸಿ.ಐ. (ಬೆಂಗಳೂರು) ಚಿಟ್ಸ್ ಲಿ. ಈ ಸಂಸ್ಥೆಯು ಚಿಟ್‌ಫಂಡ್ ಕಾಯ್ದೆ 1982ರ ಕಲಂ 64 ರನ್ವಯ ದಾವೆ ಸಲ್ಲಿಸಿ ಪ್ರತಿವಾದಿಗಳಿಂದ ರೂ.23,55,219–00 (ಇಪ್ಪತ್ಮೂರು ಲಕ್ಷ ಐವತ್ತೈದು ಸಾವಿರದ ಎರಡುನೂರು ಹತ್ತೊಂಬತ್ತು ರೂಪಾಯಿಗಳು ಮಾತ್ರ) ಗಳನ್ನು ಈ ದಾವೆ ಸಲ್ಲಿಸಿದ ದಿನಾಂಕದಿಂದ ಹಣ ವಸೂಲಾಗುವವರೆಗೆ ಶೇಕಡ 21ರ ದರದಲ್ಲಿ ಬಡ್ಡಿ ಆಕರ್ಷಿಸಿ ವಸೂಲಿ ಮಾಡಲು ದಾವಾದೇಶ ಕೋರಿದೆ. ದಾವಾ ಅರ್ಜಿಯೊಂದಿಗೆ ಚಿಟ್ ಕಂಪನಿಯು ಕಲಂ 68 ರನ್ವಯ ಪ್ರತ್ಯೇಕ ಪ್ರಮಾಣೀಕರಿಸಿದ ಅರ್ಜಿ ಸಲ್ಲಿಸಿ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಗೆ ಜಪ್ತಿ ಪೂರ್ವ ಆದೇಶ ನೀಡಬೇಕೆಂದು ಕೋರಿದೆ. ಚಿಟ್ ಕಂಪನಿಯು ಸಲ್ಲಿಸಿರುವ ದಾವಾ ಅರ್ಜಿಯನ್ನು ಈ ನ್ಯಾಯಾಲಯವು ನೋಂದಣಿ ಮಾಡಿಕೊಂಡಿದೆ. ಪ್ರತಿವಾದಿಗಳಿಗೆ ನೋಂದಾಯಿತ ಅಂಚೆ ಮುಖಾಂತರ ನೋಟೀಸ್ ಜಾರಿ ಮಾಡಲಾಗಿದ್ದು, ಜಾರಿಯಾಗದೆ ವಾಪಸ್ ಬಂದಿರುತ್ತದೆ.

ಕಲಂ 68 ರನ್ವಯ ಸಲ್ಲಿಸಿರುವ ಅರ್ಜಿಗೆ ಪೂರಕವಾಗಿ ಚಿಟ್ ಕಂಪನಿಯು ಕಲಂ 64 ರನ್ವಯ ಸಲ್ಲಿಸಿರುವ ಅರ್ಜಿಯಲ್ಲಿ ವಿವರಿಸಿರುವ ಅಂಶಗಳನ್ನು ಗಮನಿಸುವುದು ಅವಶ್ಯವಿದೆ. ವಾದಿ ಚಿಟ್ ಕಂಪನಿಯ ಪ್ರಕಾರ, 1ನೇ ಪ್ರತಿವಾದಿಯು **priced subscriber** ಆಗಿದ್ದಾರೆ. 2ನೇ ಪ್ರತಿವಾದಿಯು 1ನೇ ಪ್ರತಿವಾದಿಯೊಂದಿಗೆ ವೈಯಕ್ತಿಕ ಮತ್ತು ಜಂಟಿಯಾಗಿ ಹೊಣೆಗಾರರಾಗಿರುತ್ತಾರೆ. ವಾದಿ ಚಿಟ್ ಕಂಪನಿಯು ಪ್ರಾರಂಭಿಸಿರುವ ಚಿಟ್ ಗ್ರೂಪ್ ಸಂಖ್ಯೆ: ಎಂ–3, ರೂ. 50,00,000–00 ಗಳ ಚಿಟ್ ವ್ಯಾಲ್ಯೂಗೆ ಸಂಬಂಧಿಸಿದ ಟಿಕೆಟ್ ಸಂಖ್ಯೆ: 14 ಆಗಿರುತ್ತದೆ. ಸದರಿ ಚಿಟ್‌ಗೆ ಪ್ರತಿ ತಿಂಗಳು ರೂ.2,00,000–00 ಗಳನ್ನು 25 ತಿಂಗಳು ವಂತಿಗೆ ಪಾವತಿಸಬೇಕಾಗಿದೆ. ದಿನಾಂಕ: 15–04–2009 ರಂದು ನಡೆದ ಚಿಟ್ ಹರಾಜಿನಲ್ಲಿ 2ನೇ ಪ್ರತಿವಾದಿಯು 1ನೇ ಪ್ರತಿವಾದಿಯ ಪರವಾಗಿ ಜಾಮೀನುದಾರರಾಗಿ ತಮ್ಮ ಸ್ಥಿರಾಸ್ತಿಯನ್ನು ಅಡಮಾನ ಇಟ್ಟಿರುತ್ತಾರೆ. ಹಾಲಿ ಖಾತಾ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ 41ನೇ ವಾರ್ಡ್‌ಗೆ ಸೇರಿದ ದಿನಾಂಕ:15–04–2009 ರಂದು ನಡೆದ ಚಿಟ್ ಹರಾಜಿನಲ್ಲಿ **priced subscriber** ಆಗಿ ರೂ.35,00,000–00 ಕರೆದು ಪಡೆದಿದ್ದಾರೆ. ಸದರಿ ಮೊತ್ತ ಪಡೆಯಲು ದಿನಾಂಕ:12–5–2009 ರಂದು ರೂ.38,00,000–00 ಗಳಿಗೆ ಪ್ರಾಮಿಸರಿ ನೋಟನ್ನು ಪ್ರತಿವಾದಿಗಳು ನೀಡಿದ್ದಾರೆ. ಮೇಲೆ ವಿವರಿಸಿದ ಮೊತ್ತವನ್ನು ಪಡೆಯಲು ಪ್ರತಿವಾದಿಗಳು ಈಗಾಗಲೇ ವಿವರಿಸಿದಂತೆ ಪ್ರಾಮಿಸರಿ ನೋಟ್, ಕರಾರು ಪತ್ರ ರಸೀದಿ ಇವುಗಳನ್ನು ನೀಡಿರುತ್ತಾರೆ. ಪ್ರತಿವಾದಿಗಳು ದಿನಾಂಕ:12–05–2009 ರಲ್ಲಿ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಎಂ.ಜಿ.ರಸ್ತೆ, ಇದರ ಚೆಕ್‌ಸಂಖ್ಯೆ: 176390 ರನ್ವಯ ರೂ.34,81,975–00 ಗಳನ್ನು ಪಡೆದಿರುತ್ತಾರೆ. ಪ್ರತಿವಾದಿಗಳು ವಾದಿ ಕಂಪನಿಗೆ ಮಾಡಿಕೊಟ್ಟ ಕರಾರಿನಂತೆ ನಡೆಯಲು ವಿಫಲರಾಗಿ ದಿನಾಂಕ: 14–01–2010 ರಂದು ಸುಸ್ತಿದಾರರಾಗಿದ್ದು ಫೆಬ್ರವರಿ 2010 ರ ನಂತರದ ಕಂತುಗಳನ್ನು ಪಾವತಿ ಮಾಡಲು ವಿಫಲರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 30–06–2010ರಂದು ವಾದಿ ಚಿಟ್ ಕಂಪನಿಯು ಪ್ರತಿವಾದಿಗಳಿಗೆ ಪತ್ರ ಮುಖೇನ ನೋಟೀಸ್ ನೀಡಿದೆ. ಹೀಗಾಗಿ ದಾವಾ ಅರ್ಜಿಯಲ್ಲಿ ವಿವರಿಸಿರುವ ರೂ. 23,55,219–00 ಗಳನ್ನು ಶೇಕಡ 21 ರ ಬಡ್ಡಿ ದರದೊಂದಿಗೆ ಪ್ರತಿವಾದಿಗಳು ವಾದಿ ಚಿಟ್ ಕಂಪನಿಗೆ ಪಾವತಿಸಲು ಹೊಣೆಗಾರರಾಗಿದ್ದು, ದಾವೆಯಲ್ಲಿ ಕೋರಿರುವಂತೆ ದಾವಾದೇಶ ನೀಡಬೇಕೆಂದು ಈ ನ್ಯಾಯಾಲಯವನ್ನು ಕೋರಿದೆ.

ಕಲಂ 68 ರನ್ವಯ ಪ್ರಮಾಣೀಕರಿಸಿದ ಪ್ರತ್ಯೇಕ ಮಧ್ಯಂತರ ಅರ್ಜಿ ಸಲ್ಲಿಸಿ 2ನೇ ಪ್ರತಿವಾದಿಯ ಷೆಡ್ಯೂಲ್ ಸ್ಥಿರಾಸ್ತಿಯ ಮೇಲೆ ಆದೇಶ ಪೂರ್ವ ಜಪ್ತಿ ಆದೇಶ ನೀಡಬೇಕೆಂದು ಕೋರಿರುತ್ತಾರೆ. ಒಂದು ವೇಳೆ ಷೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಿದ್ದಲ್ಲಿ ವಾದಿ ಕಂಪನಿಗೆ ಪ್ರತಿವಾದಿಗಳಿಂದ ಬರಬೇಕಾದ ದಾವಾ ಮೊತ್ತವನ್ನು ವಸೂಲು ಮಾಡಿಕೊಳ್ಳಲು ಬೇರೆ ರಹಾ ಇರುವುದಿಲ್ಲವೆಂದು ಸ್ಪಷ್ಟವಾಗಿ ವಿವರಿಸಲಾಗಿದೆ.

ವಾದಿ ಕಂಪನಿಯು ಕಲಂ 64 ರನ್ವಯ ಸಲ್ಲಿಸಿರುವ ದಾವಾ ಅರ್ಜಿ ಕಲಂ 68 ರನ್ವಯ ಸಲ್ಲಿಸಿರುವ ಪ್ರಮಾಣೀಕರಿಸಿದ ಮಧ್ಯಂತರ ಅರ್ಜಿ, ಹಾಜರುಪಡಿಸಿರುವ ಜನರಲ್ ಪವರ್ ಆಫ್ ಅಟಾರ್ನಿ ಚಿಟ್‌ಗೆ ಸಂಬಂಧಿಸಿದಂತೆ ಕರಾರು ಪತ್ರ, ರಸೀದಿ, ಪ್ರಾಮಿಸರಿ ನೋಟ್, ಲೀಗಲ್ ನೋಟೀಸ್ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಸೇಲ್‌ಡೀಡ್‌ನ್ನು ನ್ಯಾಯಾಲಯವು ಪರಿಶೀಲಿಸಿದೆ. ಮೇಲಿನ ದಾಖಲಾತಿಗಳನ್ವಯ ಪ್ರತಿವಾದಿಗಳು ವಾದಿ ಚಿಟ್ ಕಂಪನಿಗೆ ರೂ.23,55,219–00 ಗಳನ್ನು ಶೇಕಡ 21 ರ ಬಡ್ಡಿಯೊಂದಿಗೆ ಮರುಪಾವತಿ ಮಾಡಬೇಕಾದ ಹೊಣೆಗಾರಿಕೆ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಮಾರಾಟ ಮಾಡುವುದನ್ನು ತಡೆಯದೇ ಇದ್ದಲ್ಲಿ ಈ ಪ್ರಕರಣದಲ್ಲಿ ನೀಡಬಹುದಾದ

ಆದೇಶವನ್ನು ವಾದಿ ಕಂಪನಿಯು ಜಾರಿಗೊಳಿಸಿ ಹಣ ವಸೂಲಿ ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂಬ ಅಂಶವನ್ನು ಈ ನ್ಯಾಯಾಲಯವು ಮನವರಿಕೆ ಮಾಡಿಕೊಂಡಿದೆ. ಆದ್ದರಿಂದ ಈ ಕೆಳಕಂಡ ಆದೇಶ

ಆದೇಶ

ಮೇಲೆ ವಿವರಿಸಿರುವ ಸಕಾರಣಗಳ ಹಿನ್ನೆಲೆಯಲ್ಲಿ ಚಿಟ್‌ಫಂಡ್ ಕಾಯ್ದೆ 1982 ರ ಕಲಂ 68 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಎಂ.ಡಿ.ನರಸಿಂಹಮೂರ್ತಿ, ಚೀಟಿ ನಿಧಿಗಳ ಉಪ ನಿಬಂಧಕರು, ಕೇಂದ್ರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಆದ ನಾನು ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪಿಗೆ ಪೂರ್ವ ಜಪ್ತಿ ಮಾಡಿ ಈ ಮೂಲಕ ಆದೇಶ ನೀಡಿರುತ್ತೇನೆ.

ಷೆಡ್ಯೂಲ್

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ನಾಗರಬಾವಿ ಗ್ರಾಮದ ಸರ್ವೆ ಹೊಸ ನಂಬರ್ 119, ಹಳೆ ನಂಬರ್ 46 ರ ಸ್ವತ್ತಿನಲ್ಲಿ ವಿಂಗಡಿಸಿರುವ ನಿವೇಶನಗಳ ಪೈಕಿ 36 ನೇ ನಂಬರ್ ಸ್ವತ್ತಾಗಿದ್ದು, ಹಾಲಿ ಖಾತಾ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ 40 ನೇ ವಾರ್ಡ್‌ಗೆ ಸೇರಿದ, ಬೆಂಗಳೂರು ನಗರ ಚಂದ್ರಾ ಬಡಾವಣೆ, ಕೆನರಾ ಬ್ಯಾಂಕ್ ಕಾಲೋನಿ ರಸ್ತೆಯಲ್ಲಿರುವ ಕಾರ್ಪೋರೇಷನ್ ಮುನಿಸಿಪಲ್ 36 ನೇ ನಂಬರ್‌ವುಳ್ಳ ಸ್ಥಿರ ಸ್ವತ್ತಿಗೆ ಚಕ್ಕುಬಂದಿ.

ಪೂರ್ವಕ್ಕೆ	**35ನೇ ನಂಬರ್ ಸ್ವತ್ತು**
ಪಶ್ಚಿಮಕ್ಕೆ	**37ನೇ ನಂಬರ್ ಸ್ವತ್ತು**
ಉತ್ತರಕ್ಕೆ	**ಬೇರೆಯವರ ಸ್ವತ್ತು**
ದಕ್ಷಿಣಕ್ಕೆ	**ರಸ್ತೆ**

ಈ ಮಧ್ಯೆಯಿರುವ ಪೂರ್ವ, ಪಶ್ಚಿಮ 30–0 ಮೂವತ್ತು ಅಡಿಗಳು, ಉತ್ತರ ದಕ್ಷಿಣ 37–0 ಮೂವತ್ತೇಳು ಅಡಿಗಳು ಈ ರೀತಿ ಅಳತೆಯುಳ್ಳ ಸೈಟು, ಸದರಿ ಸೈಟಿನಲ್ಲಿ ಕಟ್ಟಿರುವ ಒಂದು ಚದರವುಳ್ಳ ಎ.ಸಿ.ಶೀಟಿನ ಮನೆಯ ಸ್ವತ್ತು.

ಪ್ರತಿವಾದಿಗಳು ಒಂದು ವೇಳೆ ಈ ಜಪ್ತಿ ಪೂರ್ವ ಆದೇಶವನ್ನು ತೆರವುಗೊಳಿಸಲು ಇಚ್ಛಿಸಿದಲ್ಲಿ ರೂ.23,55,219–00 ಗಳನ್ನು ಈ ಪ್ರಾಧಿಕಾರವು ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಮಲ್ಲೇಶ್ವರಂ ಶಾಖೆ, ಬೆಂಗಳೂರು ಇದರಲ್ಲಿ ಹೊಂದಿರುವ ಬ್ಯಾಂಕಿನ ಖಾತೆಗೆ, ಈ ಆದೇಶದ ದಿನಾಂಕದಿಂದ 30 ದಿನಗಳೊಳಗಾಗಿ ಅಥವಾ ಅದಕ್ಕೆ ಮುಂಚಿತವಾಗಿ ಜಮಾ ಮಾಡಿ, ಅಧಿಕೃತ ಚಲನ್/ರಸೀತಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಪ್ರತಿವಾದಿಗಳಿಗೆ ಈ ಮೂಲಕ ಆದೇಶಿಸಿದೆ.

ಒಂದು ವೇಳೆ ಪ್ರತಿವಾದಿಗಳು ಮೇಲೆ ತಿಳಿಸಿದಂತೆ ನಿಗದಿತ ದಿನಾಂಕದೊಳಗಾಗಿ ನಗದು ಪಾವತಿಸಲು ವಿಫಲರಾದಲ್ಲಿ ಷರತ್ತಿಗೊಳಪಟ್ಟು ನೀಡಿರುವ ಈ ಜಪ್ತಿ ಪೂರ್ವ ಆದೇಶವನ್ನು ಕಾನೂನಿನನ್ವಯ ಸ್ವೀಕರಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ಈ ದಿನ ಅಂದರೆ ದಿನಾಂಕ: 16–09–2011 ರಂದು ನೀಡಿರುತ್ತೇನೆ.

ಎಂ.ಡಿ.ನರಸಿಂಹಮೂರ್ತಿ,
ಚೀಟಿ ನಿಧಿಗಳ ಉಪ ನಿಬಂಧಕರು,
ಕೇಂದ್ರ ವಲಯ, ಬೆಂಗಳೂರು

ಪಿ.ಆರ್. 1007

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ ರವರ ಕಾರ್ಯಾಲಯ, ನಂ. 146, 3ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–3

ನಂ:ಎಆರ್‌ಬಿ;50:ಕಲಂ65:02:2011–2012, ದಿನಾಂಕ: 02–09–2011.

ವಿಷಯ:– ಸ್ಥಗಿತಗೊಂಡ ಸಹಕಾರ ಸಂಘಗಳ ಕಾರ್ಯವೈಖರಿ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರ ಕಲಂ 65ರ ಪರಿವೀಕ್ಷಣೆ ನಡೆಸುವ ಬಗ್ಗೆ

ಪ್ರಸ್ತಾವನೆ:

ದಿನಾಂಕ: 31–3–2011 ರ ಅಂತ್ಯಕ್ಕೆ ಇದ್ದಂತೆ ಈ ಕಛೇರಿಯ ಸಹಕಾರ ಸಂಘಗಳ ಪಟ್ಟಿಯನ್ನು ಪರಿಶೀಲಿಸಲಾಗಿ ಹಲವಾರು ವಿವಿಧ ರೀತಿಯ ಸಹಕಾರ ಸಂಘಗಳು ನಿಯಮಾನುಸಾರ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಸಿರುವ ಬಗ್ಗೆ ಠರಾವು ಪ್ರತಿಗಳನ್ನು ಸಲ್ಲಿಸಿರುವುದಿಲ್ಲ. ಆಡಳಿತ ಮಂಡಳಿ ಸಭೆ ನಡೆಸಿರುವುದಕ್ಕೆ ಠರಾವು ಪ್ರತಿಯನ್ನು ಮತ್ತು ವ್ಯವಹಾರ ನಡೆಸಿರುವುದಕ್ಕೆ ವರ್ಷಾಂತ್ಯಕ್ಕೆ ಇದ್ದಂತೆ ಆರ್ಥಿಕ ತಃಖ್ತೆಗಳನ್ನು ಸಲ್ಲಿಸಿರುವುದಿಲ್ಲ, ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಆಗದೇ ಇರುವುದು ಹಾಗೂ ಸಂಘವು ಯಾವ ಉದ್ದೇಶಕ್ಕಾಗಿ ನೋಂದಣಿ ಆಗಿದೆಯೋ ಅಂತಹ ಉದ್ದೇಶಕ್ಕನುಗುಣವಾಗಿ ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿರುವುದು ಕಂಡು ಬಂದಿದ್ದು, ಇವುಗಳ ಅಸ್ತಿತ್ವದ ಬಗ್ಗೆ ಯಾವುದೇ ವ್ಯವಹಾರವನ್ನು ಸಂಘವು ನಡೆಸದೇ ಇರುವುದರಿಂದ ಇಂತಹ ಸಂಘಗಳನ್ನು ಮುಂದುವರೆಸುವುದರಿಂದ ಸಾರ್ವಜನಿಕರಿಗಾಗಲೀ, ಸಂಘದ ಸದಸ್ಯರಿಗಾಗಲೀ, ಯಾವುದೇ ಪ್ರಯೋಜನ

ಇರುವುದಿಲ್ಲ. ಆದುದರಿಂದ ಅಂತಹ ಸಂಘಗಳ ಕಾರ್ಯಚಟುವಟಿಕೆ ಬಗ್ಗೆ ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಇಡುವುದು ಅವಶ್ಯವೆಂದು ಮನಗಂಡು ಈ ಕೆಳಗಿನ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಓ/139/ಸಿಎಲ್‌ಎಮ್/2010 ದಿನಾಂಕ:17–2–2011 ರನ್ವಯ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಂತೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಎಂ.ಚೆನ್ನಭೈರಯ್ಯ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ, ಆದ ನಾನು ಈ ಕೆಳಕಂಡ ಸಹಕಾರ ಸಂಘಗಳ ಕಾರ್ಯವೈಖರಿ ಬಗ್ಗೆ ಪರಿಶೀಲಿಸಲು ಅವುಗಳ ಮುಂದೆ ನಮೂದಿಸಿರುವ ನೌಕರರನ್ನು ಪರಿವೀಕ್ಷಣಾಧಿಕಾರಿಯನ್ನಾಗಿ ನೇಮಿಸಿರುತ್ತೇನೆ.

ಪರಿವೀಕ್ಷಣಾಧಿಕಾರಿಗಳು ಈ ಆದೇಶದ ದಿನಾಂಕದಿಂದ 30 ದಿನಗಳೊಳಗಾಗಿ ಸಂಬಂಧಪಟ್ಟ ಸಹಕಾರ ಸಂಘಗಳ ಬಗ್ಗೆ ಈ ಕೆಳಕಂಡ ಅಂಶಗಳ ಕುರಿತು ಪರಿವೀಕ್ಷಣೆ ನಡೆಸಿ ಪರಿವೀಕ್ಷಣಾ ವರದಿಯನ್ನು ದ್ವಿ ಪ್ರತಿಗಳಲ್ಲಿ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಪರಿವೀಕ್ಷಣಾ ಅಂಶಗಳು:–

1) ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಿಯಮಾನುಸಾರ ನಡೆಸಿರುವುದರ ಬಗ್ಗೆ.
2) ಆಡಳಿತ ಮಂಡಳಿ ಸಭೆಗಳನ್ನು ನಿಯಮಾನುಸಾರ ನಡೆಸಿರುವುದರ ಬಗ್ಗೆ.
3) ಉಪನಿಯಮಗಳಲ್ಲಿರುವ ಉದ್ದೇಶಗಳ ರೀತ್ಯ ಕಾರ್ಯನಿರ್ವಹಿಸದಿರುವ ಬಗ್ಗೆ.
4) ನಿಯಮಾನುಸಾರ ವಾರ್ಷಿಕ ಲೆಕ್ಕಪತ್ರಗಳನ್ನು ಶಾಸನಬದ್ಧ ಲೆಕ್ಕಪರಿಶೋಧನೆ ಮಾಡಿಸದೇ ಇರುವ ಬಗ್ಗೆ.
5) ಸಂಘವು ಕಾರ್ಯಚಟುವಟಿಕೆಯನ್ನು ನಡೆಸದೇ ಸ್ಥಗಿತಗೊಂಡಿರುವ ಬಗ್ಗೆ.
6) ಪರಿವೀಕ್ಷಣಾ ಸಮಯದಲ್ಲಿ ಕಂಡು ಬಂದ ಇತರೆ ನ್ಯೂನ್ಯತೆಗಳು.

ಕ್ರ ಸಂ	ಸಹಕಾರ ಸಂಘದ ಹೆಸರು	ಕಲಂ 65ರ ಪರಿವೀಕ್ಷಣಾಧಿಕಾರಿಯಾಗಿ ನೇಮಿಸಿರುವವರ ಹೆಸರು & ಹುದ್ದೆ
1	**2**	**3**
1	ವರ್ತೂರು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ವರ್ತೂರು.	ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ.
2	ಬೆಳ್ಳಂಡೂರು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ.,	
3	ಕಾಡುಗೋಡಿ ಹರಿಜನ ಗಿರಿಜನ ಬಳಕೆದಾರರ ಸಹಕಾರ ಸಂಘ ನಿ., ಬೆಂಗಳೂರು ದಕ್ಷಿಣ ತಾಲ್ಲೂಕು.	
4	ಹರಿಜನ ಗಿರಿಜನ ಬಳಕೆದಾರರ ಸಹಕಾರ ಸಂಘ ನಿ., ನಾರಾಯಣಪುರ, ಬೆಂಗಳೂರು ದಕ್ಷಿಣ ತಾಲ್ಲೂಕು.	
5	ಹೆಣ್ಣೂರು ಬಳಕೆದಾರರ ಸಹಕಾರ ಸಂಘ ನಿ., ಬಾಣಸವಾಡಿ ಲೇಔಟ್, 1ನೇ ಹಂತ, ಬೆಂಗಳೂರು–43.	
6	ಹರಿಜನ ಗಿರಿಜನ ಬಳಕೆದಾರರ ಸಹಕಾರ ಸಂಘ ನಿ., ನಾರಾಯಣಪುರ, ಬೆಂಗಳೂರು ದಕ್ಷಿಣ ತಾಲ್ಲೂಕು.	ಶ್ರೀಮತಿ ಎನ್.ರಮಾದೇವಿ, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ.
7	ಶ್ರೀ ಸಪ್ತಗಿರಿ ಬಳಕೆದಾರರ ಸಹಕಾರ ಸಂಘ ನಿ., ಲಕ್ಷ್ಮಣನಗರ, ಬೆಂಗಳೂರು–16	
8	ಜಗಜೀವನರಾಂ ಎಸ್.ಸಿ./ಎಸ್.ಟಿ. ಬಳಕೆದಾರರ ಸಹಕಾರ ಸಂಘ ನಿ., ಆನಂದಪುರ, ವರ್ತೂರು.	
9	ರಾಘವೇಂದ್ರ ಬಳಕೆದಾರರ ಸಹಕಾರ ಸಂಘ ನಿ., ಹೆಣ್ಣೂರು ರಸ್ತೆ, ಬೆಂಗಳೂರು.	
10	ಪ್ರಿಯದರ್ಶಿನಿ ಮಹಿಳಾ ಬಳಕೆದಾರರ ಸಹಕಾರ ಸಂಘ ನಿ., ವಿದ್ಯಾಪುರ, ಕೆ.ಆರ್.ಪುರಂ, ಬೆಂಗಳೂರು.	
11	ಅಲಂಬಿಕಾ ಗ್ಲಾಸ್ ಕಾರ್ಖಾನೆ ಬಳಕೆದಾರರ ಸಹಕಾರ ಸಂಘ ನಿ., ಕಾಡುಗೋಡಿ, ಬೆಂಗಳೂರು.	ಶ್ರೀ ಹರೀಶ್‌ಕುಮಾರ್.ಬಿ.ಎಸ್. ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ.
12	ಕೆ.ಆರ್.ಪುರ ಬಳಕೆದಾರರ ಸಹಕಾರ ಸಂಘ ನಿ., ಕೆ.ಆರ್.ಪುರಂ, ಬೆಂಗಳೂರು.	

13	ಸ್ತ್ರೀ ಶಕ್ತಿ ಮಹಿಳಾ ಬಳಕೆದಾರರ ಸಹಕಾರ ಸಂಘ ನಿ., ಹೊಸಬೈಯಪ್ಪನಹಳ್ಳಿ ಇಂದಿರಾನಗರ ಅಂಚೆ, ಬೆಂಗಳೂರು–47	
14	ಬೊಮ್ಮನಹಳ್ಳಿ ವುಮೆನ್ ಬಳಕೆದಾರರ ಸಹಕಾರ ಸಂಘ ನಿ., ಬೇಗೂರು ಹೋಬಳಿ, ಬೆಂಗಳೂರು–66.	
15	ಸುಭಾಶನಗರ ಬಳಕೆದಾರರ ಸಹಕಾರ ಸಂಘ ನಿ., ಸುಭಾಶ್ ನಗರ, ಕಂಟ್ರಾಕ್ಟ್ ಕ್ಲಬ್ ಹಿಂಭಾಗ, ಬೆಂಗಳೂರು–68.	
16	ಭಾರತರತ್ನ ಡಾ॥ ಅಂಬೇಡ್ಕರ್ ಪರಿಶಿಷ್ಟ ಜಾತಿ/ಪಂಗಡದ ಬಳಕೆದಾರರ ಸಹಕಾರ ಸಂಘ ನಿ., ಆಡುಗೋಡಿ.	ಶ್ರೀ ಗಿರೀಶ್.ಬಿ.ಎನ್. ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ.
17	ಪ್ರಗತಿಪುರ ಮಹಿಳಾ ಬಳಕೆದಾರರ ಸಹಕಾರ ಸಂಘ ನಿ., ಪ್ರಗತಿಪುರ, ಬನಶಂಕರಿ 2ನೇ ಹಂತ, ಬೆಂಗಳೂರು.	
18	ಶ್ರೀ ಬೈರವೇಶ್ವರ ಬಳಕೆದಾರರ ಸಹಕಾರ ಸಂಘ ನಿ., ನಾರಾಯಣಘಟ್ಟ ಲೇ ಔಟ್, ಬೆಂಗಳೂರು.	
19	ಮಾರುತಿನಗರ ಬಳಕೆದಾರರ ಸಹಕಾರ ಸಂಘ ನಿ., ಮಡಿವಾಳ, ಬೆಂಗಳೂರು.	
20	ಬಟ್ಟರಹಳ್ಳಿ ಬಳಕೆದಾರರ ಸಹಕಾರ ಸಂಘ ನಿ., ಬಟ್ಟರಹಳ್ಳಿ ಬೆಂಗಳೂರು ಪೂರ್ವ.	

ಈ ಆದೇಶವನ್ನು ದಿನಾಂಕ: 02–9–2011 ರಂದು ನನ್ನ ಸಹಿ ಹಾಗೂ ಕಛೇರಿ ಮುದ್ರೆಯೊಂದಿಗೆ ಹೊರಡಿಸಲಾಗಿದೆ.

ಎಮ್. ಚೆನ್ನಬೈರಯ್ಯ,
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ದಕ್ಷಿಣ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ.

ಪಿ.ಆರ್. 1036

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1

ಸಂಖ್ಯೆ: ಆಸಾನಿ 97/ ಆಡಳಿತ–2/1302–27/2003–2004, ದಿನಾಂಕ: 29–09–2011.

ವಿಷಯ:– ಶ್ರೀ ಬಿ. ಜ್ಞಾನಶೇಖರ, ಗಣತಿದಾರರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ ಹಾಗೂ ತಾಲ್ಲೂಕು ಕಚೇರಿ, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ ಇಲ್ಲಿಗೆ ವರ್ಗಾವಣೆ ಆದೇಶದಲ್ಲಿರುವ ಇವರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14 **(ii)** ರ ಅನ್ವಯ ಸೇವೆಯಿಂದ ವಜಾ ಮಾಡುವುದರ ಕುರಿತು.

ಉಲ್ಲೇಖ:– 1) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪತ್ರದ ಸಂ:ಜಿಸಂಸಂಚಿ:ಆಡಳಿತ:22:2010–11 ದಿನಾಂಕ: 8–4–2011.

2) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶ ಸಂ:ಆಡಳಿತ:77:2011–12 ದಿನಾಂಕ: 13–5–2011.

3) ದಿನಾಂಕ: 29–7–2011ರ "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ಹೊರಡಿಸಲಾದ ಪತ್ರಿಕಾ ಪ್ರಕಟಣೆ.

ಪ್ರಸ್ತಾವನೆ:–

ದಿನಾಂಕ: 24–10–2001ರಂದು ಅನುಕಂಪ ಆಧಾರದ ಮೇಲೆ ಈ ನಿರ್ದೇಶನಾಲಯದಲ್ಲಿ ಗಣತಿದಾರರಾಗಿ ಸೇವೆಗೆ ಸೇರಿದ ಶ್ರೀ ಬಿ.ಜ್ಞಾನಶೇಖರ ಇವರು ಪ್ರಾರಂಭದಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಕೋಲಾರ, ನಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಚಿಕ್ಕಬಳ್ಳಾಪುರವು ಹೊಸದಾಗಿ ಜಿಲ್ಲೆಯಾಗಿ ಸೃಜನೆಗೊಂಡಂದಿನಿಂದ ಚಿಕ್ಕಬಳ್ಳಾಪುರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರು ಉಲ್ಲೇಖ (1)ರಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪತ್ರದಲ್ಲಿ ಶ್ರೀ ಬಿ. ಜ್ಞಾನಶೇಖರ, ಗಣತಿದಾರರು ಈ ಕೆಳಕಂಡ ಅವಧಿಯಲ್ಲಿ ಸರ್ಕಾರದ ಸೇವೆಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆಂದು ವರದಿ ಮಾಡಿರುತ್ತಾರೆ.

ಕ್ರ. ಸಂ	ದಿನಾಂಕ	ಗೈರು ಹಾಜರಿ ವಿವರ
1	6–8–2010 ರಿಂದ 22–8–2010	ಅನಧಿಕೃತ ಗೈರು ಹಾಜರಿ
2	27–9–2010 ರಿಂದ 30–9–2010	ಅನಧಿಕೃತ ಗೈರು ಹಾಜರಿ

3	15–11–2010, 18–11–2010, 27–11–2010, 29–11–2010	ಅನಧಿಕೃತ ಗೈರು ಹಾಜರಿ
4	20–01–2011 ರಿಂದ	ದಿನಾಂಕ: 20–1–2011ರಿಂದ ಈ ಆದೇಶ ಹೊರಡಿಸುವವರೆಗೆ ಸರ್ಕಾರದ ಸೇವೆಗೆ ಅನಧಿಕೃತ ಗೈರು ಹಾಜರಾತಿ
5	ದಿನಾಂಕ: 13–5–2011ರ ನಿರ್ದೇಶನಾಲಯದ ಆದೇಶದಲ್ಲಿ ಅವರನ್ನು ತಾಲ್ಲೂಕು ಕಚೇರಿ, ಚಿತ್ತಾಪುರ ಗುಲ್ಬರ್ಗಾ ಜಿಲ್ಲೆ ಇಲ್ಲಿಗೆ ವರ್ಗಾವಣೆ ಮಾಡಲಾಗಿತ್ತು	ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರು ದಿನಾಂಕ: 31–5–2011ರ ಅಪರಾಹ್ನ ಬಿಡುಗಡೆ ಆದೇಶ ಹೊರಡಿಸಿರುತ್ತಾರೆ.

ಶ್ರೀ ಬಿ.ಜ್ಞಾನಶೇಖರ, ಗಣತಿದಾರರು ಇವರ ಸರ್ಕಾರಿ ಸೇವೆಗೆ ಮೇಲೆ ತಿಳಿಸಲಾದ ಅನಧಿಕೃತ ಗೈರು ಹಾಜರಾತಿಯನ್ನು ವಿಶೇಷವಾಗಿ ದಿನಾಂಕ: 20–1–2011ರಿಂದ ದೂರಿನನ್ವಯ ದಿನಾಂಕ: 13–5–2011ರ ಆದೇಶದಲ್ಲಿ ತಾಲ್ಲೂಕು ಕಚೇರಿ, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ ಇಲ್ಲಿಗೆ ವರ್ಗಾವಣೆಗೊಳಿಸಲಾಗಿದ್ದು, ದಿನಾಂಕ 31–5–2011ರಂದು (ಅಪರಾಹ್ನ) ಅವರನ್ನು ಬಿಡುಗಡೆಗೊಳಿಸಲಾದ ಆದೇಶದವರೆಗೂ (ವರ್ಗಾವಣೆಯಿಂದ ಬಿಡುಗಡೆಗೊಂಡಿರುವ ಆದೇಶದ ಪ್ರತಿಯನ್ನು ಸ್ವೀಕರಿಸಿರುವುದಿಲ್ಲ) ಹಾಗೂ ದಿನಾಂಕ: 31–5–2011ರಿಂದ ಇಲ್ಲಿಯವರೆಗೂ (ಅಂದರೆ ದಿನಾಂಕ 20–1–2011ರಿಂದ ಇಲ್ಲಿಯವರೆಗೂ) ನಿರಂತರವಾಗಿ ಅನಧಿಕೃತ ಗೈರು ಹಾಜರಾಗಿರುತ್ತಾರೆ.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪತ್ರದ ಸಂ:ಜಿಸಂಸಂ:ಆಡಳಿತ:178:2011–12 ದಿನಾಂಕ: 18–6–2011ರಲ್ಲಿ ಶ್ರೀ ಬಿ.ಜ್ಞಾನಶೇಖರ, ಗಣತಿದಾರರು ಇವರನ್ನು ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಕಚೇರಿಗೆ ವರ್ಗಾವಣೆ ಮಾಡಿರುವ ಆದೇಶದ ಪ್ರತಿಯನ್ನು ದಿನಾಂಕ: 15–5–2011ರಂದು ನೋಂದಾಯಿತ ಅಂಚೆ ಮೂಲಕ ಸಂಬಂಧಿಸಿದ ನೌಕರರ ಸ್ವವಿಳಾಸಕ್ಕೆ ಕಳುಹಿಸಲಾಗಿತ್ತೆಂದು, ಅಂಚೆ ಇಲಾಖೆಯವರು ಈ ಆದೇಶವನ್ನು ಸ್ವೀಕರಿಸಿರುವ ಬಗ್ಗೆ ದೃಢಪಡಿಸಿರುತ್ತಾರೆ ಎಂದು ವರದಿ ಮಾಡಿರುತ್ತಾರೆ. ಆದರೆ ವರ್ಗಾವಣೆ ಆದೇಶದನ್ವಯ ದಿನಾಂಕ: 31–5–2011ರ ಅಪರಾಹ್ನ ಬಿಡುಗಡೆಗೊಳಿಸಲಾದ ನೋಂದಾಯಿತ ಅಂಚೆಯನ್ನು ಅವರ ಸ್ವವಿಳಾಸಕ್ಕೆ ಕಳುಹಿಸಿದ್ದು ಕಚೇರಿಗೆ ಹಿಂತಿರುಗಿ ಬಂದಿರುತ್ತದೆಂದು ವರದಿಸಿರುತ್ತಾರೆ.

ನಂತರ ಶ್ರೀ ಬಿ.ಜ್ಞಾನಶೇಖರ, ಗಣತಿದಾರರು ಇವರ ಅನಧಿಕೃತ ಗೈರು ಹಾಜರಾತಿ ಹಾಗೂ ಅವರನ್ನು ತಾಲ್ಲೂಕು ಕಚೇರಿ, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ ಇಲ್ಲಿಗೆ ವರ್ಗಾವಣೆ ಮಾಡಿದ್ದರ ಕುರಿತು "ವಿಜಯ ಕರ್ನಾಟಕ" ಕನ್ನಡ ದಿನಪತ್ರಿಕೆಯ ದಿನಾಂಕ: 29–7–2011ರಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, 15 ದಿನಗಳ ಒಳಗಾಗಿ ವರ್ಗಾವಣೆಯಾದ ಕಚೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ತಪ್ಪಿದಲ್ಲಿ "ಅವರು ತಲೆತಪ್ಪಿಸಿಕೊಂಡಿರುತ್ತಾರೆಂದು **(absonded)**" ಪರಿಗಣಿಸಿ, ಅವರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14 **(ii)** ರ ಅನ್ವಯ ನೇರವಾಗಿ ಸೇವೆಯಿಂದ ವಜಾ ಮಾಡಲಾಗುವುದೆಂದು ಎಚ್ಚರಿಕೆ ನೀಡಲಾಗಿತ್ತು.

ಆದರೆ, ಶ್ರೀ ಬಿ.ಜ್ಞಾನಶೇಖರ ಇವರು ದಿನಾಂಕ: 20–1–2011ರಿಂದ ನಿರಂತರವಾಗಿ ಅನಧಿಕೃತ ಗೈರು ಹಾಜರಾದ ಗಣತಿದಾರರು, ಅವರಿಗೆ ವರ್ಗಾವಣೆ ಆದೇಶವನ್ನು ಮನೆ ವಿಳಾಸಕ್ಕೆ ಜಾರಿ ಮಾಡಿದ್ದಾಗ್ಯೂ ಹಾಗೂ ಅವರ ಅನಧಿಕೃತ ಗೈರು ಹಾಜರಾತಿ ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ ದಿನಾಂಕ: 29–7–2011ರ ವಿಜಯ ಕರ್ನಾಟಕ" ಕನ್ನಡ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚನೆ ನೀಡಿದ್ದರೂ, ಇದಾವುದಕ್ಕೂ ಅವರು ಸ್ಪಂದಿಸದೇ ಇರುವ ಕಾರಣದಿಂದ ಅವರು ತಲೆಮರೆಸಿಕೊಂಡಿರುತ್ತಾರೆಂದು ಪರಿಗಣಿಸಿ ಅವರನ್ನು ಸರ್ಕಾರದ ಸೇವೆಯಿಂದ ವಜಾ ಮಾಡುವುದು ಸೂಕ್ತವೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಚೇರಿ ಆದೇಶ ಸಂಖ್ಯೆ: ಆಡಳಿತ: 401: 2011–12

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ.ಜ್ಞಾನಶೇಖರ, ಗಣತಿದಾರರಿಗೆ ಸರ್ಕಾರದ ಕರ್ತವ್ಯದಲ್ಲಿ ಆಸಕ್ತಿ ಇಲ್ಲದೇ ಮೇಲಿಂದ ಮೇಲೆ ಗೈರು ಹಾಜರಾಗುವ ಪ್ರವೃತ್ತಿ ಹೊಂದಿದ್ದು, ಯಾವುದೇ ಪ್ರಬಲ ಕಾರಣಗಳಿಲ್ಲದೇ, ಸರ್ಕಾರದ ಕರ್ತವ್ಯಕ್ಕೆ ದಿನಾಂಕ 21–01–2011ರಿಂದ ಅನಧಿಕೃತ ಗೈರು ಹಾಜರಾಗಿರುವುದು ತೀವ್ರತರವಾದ ದುರ್ವರ್ತನೆಯಾಗಿರುವುದರಿಂದ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14 **(ii)** ರ ಅನ್ವಯ, ಆತನು ತಲೆಮರೆಸಿಕೊಂಡಿದ್ದಾನೆಂದು ಪರಿಗಣಿಸಿ, ಅದೇ ನಿಯಮಾವಳಿ ನಿಯಮ 11ರ ಅನ್ವಯ ಇಲಾಖಾ ವಿಚಾರಣೆ ಏರ್ಪಡಿಸದೇ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8 **(viii)** ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಹೆಚ್.ಇ.ರಾಜಶೇಖರಪ್ಪ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಆದ ನಾನು ಶ್ರೀ ಬಿ.ಜ್ಞಾನಶೇಖರ, ಗಣತಿದಾರರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ (ತಾಲ್ಲೂಕು ಕಚೇರಿ, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ ಇಲ್ಲಿಗೆ ವರ್ಗಾವಣೆಗೊಂಡಿದ್ದರೂ ವರದಿ ಮಾಡಿಕೊಂಡಿರುವುದಿಲ್ಲ) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ನಿರ್ದೇಶನಾಲಯದ ಸೇವೆಯಿಂದ ವಜಾ ಮಾಡಿ ಆದೇಶಿಸಿದೆ.

ಹೆಚ್.ಇ.ರಾಜಶೇಖರಪ್ಪ,
ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಪಿ.ಆರ್. 1037

HOME SECRETARIAT

NOTIFICATION

No.HD 07 KES 2010 (I), Bangalore, Dated: 14-10-2011.

The Government of Karnataka has been receiving number of requests from Armed Forces authorities and Deputy Commissioners of the Districts for facilitating smooth conduct of the recruitment rallies in different districts of the State. Every year the Directorate of recruitment zone conducts six recruitment rallies in Karnataka in the District Headquarters with the help of district administration. The recruitment rally attract thousands of male candidates from respective zones and calls for elaborate arrangements for smooth conduct of these rallies.

After considering all the aspects and to facilitate smooth conduct of recruitment rally and to provide better opportunities for the candidates from Karnataka. The State Government has examined the matter and in the State Financial statement in the year 2011-12 at para 228 the Hon`ble Chief Minister has announced that financial assistance will be given for training of youth from Karnataka to participate with confidence in the selection process of armed forces and also to facilitate smooth conduct of recruitment rallies.

Keeping in view the above the following guidelines are formulated by the Government of Karnataka.

1) For smooth conduct of the recruitment rallies a committee at the district level is formulated as below:-

(i)	Deputy Commissioner of the District	Chairman
(ii)	Superintendent of Police	Member
(iii)	CEO Zilla Panchayath	Member
(iv)	Deputy Commissioner (L&O) of Police Commissionarates in that district	Member
(v)	Deputy Director PU Board	Member
(vi)	Deputy Director information and Publicity	Member
(vii)	District NSS Officer	Member
(viii)	Principal Govt. Polytechnic of any polytechnic nominated by D.C	Member
(ix)	District Employment Officer	Member
(x)	District Surgeon, Govt Hospital	Member
(xi)	District Health and Family Welfare Officer	Member
(xii)	Executive Engineer PWD	Member
(xiii)	Joint Director/Deputy Director, Department of Sainik Welfare and Resettlement	Nodal Officer

2. Deputy Commissioner of the district may in consulation with the Directorate of recruitment of the armed forces and the Nodal Officer prepare and estimate for the likely expenses for holding the recruitment rally. The funds will be granted to the Deputy Director/Joint Director Sainik Welfare of the concerned district. The Deputy Director .Joint Director should seek financial grants from Director Sainik Welfare and resettlement who has been provided grants under the head of account 2235-60-200-1-01-051 General expenses (Non Plan)

3. However the Deputy Director/Joint Director should incur all the expenditure with the previous sanction of the Deputy Commissioner of the district.

4. The Deputy Commissioner of the district will provide logistics support to the armed forces recruitment officers whenever the recruitment rally is organised in his District Head quarter.

5. Accomadation for officers and staff of recruitment directorate, pendal, water supply, public address system as required shall be provided by the District Administration.

6. It will be the responsibility of the district administration to provide medical services with ambulance to meet any eventuality during the recruitment.

7. Proper Police bandobast arrangements should be made by the Commissioner of Police/Superintendent of police for crowd control and maintenance of Law and Order.

8. Any Government premises should be made available to the recruitment Directorate officers to hold written test, if any, during the recruitment rally,

9. Postal charges for correspondence will be met by the Chief Executive Officer of the Zilla Panchayath.

10. As far as possible the resources available with the different Government agencies in the district should be made use of and in case there is need for hiring or purchase of any of the items required for the conduct of recruitment rally, expenditure may be met out by the Deputy Commissioner of the district.

By Order and in the name of the Governor of Karnataka,

B. RAJAMMA,

Under Secretary to Government,

Home Department (Police Auxillary Services).

P.R. No: 1137

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರು

ದ.ಕ. ಉಪ ವಿಭಾಗ–2, ಬೆಂದೂರ್ ವೆಲ್ ವೃತ್ತ ಕಂಕನಾಡಿ, ಮಂಗಳೂರು–2 ಇವರ ನ್ಯಾಯಾಲಯ

ಅಧಿಸೂಚನೆ

ಸಂಖ್ಯೆ. ಡಬ್ಲ್ಯೂ.ಸಿ.ಎ./ಎಸ್‌ಆರ್–15/2011, ಎಫ್, ದಿನಾಂಕ 22ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀಮತಿ ರುಕ್ಮಿಣಿ (50 ವರ್ಷ) ದಿವಂಗತ ಎಸ್. ಕೃಷ್ಣಪ್ಪ ಗೌಡರ ಮಡದಿ
2. ಶಿವಮ್ಮ (70 ವರ್ಷ) ದಿವಂಗತ ಸೋಮಪ್ಪ ಗೌಡರ ಮಡದಿ
3. ಯಶಕಲಾ ಕೆ. (22 ವರ್ಷ) ದಿವಂಗತ ಕೃಷ್ಣಪ್ಪ ಗೌಡರ ಮಗಳು
4. ಮಾದವ ಕೆ. (21 ವರ್ಷ) ದಿವಂಗತ ಕೃಷ್ಣಪ್ಪ ಗೌಡರ ಮಗ
5. ಪ್ರಕಾಶ್ ಕೆ. (20 ವರ್ಷ) ದಿವಂಗತ ಕೃಷ್ಣಪ್ಪ ಗೌಡರ ಮಗ

ಎಲ್ಲರೂ ಕಲ್ಪಡ ಮನೆ ಕೊಡಿಯಾಲ ಗ್ರಾಮ ಅಂಚೆ ಸುಳ್ಯ ತಾಲ್ಲೂಕು

ವಿರುದ್ಧ

ಪ್ರತಿವಾದಿಗಳು :–

1. ಅಸಿಸ್ಟೆಂಟ್ ಡಿವಿಜನಲ್ ಇಂಜಿನಿಯರ್ ಸೌತ್ ವೆಸ್ಟರ್ನ್ ರೈಲ್ವೆ, ಸಕಲೇಶಪುರ

ಅರ್ಜಿದಾರರಾದ ಶ್ರೀಮತಿ ರುಕ್ಮಿಣಿ ಇವರು ತಮ್ಮ ಗಂಡನಾದ ಶ್ರೀ ಎಸ್. ಕೃಷ್ಣಪ್ಪಗೌಡ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ 28–9–2010 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೇಮ್ ಅರ್ಜಿ/ತಕಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಡಿ.ಜಿ. ನಾಗೇಶ್,

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,

ದ.ಕ. ಉಪ ವಿಭಾಗ–2, ಮಂಗಳೂರು.

ಪಿ.ಆರ್. 907

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು,

ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯ

ಪ್ರಕಟಣೆ

ಸಂಖ್ಯೆ. ಕಾಅಗ/ಕಾನಪ/ಎಫ್–39/2011/362, ದಿನಾಂಕ 23ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀ ಸುಗೀರಪ್ಪ @ ವೀರಪ್ಪ ತಂದೆ : ಅಂದಾನೆಪ್ಪ ಪಟ್ಟೇದ, ವಯಸ್ಸು 50 ವರ್ಷ, ಸಾ॥ ಗದಗ
2. ಶ್ರೀಮತಿ ಕಮಲವ್ವ ಕೋಂ: ಸುಗೀರಪ್ಪ @ ವೀರಪ್ಪ ಪಟ್ಟೇದ : ವಯಸ್ಸು 47 ವರ್ಷ, ಸಾ॥ ಗದಗ

ವಿರುದ್ಧ

ಪ್ರತಿವಾದಿಗಳು :–

1. ಆರ್. ಸಂಜೀವ ಕುಮಾರ್ ತಂದೆ : ಆರ್ ವೀರಭದ್ರಯ್ಯ ಪ್ಲಾಟ್ ನಂ. 57, ಕೀರ್ತಿಕಾಲನಿ, ಸಾ॥ ಭಾಗ್ಯನಗರ, ಕೊಪ್ಪಳ
2. ದಿ ಡಿವಿಜಿನಲ್ ಮ್ಯಾನೇಜರ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿ. ಎಲ್.ಇ.ಎ. ಕಾಂಪ್ಲೆಕ್ಸ್, ಧಾರವಾಡ

ಅರ್ಜಿದಾರರಾದ ಶ್ರೀ ಸುಗೀರಪ್ಪ @ ವೀರಪ್ಪ ಪಟ್ಟೇದ ಮತ್ತು ಶ್ರೀಮತಿ ಕಮಲವ್ವ ಕೋಂ: ಸುಗೀರಪ್ಪ @ ವೀರಪ್ಪ ಪಟ್ಟೇದ ಸಾ॥ ಗದಗ ಇವರು, ತಾವು ಮೃತ ಸಂಗಪ್ಪ ಪಟ್ಟೇದ ಇವರ ತಂದೆ ಮತ್ತು ತಾಯಿ ಎಂದೂ, ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಸಂಗಪ್ಪ ಪಟ್ಟೇದ ಇವರು ಒಂದನೇ ಪ್ರತಿವಾದಿಗಳಾದ ಆರ್. ಸಂಜೀವ್ ಕುಮಾರ್ S/o ಆರ್. ವೀರಭದ್ರಯ್ಯ, ಕೀರ್ತಿಕಾಲನಿ, ಭಾಗ್ಯನಗರ, ಕೊಪ್ಪಳ ಇವರಲ್ಲಿ ಚಾಲಕ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲಿ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ
ಗದಗ ಜಿಲ್ಲೆ, ಗದಗ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಕಾನೂನು ಅಡಿ ಆಯುಕ್ತರು,

ಪಿ.ಆರ್. 908

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ,
ಉಪ ವಿಭಾಗ–2, ವಿಜಾಪೂರ ಜಿಲ್ಲೆ, ವಿಜಾಪೂರ
ಪ್ರಕಟಣೆ
ಪ್ರಕರಣ ಸಂಖ್ಯೆ. ಡಬ್ಲ್ಯೂ.ಸಿಎ./ಎಸ್ಆರ್–82/2011, ದಿನಾಂಕ 01ನೇ ಆಗಸ್ಟ್ 2011

ಅರ್ಜಿದಾರರು :–		**ಪ್ರತಿವಾದಿಗಳು :–**
1. ರಾಮಚಂದ್ರ ಕೃಷ್ಣಾ ಜಗತಾಪ 2. ಸವಿತಾ ರಾಮಚಂದ್ರ ಜಗತಾಪ ಇಬ್ಬರು ಇರುವುದು ಡೋಬಳೆಗಲ್ಲಿ, ವಿಜಾಪುರ	**ವಿರುದ್ಧ**	1. ಸಂಪತ, ಭಾನುದಾಸ, ದವಣೆ ಟ್ರಕ್ ಮಾಲಿಕರು ನಂ. ಎಂ.ಎಚ್./20/ಡಬ್ಲ್ಯೂ/6186, ಸಾ: ಹಡಪ್ಸರ, ತಾ॥ ಹವೇಲಿ, ಜಿ. ಪುಣೆ 2. ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂ. ಲಿ. ಎಸ್.ಎಸ್. ಫ್ರಂಟರೋಡ, ಬಿಜಾಪುರ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ ಶ್ರೀ ಮುಕುಂದ ರಾಮಚಂದ್ರ ಜಗತಾಪ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ 21–2–2011 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾರೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳನ್ನು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೇಮ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ದಲಿಂಗಪ್ಪ ಆಲೂರು
ಕಾರ್ಮಿಕ ಅಧಿಕಾರಿ ಮತ್ತು
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪ ವಿಭಾಗ–2, ವಿಜಾಪೂರ.

ಪಿ.ಆರ್. 915

URBAN DEVELOPMENT SECRETARIAT
NOTIFICATION
No. UDD/41/MNJ/2011, Bangalore, Dated 24-08-2011

Whereas the Government of Karnataka has sanctioned an improvement scheme for the formation of "Peripheral Ring Road Part-1 (PRR-1)" with providing Truck Terminals, B.M.T.C. Depots (Between Tumkur Road, Old Madras Road & Hosur Road) by the Bangalore Development Authority vide Government order No. UDD 399 MNX 2006, Bangalore, dated 23-04-2007, and there after

issued Final Notification vide No. UDD 399 MNX 2006, Bangalore dated 29-06-2007. As per this Notification the Special Additional Land Acquisition Officer, Bangalore Development Authority, Bangalore, was appointed to perform the functions of the Deputy Commissioner (Land Acquisition) under the said Land Acquisition Act and directed to take order for the acquisition of the said lands.

With a view to expedite the Land Acquisition process and in exercise of the powers conferred under Sub-Section (1) of Section 19 of the Bangalore Development Authority Act 1976 (Karnataka Act No. 12 of 1976) and powers conferred by Clause (c) of Section 3 and Section 7 of Land Acquisition Act 1894 (Central Act I Amendment) Act 1961 (Karnataka Act 17 of 1961) the following Land Acquisition officers, Bangalore Development Authority, Bangalore are hereby appointed henceforth to perform the functions of the Deputy Commissioner (Land Acquisition), under the said Land Acquisition Act in respect of the lands situated in the villages noted against the land acquisition officers.

Sl. No.	**Name of the Land Acquisition Officer**	**Name of the Villages/Hobli/Tq**
1	Special Land Acquisition Officer Bangalore Development Authority, Bangalore	1) Madanayakanahalli, Hanumantha Sagara, Kudaregere, Tammenahalli of Dasanapura Hobli, Bangalore North Tq. 2) Chikkabanawara of Yashwanthpura Hobli, Bangalore North Tq. 3) Soladevanahalli, Kempapura, Kalathammanahalli, Kasaghattapura, Bylakere, Mavallipura, Lingarajapura of Hesaraghatta Hobli, Bangalore North Tq. 4) Jarakabande Kaval, Ramagondanahalli, Avalahalli (Harohalli), Harohalli, Kenchenahalli, Vasudevapura, Venkatala, Manchenahalli, Vaderapura, Kogilu, Agrahara, Thirumenahalli, Chokkanahalli of Yelahanka Hobli, Bangalore North Tq. 5) Kattigenahalli of Jala Hobli, Bangalore North Tq. 6) Nagareshwara Nagenahalli, Kothanur of K.R. Pura Hobli, Bangalore East Tq.
2	Special Additional Land Acquisition Officer Bangalore Development Authority, Bangalore	1) Bairathi, Chikkagubbi, Doddagubbi, Bilishivale, Vaderahalli, Rampura, Aduru, Bidarahalli, Hirandahalli, Chimasandra, Avalahalli (Bandapura), Bidarena Agrahara, Dodda Banahalli, Kannamangala, Chikkabanahalli, Sigehalli, Kumbena Agrahara, Kadugodi, Channasandra, of Bidarahalli Hobli, Bangalore East Tq. 2) Nagondanahalli, Hagadur of K.R. Pura Hobli, Bangalore East Tq. 3) Khane Kandaya, Bellandur Amanikere, Valepura, Sorahunase, Varthur, Gunjur, Kachamaranahalli, Soolakunte, Kodathi of Varthur Hobli, Bangalore East Tq. 4) Chokksandra, Avalahalli, Gattihalli, Huskur, Gulimangala, Chikkanagamangala, Singena Agrahara of Sarjapura Hobli, Anekal Tq. 5) Kammasandra, Hebbgodi of Attibele Hobli, Anekal Tq.

By Order and in the name of the Governor of Karnataka

M.S. PREMACHANDRA,
Under Secretary to Government,
Urban Development Department.

PR-919

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪ ವಿಭಾಗ–2, ವಿಜಾಪೂರ

ಪ್ರಕಟಣೆ

ಸಂಖ್ಯೆ. ಕಾ.ಅ.ಬಿ.–2, ಕಾ.ನ.ಪ.ಮಪ್ರ.ಎಸ್.ಆರ್. ನಂ.–87/2011, ದಿನಾಂಕ 17ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀಮತಿ ಶಾಹೇದಾ ಬೇಗಂ ಗಂಡ ಸೈಯದ್ ಗೌಸ್, ಮತ್ತು ಇತರರು, ಸಾ॥ ಮಿರ್ದೆ ಗಲ್ಲಿ, ವಿಜಾಪುರ.

ವಿರುದ್ಧ

ಪ್ರತಿವಾದಿಗಳು :–

1. ದಿ ಸುಪ್ರಿನ್‌ಟೆಂಡೆಂಟ್ ಆಫ್ ಪೋಲೀಸ್, ಎಸ್.ಪಿ. ಆಫೀಸ್, ಗುಲ್ಬರ್ಗಾ
2. ಕರ್ನಾಟಕ ಸರ್ಕಾರದ ವಿಮಾ ಇಲಾಖೆ, ಬ್ರಾಂಚ್ ಆಫೀಸ್, ಬಾಗಲಕೋಟ ರೋಡ್, ವಿಜಾಪುರ.

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಸೈಯದ್ ಗೌಸ್ ತಂದೆ ಸೈಯದ್ ಮಹ್ಮದ ಹುಸೇನ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ 15–04–2011 ರಂದು ಅಪಘಾತಕ್ಕೀಡಾಗಿ ಮೃತರಾಗಿರುತ್ತಾರೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳನ್ನು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೇಮ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವಿಕರಿಸಲಾಗುವುದಿಲ್ಲ.

ಜಿ. ಸಿದ್ದಲಿಂಗಪ್ಪ ಆಲೂರು
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಕಾರ್ಮಿಕ ಅಧಿಕಾರಿ, ಉಪ ವಿಭಾಗ–2, ವಿಜಾಪೂರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪ ವಿಭಾಗ–2, ವಿಜಾಪೂರ

ಪ್ರಕಟಣೆ

ಸಂಖ್ಯೆ. ಕಾ.ಅ.ಬಿ.–2, ಕಾ.ನ.ಪ.ಮಪ್ರ.ಎಸ್.ಆರ್. ನಂ.–88/2011, ದಿನಾಂಕ 17ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀಮತಿ ಬಸವ್ವ ಗಂಡ ದೇವೇಂದ್ರಪ್ಪ ಗುಡಿಮನಿ, ಮತ್ತು ಇತರರು, ಸಾ॥ ಬಳವತ್, ತಾ॥ ಮುದ್ದೇಬಿಹಾಳ.

ವಿರುದ್ಧ

ಪ್ರತಿವಾದಿಗಳು :–

1. ಶ್ರೀ ಸೋಮನಗೌಡ ಎಸ್. ಪಾಟೀಲ್, ಸಾ॥ ಬಳವತ್, ತಾ॥ ಮುದ್ದೇಬಿಹಾಳ.
2. ದಿ ಬ್ರಾಂಚ್ ಮ್ಯಾನೇಜರ್, ಯುನೈಟೆಡ್ ಇನ್ಸುರೆನ್ಸ್ ಕಂ. ಲಿ. ವಿಜಾಪುರ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ದೇವೆಂದ್ರಪ್ಪ ತಂದೆ ಚಂದ್ರಪ್ಪ ಗುಡಿಮನಿ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ 10–11–2010 ರಂದು ಅಪಘಾತಕ್ಕೀಡಾಗಿ ಮೃತರಾಗಿರುತ್ತಾರೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳನ್ನು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೇಮ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವಿಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಕಾರ್ಮಿಕ ಅಧಿಕಾರಿ, ಉಪ ವಿಭಾಗ–2, ವಿಜಾಪೂರ.

ಪಿ.ಆರ್. 920

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ,

ಕೊಪ್ಪಳ ಜಿಲ್ಲೆ, ಕೊಪ್ಪಳ

ಪ್ರಕಟಣೆ

ಪ್ರಕರಣ ಸಂಖ್ಯೆ. ಕಾ.ಅಕೋ.ಕಾನಪ/ಮಪ್ರ–42/2011, ದಿನಾಂಕ 27ನೇ ಆಗಸ್ಟ್ 2011

ಅರ್ಜಿದಾರರು :–

1. ಅಂಬವ್ವ ಗಂ/ಮುತ್ತಣ್ಣ @ ಹನಮಪ್ಪ ಬಾಣಸಿ
2. ಮಲ್ಲಮ್ಮ ತಂ/ ಮುತ್ತಣ್ಣ @ ಹನಮಪ್ಪ ಬಾಣಸಿ
3. ಹೊಳಿಯಪ್ಪ ತಂ/ ಹನಮಪ್ಪ ಬಾಣಸಿ
4. ಫಕೀರಮ್ಮ ತಂ/ ಹೊಳಿಯಪ್ಪ ಬಾಣಸಿ
   ಸಾ: ಮೇಗೂರು, ತಾ: ಕುಷ್ಟಗಿ, ಜಿಲ್ಲೆ : ಕೊಪ್ಪಳ

ವಿರುದ್ಧ

ಪ್ರತಿವಾದಿಗಳು :–

1. ಶಿವುಕುಮಾರ ತಂ/ ರಾಜಶೇಖರಯ್ಯ ಇಲಾಮಠ ಲಾರಿ ಮಾಲೀಕರು ಮೆ. ಉಮಾ ಎಲೆಕ್ಟ್ರಿಕಲ್ ಬಸವೇಶ್ವರ ಸರ್ಕಲ್, ಸಾ: ಕುಷ್ಟಗಿ, ಜಿಲ್ಲೆ : ಕೊಪ್ಪಳ
2. RAYAL SUNDARAM ALLIANCE INSURANCE CO. Ltd., Channai-600002.

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ: ದಿ. ಮುತ್ತಣ್ಣ @ ಹನುಮಪ್ಪ ಬಾಣಸಿ ಎಂಬುವವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ 27–09–2010 (ಪಿ.ಎಂ. ರಿಪೋರ್ಟ್‌ನಂತೆ) ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ ಹೊಂದಿರುತ್ತಾರೆ, ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ ದಿ॥ ಮುತ್ತಣ್ಣ @ ಹನುಮಪ್ಪ ಬಾಣಸಿ ಇವರ ವಾರಸುದಾರರಾದ 1) ಅಂಬವ್ವ ಗಂ/ಮುತ್ತಣ್ಣ @ ಹನುಮಪ್ಪ ಬಾಣಸಿ 2) ಮಲ್ಲಮ್ಮ ತಂ/ಮುತ್ತಣ್ಣ @ ಹನುಮಪ್ಪ ಬಾಣಸಿ 3) ಹೊಳಿಯಪ್ಪ ತಂ/ಹನುಮಪ್ಪ ಬಾಣಸಿ 4) ಫಕೀರಮ್ಮ ತಂ/ಹೊಳಿಯಪ್ಪ ಬಾಣಸಿ ಸಾ॥ ಮೇಗೂರು, ತಾ॥ ಕುಷ್ಟಗಿ, ಜಿಲ್ಲೆ ಕೊಪ್ಪಳ ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಪಿ. ಮುನಿಯಪ್ಪ,
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಕೊಪ್ಪಳ ಜಿಲ್ಲೆ, ಕೊಪ್ಪಳ.

ಪಿ.ಆರ್. 926

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ,

ಉಪ ವಿಭಾಗ–1, ಬಳ್ಳಾರಿ

ಪ್ರಕಟಣೆ

ಸಂಖ್ಯೆ. ಕಾಅಬಿ–1, ಕಾ.ನಪ/ಸಿಆರ್–57/2011–704–05, ದಿನಾಂಕ 27ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀಮತಿ ರೋಹಿಣಿ ದೇವಿ @ ರೋಕ್ಷಮ್ಮ ಗಂಡ ದಿವಂಗತ ಕೆ. ಜಗನ್ನಾಥ
2. ಕೆ. ಪೂರ್ಣಕಲಾ
3. ಕೆ. ಭಾರ್ಗವಿ ಕಲಾ ತಂದೆ ದಿ॥ ಕೆ. ಜಗನ್ನಾಥ
   ವಾಸ : ಕೇರ್ ಆಫ್ ಎಂ. ಯರ್ರಿಸ್ವಾಮಿ
   ಎಲ್.ಐ.ಜಿ. 29, ತಿಲಕ್ ನಗರ್, ಕಂಟೋನ್‌ಮೆಂಟ್
   ಬಳ್ಳಾರಿ,
   ಶ್ರೀ ಡಿ.ಎಸ್.ಬಿ.ಎನ್. ವಕೀಲರು.

ವಿರುದ್ಧ

ಪ್ರತಿವಾದಿಗಳು :–

1. ಮೆ॥ ಬಾಲಾಜಿ ಟ್ರಾವೆಲ್ಸ್, ಬಸ್ಸು ಮಾಲೀಕರು, ನಂ. ಕೆಎ–34/4464/ ಎಲ್.ಐ.ಜಿ.–415, ಹೌಸಿಂಗ್ ಬೋರ್ಡ್ ಕಾಲೋನಿ, ಗಾಂಧಿನಗರ, ಬಳ್ಳಾರಿ.
2. ಮ್ಯಾನೇಜರ್, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.
3. ಡಿವಿಜನಲ್ ಕಂಟ್ರೋಲ್ ವಿಭಾಗೀಯ, ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ. ಬಳ್ಳಾರಿ.

ಶ್ರೀಮತಿ ರೋಹಿಣಿ ಇವರು ಮೃತನ ಹೆಂಡತಿಯಾಗಿದ್ದು, ಕೆ. ಪೂರ್ಣಕಲಾ ಹಾಗೂ ಕೆ. ಭಾರ್ಗವಿ ಕಲಾ ತಂದೆ ದಿ॥ ಜಗನ್ನಾಥ ಮೃತನ ಮಕ್ಕಳಾಗಿದ್ದು, ಶ್ರೀ ಜಗನ್ನಾಥ ರವರು ಪ್ರತಿವಾದಿಯವರ ಸಂಸ್ಥೆಯಲ್ಲಿ ದಿನಾಂಕ 14–12–2005 ರಂದು ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ ವಾಹನ

ಅಪಘಾತವಾಗಿರುವುದರಿಂದ ತೀವ್ರ ಗಾಯಗಳಿಗೀಡಾಗಿ ಮೃತಪಟ್ಟಿದ್ದಾನೆಂದು ತಿಳಿಸಿ ತಾವು ಮೃತನ ವಾರಸುದಾರರು ಹಾಗೂ ಅವಲಂಬಿತರೆಂದು ನಷ್ಟ ಪರಿಹಾರ ಕೋರಿ ದಾವಾ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಸಾರ್ವಜನಿಕರಿಗೂ ಹಾಗೂ ಸಂಬಂಧಿಕರಿಗೂ ತಿಳಿಯಪಡಿಸುವುದೇನೆಂದರೆ ಮೃತನ ವಾರಸುದಾರರು, ಅವಲಂಬಿತರು ಎಂದು ಪರಿಗಣಿಸಬೇಕೆಂದು ಬೇರೆ ಯಾರಾದರೂ ಕೋರುವುದಾದರೆ ಅಂಥವರು ಈ ಪ್ರಕಟಣೆಯನ್ನು ಕರ್ನಾಟಕ ರಾಜ್ಯ ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು ಹಾಗೂ ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ತಿಳಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮನ್ನ ಮಾಡಲಾಗುವುದಿಲ್ಲ.

ಹೆಚ್. ಗೋಪಾಲಗೌಡ,
ಕಾರ್ಮಿಕಾಧಿಕಾರಿ ಮತ್ತು
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಬಳ್ಳಾರಿ ಉಪ ವಿಭಾಗ–1, ಬಳ್ಳಾರಿ.

ಪಿ.ಆರ್. 927

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಪ್ರಕಟಣೆ

ಪ್ರ.ಸಂ. ಕಾಅದಾ : ಕಾನಪ : ಸಿಆರ್–128/11, ದಿನಾಂಕ 27ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀಮತಿ ಖಾದರ್ ಬಿ. ಕೋಂ ಲೇಟ್ ರಸೂಲ್ ಸಾಬ್
2. ಮಹ್ಮದ್ ಆಲೀ ಬಿನ್ ಲೇಟ್ ರಸೂಲ್ ಸಾಬ್, 23 ವರ್ಷ
3. ಸಲ್ಮಾ ಕೋಂ ಬಡೇನ್ ಸಾಬ್
4. ಮಹಬೂಬ್ ಅಲಿ ಬೀನ್ ಲೇಟ್ ರಸೂಲ್ ಸಾಬ್

ಮಜೀದ್ ಅಜುಂ ಎದುರು ಬಸವರಾಜಪೇಟೆ, ದಾವಣಗೆರೆ

ವಿರುದ್ಧ

ಪ್ರತಿವಾದಿಗಳು :–

1. ರಹಮತುಲ್ಲ ಬಿನ್, ಯೂಸೂಫ್ ಸಾಬ್ ಲಾರಿ ಮಾಲೀಕರು, ಕೆಎ–34/4559 5664 ಜಂಟಿಕಟ್ಟೆ, ನೂರಾನಿ ಮಸೀದ್ ಉಡಬಾಡ, ಇಮಾಂನಗರ, ದಾವಣಗೆರೆ
2. ವ್ಯವಸ್ಥಾಪಕ, ಶ್ರೀ ರಾಮ ಜನರಲ್ ಇನ್ಶ್ಯೂರೆನ್ಸ್ ಕಂ. ಲಿ. 10003–ಇ8 ಆರ್‌ಪಿಐಸಿ–1, ಇಂಡಸ್ಟ್ರೀಯಲ್ ಏರಿಯಾ, ಸೀತಾಪುರ, ಜಯಪುರ, ರಾಜಸ್ಥಾನ

ಶ್ರೀ/ಶ್ರೀಮತಿ (1) ಖಾದರ್ ಬಿ. (2) ಮಹ್ಮದ್ ಅಲಿ (3) ಸಲ್ಮ (4) ಮಹೋಬ್ ಅಲಿ, ಇವರುಗಳಾದ ನಾವು ಮೃತ ರಸೂಲ್ ಸಾಬ್ ಇವರ ಹೆಂಡತಿ ಮತ್ತು ಮಕ್ಕಳು ಎಂದೂ ಇವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ರಸೂಲ್ ಸಾಬ್ ರವರು ಒಂದನೇ ಪ್ರತಿವಾದಿಗಳಾದ ರಹಮತುಲ್ಲಾ ಇವರ ಲಾರಿಯಲ್ಲಿ ಕ್ಲೀನರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದೂ, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಈ ಪ್ರಕಟಣೆಯು ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು,
ಕಾರ್ಮಿಕ ನಷ್ಟ ಪರಿಹಾರ, ದಾವಣಗೆರೆ ಜಿಲ್ಲೆ, ದಾವಣಗೆರೆ

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಪ್ರಕಟಣೆ

ಪ್ರ.ಸಂ. ಕಾಅದಾ : ಕಾನಪ : ಸಿಆರ್–131/11, ದಿನಾಂಕ 27ನೇ ಆಗಸ್ಟ್ 2011

ಅರ್ಜಿದಾರರು :–

1. ಶ್ರೀಮತಿ ರೇಣುಕಮ್ಮ ಕೋಂ ಲೇಟ್ ರಾಜ್‌ಕುಮಾರ್
2. ಕುಮಾರಿ ಪ್ರೇಮ ಬಿನ್ ಲೇಟ್ ರಾಜ್‌ಕುಮಾರ್, 13 ವರ್ಷ
3. ಕು॥ ಸೋಮಶೇಖರ ಬಿನ್ ಲೇಟ್ ರಾಜ್‌ಕುಮಾರ್, 10 ವರ್ಷ
4. ಕು॥ ಜಯಲಕ್ಷ್ಮಿ ಬಿನ್ ಲೇಟ್ ರಾಜ್‌ಕುಮಾರ್, 9 ವರ್ಷ

ಶಿವಾನಂದಪ್ಪ ಬಡಾವಣೆ, ನ್ಯಾಮತಿ ಗ್ರಾಮ, ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆ

ವಿರುದ್ಧ

ಪ್ರತಿವಾದಿಗಳು :–

1. ರಮೇಶ್ ಬಿ. ನಾಯಕ್ ಬಿನ್ ಬುಲ್ಲಾ ನಾಯಕ್ ಬಸ್ಸು ಮಾಲೀಕರು, ನಂ. ಕೆ.ಎ.14ಬಿ–3663, ಶಿವಶಂಕರ ಮೋಟಾರ್ ಸರ್ವೀಸ್, ಕುವೆಂಪು ರಸ್ತೆ, ಶಿವಮೊಗ್ಗ ಟೌನ್ ತಾಲ್ಲೂಕ್
2. ದಿ ಡಿವಿಜನಲ್ ಮ್ಯಾನೇಜರ್ ಓರಿಯಂಟಲ್ ಇನ್ಶ್ಯೂರೆನ್ಸ್ ಕಂ. ಲಿ. ಡಿವಿಜನಲ್ ಆಫೀಸ್, ಪಿ.ಬಿ. ರಸ್ತೆ, ದಾವಣಗೆರೆ

ಶ್ರೀ/ಶ್ರೀಮತಿ (1) ರೇಣುಕಮ್ಮ, ಕುಮಾರಿ ಪ್ರೇಮ, ಸೋಮಶೇಖರ, ಜಯಲಕ್ಷ್ಮಿ ಇವರುಗಳಾದ ನಾವು ಮೃತ ರಾಜ್‌ಕುಮಾರ್ ಇವರ ಹೆಂಡತಿ ಮತ್ತು ಮಕ್ಕಳು ಎಂದೂ ಇವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ರಾಜ್‌ಕುಮಾರ್ ರವರು ಒಂದನೇ ಪ್ರತಿವಾದಿಗಳಾದ ರಮೇಶ್ ಬಿ. ನಾಯಕ್ ಇವರ ಬಸ್ಸು ರಲ್ಲಿ ಚಾಲಕ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದೂ, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯು ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು,
ಕಾರ್ಮಿಕ ನಷ್ಟ ಪರಿಹಾರ, ದಾವಣಗೆರೆ ಜಿಲ್ಲೆ, ದಾವಣಗೆರೆ

ಪಿ.ಆರ್. 928

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಂಇ 49 ಎಲ್‌ಆರ್‌ಎಂ 2011, ಬೆಂಗಳೂರು, ದಿನಾಂಕ 23ನೇ ಆಗಸ್ಟ್ 2011

ಶ್ರೀ ಸಾಯಿಪ್ರಿಯ ಶುಗರ್ಸ್ ಲಿಮಿಟೆಡ್, ಬಾಗಲಕೋಟೆ ಜಿಲ್ಲೆ, ಇವರಿಗೆ ಜಮಖಂಡಿ ತಾಲ್ಲೂಕು, ಹಿಪ್ಪರಗಿ ಗ್ರಾಮದ ರಿ.ಸ. ನಂ. 238/5 ಮತ್ತು ಇತರೆಗಳಲ್ಲಿ ಹಾಗೂ ಮೈಗೂರು ಗ್ರಾಮದ ರಿ.ಸ. ನಂ. 149/1 ಮತ್ತಿತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 50 ಎಕರೆ 29 ಗುಂಟೆ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಅಂದರೆ, ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಸಲುವಾಗಿ ನಮೂನೆ 15–ಎ ಮತ್ತು ನಮೂನೆ 15–ಎಎ, ರಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ, ಇವರ ಪತ್ರ ಸಂಖ್ಯೆ ಆರ್‌ಬಿ/ಕೆಎಲ್‌ಆರ್/ಸಿಆರ್–04/2011–12, ದಿನಾಂಕ 23–04–2011 ರಲ್ಲಿ ಪ್ರಸ್ತಾಪಿತ ಮೇಲ್ಕಂಡ ಜಮೀನನ್ನು ಖರೀದಿಸಲು ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಕಲಂ 109 (1) ರಡಿ ಅನುಮೋದನೆ/ವಿನಾಯಿತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನನ್ನು ಖರೀದಿಗೆ ಪಡೆಯಲು ಖಾತೆದಾರರಿಂದ ವ್ಯವಹರಿಸಿಕೊಂಡಿದ್ದು ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್.) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆಯು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಮತ್ತು 80ಕ್ಕೆ ವಿನಾಯಿತಿ ನೀಡಿ ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಶ್ರೀ ಸಾಯಿಪ್ರಿಯ ಶುಗರ್ಸ್ ಲಿಮಿಟೆಡ್, ಬಾಗಲಕೋಟೆ ಜಿಲ್ಲೆ, ಇವರಿಗೆ ಜಮಖಂಡಿ ತಾಲ್ಲೂಕು, ಹಿಪ್ಪರಗಿ ಗ್ರಾಮದ ರಿ.ಸ. ನಂ. 238/5 ಮತ್ತು ಇತರೆಗಳಲ್ಲಿ ಹಾಗೂ ಮೈಗೂರು ಗ್ರಾಮದ ರಿ.ಸ. ನಂ. 149/1 ಮತ್ತಿತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 50 ಎಕರೆ 29 ಗುಂಟೆ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಅಂದರೆ, ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಸಲುವಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109 (1ಎ) ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ:–

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ./ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.

4. ಈ ಅನುಮತಿಯು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ)

ಪಿ.ಆರ್. 929

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಾರಿಇ 171 ಸ್ವೀರಸ 2011, ಬೆಂಗಳೂರು, ದಿನಾಂಕ 3ನೇ ಸೆಪ್ಟೆಂಬರ್ 2011

ಸಾರ್ವಜನಿಕ ಮಾಹಿತಿ ಅರ್ಜಿಗಳ ವಿಲೇವಾರಿಯನ್ನು ಅಧಿನಿಯಮದನ್ವಯ ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡುವುದನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಉದ್ದೇಶದಿಂದ ರಾಜ್ಯ ಸಾರಿಗೆ ಸಚಿವಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಶ್ರೀ ಎಂ.ಹರಿಹರಸ್ವಾಮಿ, ಶಾಖಾಧಿಕಾರಿ ಮತ್ತು ಶ್ರೀ ಆರ್.ಎಸ್. ಶಿವಕುಮಾರ್, ಪೀಠಾಧಿಕಾರಿ, ಸಾರಿಗೆ–2 ಶಾಖೆ, ಸಹಾಯಕ ಮಾಹಿತಿ ಅಧಿಕಾರಿಯಾಗಿ ಶ್ರೀ ಟಿ.ಎನ್. ನರಸಿಂಹರಾಜು, ಹಿರಿಯ ಸಹಾಯಕ, ಸಾರಿಗೆ–2 ಶಾಖೆ ಇವರುಗಳನ್ನು ನೇಮಕಾತಿ ಮಾಡಿ ಸಾರಿಗೆ 55 ಸ್ವೀರಸ 2011 ಸಂಖ್ಯೆಯ ದಿನಾಂಕ 30–12–2010 ರ ಮತ್ತು ದಿನಾಂಕ 21–6–2011ರ ಅಧಿಸೂಚನೆಗಳಲ್ಲಿ ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಗಳಲ್ಲಿ ಹೊರಡಿಸಲಾದ ಅಂಶಗಳಲ್ಲಿ ಈ ಕೆಳಕಂಡ ಬದಲಾವಣೆ ಮಾಡಲಾಗಿದೆ.

ಕ್ರ.ಸಂ.	ರಾಜ್ಯ ಸಾರಿಗೆ ಸಚಿವಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ನೇಮಕಾತಿ ಮಾಡಲಾದ ಅಧಿಕಾರಿಗಳ ಹೆಸರು, ಹುದ್ದೆ ಇತ್ಯಾದಿ	ಷರಾ
1	ಶ್ರೀ ರಾಮಮೂರ್ತಿ, ಶಾಖಾಧಿಕಾರಿ, ಸಾರಿಗೆ–1 ಶಾಖೆ	ಶ್ರೀ ಎಂ. ಹರಿಹರಸ್ವಾಮಿ, ಶಾಖಾಧಿಕಾರಿ, ಸಾರಿಗೆ–1 ಶಾಖೆ ಇವರ ಪದೋನ್ನತಿಯಿಂದ ತೆರವಾದ ಸ್ಥಳಕ್ಕೆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಿಸಿದೆ.
2	ಶ್ರೀ ಆರ್. ಪ್ರಭುಶಂಕರ್, ಪೀಠಾಧಿಕಾರಿ, ಸಾರಿಗೆ–2 ಶಾಖೆ	ಶ್ರೀ ಆರ್.ಎಸ್. ಶಿವಕುಮಾರ್, ಪೀಠಾಧಿಕಾರಿ, ಸಾರಿಗೆ–2 ಶಾಖೆ ಇವರ ವರ್ಗಾವಣೆಯಿಂದ ತೆರವಾದ ಸ್ಥಳಕ್ಕೆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಿಸಿದೆ.
3	ಶ್ರೀಮತಿ ಸೌಭಾಗ್ಯ, ಹಿರಿಯ ಸಹಾಯಕಿ, ಸಾರಿಗೆ–2 ಶಾಖೆ	ಟಿ.ಎನ್. ನರಸಿಂಹರಾಜು, ಹಿರಿಯ ಸಹಾಯಕ, ಸಾರಿಗೆ–2 ಶಾಖೆ, ಇವರ ವರ್ಗಾವಣೆಯಿಂದ ತೆರವಾದ ಸ್ಥಳಕ್ಕೆ ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಿಸಿದೆ.

ದಿನಾಂಕ 30–12–2010 ಹಾಗೂ ದಿನಾಂಕ 21–6–2011 ರಲ್ಲಿ ಹೊರಡಿಸಲಾದ ಸಾರಿಇ 66 ಸ್ವೀರಸ 2011 ಸಂಖ್ಯೆಯ ಅಧಿಸೂಚನೆಗಳಲ್ಲಿ ಉಳಿದ ಯಾವ ಅಂಶಗಳ ಬದಲಾವಣೆಯೂ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಪಿ.ಆರ್. 930

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE- CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Sub: KVAT Act, 2003 – Clarification under Section 59(4) regarding the rate of tax applicable on 'drilling of borewells-' reg.,

Ref: Application dated: 25-01-2011 of Srinivasa Borewell Service No.5, New Extension, Kolar,-563 101 TIN : 29380787249

The registered dealer under the Act, Srinivasa Borewell Service Kolar have sought clarification regarding the rate of tax applicable on 'drilling of borewells-' reg.,

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR.250/2010-11, DATED 08.07.2011

It is clarified that 'sinking of borewells' is exempt from tax if it involves only pure labour work and that such activity would be taxable at 5% on the taxable turnover if it involves supply of steel casing pipes as per entry 12 of the Sixth Schedule to the Karnataka Value Added Tax Act, 2003.

PRADEEP SINGH KHAROLA
Commissioner of Commercial Taxes,
(Karnataka), Bangalore.

PR - 801

ಜಿಲ್ಲಾಧಿಕಾರಿಗಳರವರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

ನಂ. ಎಲ್ಎನ್‌ಡಿ. ಸಿಆರ್. 15/2011-12, ದಿನಾಂಕ : 02-01-2012

ಅಧಿಸೂಚನೆ

94ನೇ ನಿಯಮ 68(1)ನೇ ಪ್ರಕರಣದ ಮೇರೆಗೆ ಘೋಷಣೆ

ವಿಷಯ : ಮುಳಬಾಗಿಲು ತಾಲ್ಲೂಕು ಕಸಬಾ ಹೋಬಳಿ ಕದರೀಪುರ ಗ್ರಾಮದ ಸ.ನಂ. 43ರಲ್ಲಿ 3-00 ಎಕರೆ ಜಮೀನನ್ನು ಅಲ್ಪಸಂಖ್ಯಾತರ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಮಂಜೂರು ಮಾಡಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಉಲ್ಲೇಖ : ಸಹಾಯಕ ಕಮೀಷನರ್ ಕೋಲಾರ ರವರ ಪತ್ರ ಸಂಖ್ಯೆ ಎಲ್ಎನ್‌ಡಿ. ಸಿಆರ್. 12/11-12 ದಿನಾಂಕ : 26/04/11.

2. ತಹಶೀಲ್ದಾರ್ ಮುಳಬಾಗಿಲು ತಾಲ್ಲೂಕು ರವರ ವರದಿ ಸಂಖ್ಯೆ ಎಲ್ಎನ್‌ಡಿ.ಸಿಆರ್. 35/10-11, ದಿನಾಂಕ : 16/11/11.

ಸರ್ಕಾರದ ಸ್ವತ್ತಾಗಿರುವ ಹಾಗೂ ಈ ಕೆಳಗೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸರ್ಕಾರಿ ಹುಲ್ಲು ಹರಾಜು ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕಾಗಿ ಅಗತ್ಯವಿಲ್ಲವೆಂದು ಕಂಡುಬಂದಿರುವುದರಿಂದ ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಪ್ರತ್ಯಾಯೋಜನೆಗೊಂಡಿರುವುದರಿಂದ, ಸದರಿ ಅಧಿಕಾರವನ್ನು ಚಲಾಯಿಸಿ ಸದರಿ ಸರ್ಕಾರಿ ಹುಲ್ಲು ಹರಾಜು ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸದರಿ ಸರ್ಕಾರಿ ಹುಲ್ಲು ಹರಾಜು ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳಿಸಲು ಉದ್ದೇಶಿಸಿರುವುದಾಗಿ ಈ ಮೂಲಕ ಘೋಷಿಸುತ್ತೇನೆ.

ಸದರಿ ಸರ್ಕಾರಿ ಹುಲ್ಲು ಹರಾಜು ಪೂರ್ತಿ ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರೆ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವುದೇ ವ್ಯಕ್ತಿಯು ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು, ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ	:	ಕೋಲಾರ
ತಾಲ್ಲೂಕು	:	ಮುಳಬಾಗಿಲು
ಹೋಬಳಿ	:	ಕಸಬಾ
ಗ್ರಾಮ	:	ಕದರೀಪುರ

ಕದರೀಪುರ ಗ್ರಾಮದ ಸ.ನಂ. 43 ಸರ್ಕಾರಿ ಹುಲ್ಲು ಹರಾಜು ಜಮೀನಿನಲ್ಲಿ 3–00 ಎಕರೆಗೆ ಸಾರ್ವಜನಿಕರ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ	:	ರಸ್ತೆ
ಪಶ್ಚಿಮಕ್ಕೆ	:	ವಿರುಪಾಕ್ಷಿ ಗಡಿ
ಉತ್ತರಕ್ಕೆ	:	ರಸ್ತೆ
ದಕ್ಷಿಣಕ್ಕೆ	:	ರಸ್ತೆ

....

ಪಿ.ಆರ್. 01 ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಅಭಿಯಂತರರು (ವಿ)ರವರ ಕಛೇರಿ, ಉಪ ವಿಭಾಗ–1 ಬೃಹತ್ ಕಾಮಗಾರಿ ರಾಮನಗರ ವಿಭಾಗ, ಕವಿಪ್ರನಿನಿ, ಹಳೇ ಬಿ.ಎಂ.ರಸ್ತೆ, ರಾಮನಗರಂ–562 159, ಯೋಜನಾ ಪ್ರಕಟಣೆ

ಸಂಖ್ಯೆ : ಕಾಅ(ವಿ)/ಬೃಕಾವಿ(ರಾ)/2010–11/1030, ದಿನಾಂಕ : 11ನೇ ಜನವರಿ 2012

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ ಪ್ರಕರಣದ 67 ಮತ್ತು ಅಧಿನಿಯಮ 176ರ ಅನ್ವಯ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಯಮದ ಪ್ರಕರಣ 67(2)(C) ಹಾಗೂ 176ರ ಅನ್ವಯ ಈ ಮೂಲಕ ಯೋಜನೆಯ ವಿವರಗಳನ್ನು ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳು ಈ ರೀತಿ ಇವೆ.

ಯೋಜನೆಗಳ ವಿವರ :–

1) ಯೋಜನೆಯ ಹೆಸರು:–ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನಲ್ಲಿ ಉದ್ದೇಶಿತ 220/66/11/ಕೆ.ವಿ. ವಿದ್ಯುತ್ ಕೇಂದ್ರದಿಂದ 220 ಕೆ.ವಿ. ದ್ವಿ ಮಾರ್ಗಗೋಪುರಗಳ ಮೇಲೆ ಹಾಲಿ ಇರುವ 220 ಕೆ.ವಿ. ನೆಲಮಂಗಲ–ಅಂಚೆಪಾಳ್ಯ ಮಾರ್ಗದಿಂದ ಲಿಲೋ ಮಾರ್ಗದ ನಿರ್ಮಾಣ.
2) ಯೋಜನೆಯ ಪ್ರಯೋಜನಗಳು:–ಮಾಗಡಿ ತಾಲ್ಲೂಕು ಹಾಗೂ ಸುತ್ತ ಮುತ್ತಲ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಸುವುದು. ಹಾ, 220 ಕಿ.ವಿ. ಅಂಚೆಪಾಳ್ಯ ವಿದ್ಯುತ್ ಕೇಂದ್ರದ ಹೊರೆಯನ್ನು ಕಡಿಮೆ ಮಾಡುವುದು.
3) 220 ಕೆ.ವಿ. ಮಾರ್ಗ ಹಾದುಹೋಗುವ ಹಳ್ಳಿಗಳು ಮತ್ತು ಪ್ರದೇಶಗಳು:– ಮಾಗಡಿ ತಾಲ್ಲೊಕು, ಮಲ್ಲಸಂದ್ರ, ಶಿವನಸಂದ್ರ, ಕಲಾರಿ, ವರದಹಳ್ಳಿ, ಹನುಮೇಗೌಡನ ಪಾಳ್ಯ, ಗೊಲ್ಲರಹಟ್ಟಿ, ಕಲ್ಯಾ, ಶ್ರೀಪತಿಹಳ್ಳಿ, ಕೆಂಪಸಾಗರ ಮುಂತಾದ ಪ್ರದೇಶಗಳು.
4) ಅಂದಾಜು ವೆಚ್ಚ:–ಕೇಂದ್ರ:– ಸುಮಾರು 4106.54 ಲಕ್ಷಗಳು.
   ಮಾರ್ಗ:– ಸುಮಾರು 992.90 ಲಕ್ಷಗಳು

ಈ ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕಾರ್ಯಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್ ಅಧಿನಿಯಮ ಭಾಗ (III)ರ (ಕೇಂದ್ರಿಯ ಕಾಯಿದೆ 1885ರ 13)ನೇ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ನಿಗಮದ ಗಮನಕ್ಕೆ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 15 ದಿನಗಳ ಒಳಗೆ ಈ ಕೆಳ ಸಹಿದಾರರ ಕಛೇರಿಗೆ ಕಳುಹಿಸಬಹುದು.

ಎಸ್. ಮಹೇಶ್,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ)

ಪಿ.ಡಿ. ನಂ. 11 ಬೃಹತ್ ಕಾಮಗಾರಿ ರಾಮನಗರ ವಿಭಾಗ, ಕ.ವಿ.ಪ್ರ.ನಿ.ನಿ. ರಾಮನಗರ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಇಂಜಿನಿಯ್(ವಿ), ಬೃ.ಕಾ.ದ ವಿಭಾಗ, ಕ.ವಿ.ಪ್ರ.ನಿ.ನಿ., ಆನಂದ ರಾವ್ ವೃತ್ತ, ಬೆಂಗಳೂರು–09

ಪ್ರಕಟಣೆ

ಸಂಖ್ಯೆ : ಕಾ.ನಿ.ಇ/ಬೃ.ಕಾ.ದ.ವಿಭಾಗ/ಸಕಾಇಂ–6/2011–12/3519–20 ದಿನಾಂಕ : 12–01–2012

ಕವಿಪ್ರನಿನಿಯು 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ ಪ್ರಕರಣದ 67(ii)ರ ಅನ್ವಯ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಯಮದ ಪ್ರಕರಣ 67(ii)ಸಿ ರ ಅನ್ವಯ ಈ ಮೂಲಕ ಯೋಜನೆಗಳನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳು ಈ ರೀತಿ ಇವೆ.

(1) ಯೋಜನೆಯ ಹೆಸರು : ಕಾಚಮಾರನಹಳ್ಳಿಗೆ ಹೂಡಿ – ಚಂದಾಪುರ 66 ಕೆ.ವಿ., ಎಸ್.ಸಿ. ಮಾರ್ಗದಿಂದ ಲಿಲೋ ಆಗಿಸಲು 66 ಕೆ.ವಿ., ಹೂಡಿ–ಚಂದಾಪುರ ಟ್ಯಾಪಿಂಗ್ ಟವರ್ ನಿಂದ ಕಾಚಮಾರನಹಳ್ಳಿ ವಿದ್ಯುತ್ ಉಪಕೇಂದ್ರದವರೆಗೆ 0.5 ಕೆ.ಮೀಗಳ ದೂರಕ್ಕೆ 66 ಕೆವಿ ಲಿಲೋ ಓವರ್ ಹೆಡ್ ಮಾರ್ಗ ನಿರ್ಮಿಸುವುದು.

(2) ಪ್ರಮುಖ ಲಕ್ಷಣಗಳು :– ಉದ್ದೇಶಿತ 66/11 ಕೆ.ವಿ. ಕಾಚಮಾರನಹಳ್ಳಿ ಉಪವಿದ್ಯುತ್ ಕೇಂದ್ರಕ್ಕೆ ವಿದ್ಯುತ್ ಸರಬರಾಜು ಮಾಡುವುದು ಮತ್ತು ಮುಂದಿನ ವಿದ್ಯುತ್ ಬೇಡಿಕೆಗಳನ್ನು ಈಡೇರಿಸುವುದರ ಸಲುವಾಗಿ.

(3) ಮಾರ್ಗ ಹಾದು ಹೋಗುವ ಹಳ್ಳಿಗಳು :–ಕಾಚಮಾರನಹಳ್ಳಿ ಗ್ರಾಮದ ಸ.ನಂ. 12ರಲ್ಲಿ ನಿರ್ಮಿಸುವ ಉದ್ದೇಶಿತ ಮಿದ್ಯುತ್ ಉಪಕೇಂದ್ರದಿಂದ ಹಾಲಿಗ್ರಾಮದ ಸರಹದ್ದಿನಲ್ಲಿ ಹಾದು ಹೋಗಿರುವ ಹೂಡಿ–ಚಂದಾಪುರ 66 ಕೆವಿ ವಿದ್ಯುತ್ ಮಾರ್ಗದ ಟ್ಯಾಪಿಂಗ್ ಟವರ್ ವರೆಗೆ ಬರತತ್ಕಂತ ಪ್ರದೇಶಗಳು.

(4) ಅಂದಾಜು ವೆಚ್ಚ :– ರೂ. 129.96 ಲಕ್ಷಗಳು.

ಯೋಜನೆಗಳನ್ನು ಕಾರ್ಯಗೊಳಿಸಲು 1885ರ ಟೆಲಿಗ್ರಾಫ್ ಅಧಿನಿಯಮ (1885ರ13) ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ನಿಗಮದ ಪರಿಗಣನೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 15 ದಿನಗಳ ಒಳಗಾಗಿ ಕಾರ್ಯನಿರ್ವಾಹಕ ಇಂಜಿನಿಯರ (ವಿ), ಬೆಂಗಳೂರು ಬೃಹತ್ ಕಾಮಗಾರಿ ದಕ್ಷಿಣ ವಿಭಾಗ, ಕ.ವಿ.ಪ್ರ.ನಿ.ನಿ., ಆನಂದ ರಾವ್ ವೃತ್ತ, ಬೆಂಗಳೂರು–560 009 ಇವರಿಗೆ ಕಳುಹಿಸುವುದು.

ಇ. ಪ್ರಹ್ಲಾದ್,
ಕಾರ್ಯನಿರ್ವಾಹಕ ಇಂಜಿನಿಯ್(ವಿ),
ಬೃ.ಕಾ.ದ ವಿಭಾಗ, ಕ.ವಿ.ಪ್ರ.ನಿ.ನಿ., ಆನಂದ ರಾವ್ ವೃತ್ತ, ಬೆಂಗಳೂರು–09

ಪಿ.ಡಿ. 12

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಇಂಜಿನಿಯ್(ವಿ),ಬೃಹತ್ ಕಾಮಗಾರಿ ವಿಭಾಗ (ಉಡುಪಿ), ಕ.ವಿ.ಪ್ರ.ನಿ.ನಿ., ಕಾವೂರು, ಮಂಗಳೂರು

ಪ್ರಕಟಣೆ

ಸಂಖ್ಯೆ : ಕಾ.ನಿ.ಇಂ/ಬೃಕಾವಿ/ಉಡುಪಿ/2011–12, ದಿನಾಂಕ : –01–2012

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ 2003ರ ಅನ್ವಯ ಯೋಜನೆಯೊಂದನ್ನು ರೂಪಿಸಿದ್ದು, ಯೋಜನೆಯ ವಿವರಗಳನ್ನು ಸೆಕ್ಷನ್ 67(2)(C)ರ ಅನ್ವಯ ಸಮಸ್ತ ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸಲಾಗಿದ್ದು. ಈ ಯೋಜನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಯೋಜನೆಯ ಹೆಸರು :–ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ಮಿಯಾರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 110/33ಕೆ.ವಿ. ವಿದ್ಯುತ್ ಕೇಂದ್ರಕ್ಕೆ (Switching station) 220/110 ಕೆವಿ ಕೇಮಾರ್–ಗುರುವಾಯನಕೆರೆ ಬಹುಮಂಡಲ ವಿದ್ಯುತ್ ಪ್ರಸರಣ ಮಾರ್ಗವನ್ನು ಲಿಲೊ ಮಾಡುವ ಮೂಲಕ 110 ಕೆವಿ ದ್ವಿಪ್ರಸರಣ ವಿದ್ಯುತ್ ಮಾರ್ಗದ ನಿರ್ಮಾಣ.

ಪ್ರಮುಖ ಲಕ್ಷಣಗಳು :–ಮೆ॥ ಜಿವಿಪಿ. 1 ಇನ್‌ಫ್ರಾ ಪ್ರೊಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮೆ॥ ಜ್ಯೋತಿ ಗ್ರೀನ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಂದ ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು, ಜಾರ್ಕಳ ಗ್ರಾಮದ ಎಣ್ಣೆಹೊಳೆ ಮಿನಿ ಹೈಡಲ್ ಸ್ಕೀಮಿನಿಂದ 27 ಮೆಗಾ ವ್ಯಾಟ್ (15 ಮೆವಾ ಮತ್ತು 12 ಮೆವಾ) ಮತ್ತು ಮೇ. ಜಿವಿಪಿ–II ಇನ್‌ಫ್ರಾ ಪ್ರೊಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಂದ ಕಾರ್ಕಳ ತಾಲ್ಲೂಕು ದುರ್ಗಾ ಮಿನಿ ಹೈಡಲ್ ಸ್ಕೀಮಿನಿಂದ 10 ಮೆಗಾ ವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ರವಾನಿಸಲು 110 ಕೆವಿ ಕೇಮಾರ್–ಗುರುವಾಯನಕೆರೆ ಬಹುಮಂಡಲ ವಿದ್ಯುತ್ ಪ್ರಸರಣ ಮಾರ್ಗವನ್ನು ಗೋಪುರ ಸಂಖ್ಯೆ 38–39ರಲ್ಲಿ ಲಿಲೊ ಮಾಡುವ ಮೂಲಕ ಕೈಗೊಳ್ಳಲಾದ ಈ ಪ್ರಸ್ತಾವಿತ ವಿದ್ಯುತ್ ಮಾರ್ಗವು 22 ಮೀಟರ್ ಕಾರಿಡಾರ್ ಅನ್ನು ಹೊಂದಿರುತ್ತದೆ. ಸಾಂಪ್ರದಾಯಿಕವಾದ ಜಿ.ಐ. ಲ್ಯಾಟೀಸ್ ಮಾದರಿಯ ಗೋಪುರಗಳ ಮೇಲೆ ಲಿಂಕ್ಸ್ ಎ.ಸಿ.ಎಸ್.ಆರ್. ವಾಹಕವನ್ನು

ಉಪಯೋಗಿಸಿ ಸುಮಾರು 3.5 ಕಿ.ಮೀ. ಉದ್ದದ 110 ಕೆ.ವಿ. ದ್ವಿಪ್ರಸರಣ ವಿದ್ಯುತ್ ಮಾರ್ಗವು ಮಿಯಾರ್ ಗ್ರಾಮದ ಸರ್ವೆ ನಂಬರ್‌ಗಳಾದ 24, 27,28, 30, 124, 125 128, 130, 240, 300, 313, 358, 359, 353, 378, 380, 383, 417, 510, 517 ಮೂಲಕ ಹಾದು ಹೋಗುತ್ತದೆ.

ಅಂದಾಜು ವೆಚ್ಚ : (ಪ್ರಸರಣ ಮಾರ್ಗ ಮತ್ತು ವಿದ್ಯುತ್ ಕೇಂದ್ರ) : ಸಾಮಗ್ರಿ ಮತ್ತು ಲೇಬರ್ ವೆಚ್ಚ ಸೇರಿಸಿ ಅಂದಾಜು 450 ಲಕ್ಷ ರೂಪಾಯಿಗಳು. ಮೇಲೆ ತಿಳಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಭಾರತೀಯ ಟೆಲಿಗ್ರಾಫಿಕ್ ಕಾಯಿದೆ 1885(13/1885) ಪರಿಚ್ಛೇಧ–III ರ ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ. ಸದರಿ ಯೋಜನೆಯ ಬಗ್ಗೆ ಯಾವುದೇ ವಿಸಂಗತಿಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಲು ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ ವಿಭಾಗ (ಉಡುಪಿ), ಕವಿಪ್ರನಿನಿ, ಕಾವೂರು, ಮಂಗಳೂರು–15 ಇವರ ಕಛೇರಿಗೆ ಪ್ರಕಟಣೆಯ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ಸಲ್ಲಿಸತಕ್ಕದ್ದು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಬೃಹತ್ ಕಾಮಗಾರಿ ವಿಭಾಗ (ಉಡುಪಿ),
ಕ.ವಿ.ಪ್ರ.ನಿ.ನಿ., ಕಾವೂರು, ಮಂಗಳೂರು

ಪಿ.ಡಿ. 13

ಸಮಾಜ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಕಇ 158 ಬಿಇಟಿ 2011, ಬೆಂಗಳೂರು, ದಿನಾಂಕ : 21ನೇ ಡಿಸೆಂಬರ್, 2011.

ಹಿಂದುಳಿದ ವರ್ಗಗಳ ಇಲಾಖೆಯ ಗ್ರೂಪ್–ಬಿ ಅಧಿಕಾರಿಗಳ ದಿನಾಂಕ : 01–01–2010, ಮತ್ತು 01–01–2011ನೇ ಸಾಲುಗಳ ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸಲಾಗಿದೆ.

ಕ್ರ. ಸಂ.	ಅಧಿಕಾರಿಗಳ ಹೆಸರು	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಹಾಲಿ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಾಂಕ	ಷರಾ
1	ಶ್ರೀಧರ ಮೂಲ್ಯ	10–04–1951	25–01–1978	31–08–2001	
2	ಎಸ್. ಬಿ. ಹುಂಡೇಕರ್	01–06–1951	23–01–1978	06–09–2001	
3	ಎಸ್. ಜಿ. ಧನಶೆಟ್ಟಿ	20–08–1951	17–01–1978	05–09–2001	
4	ಪಿ. ಬಿ. ಹೆಗಡೆ	01–06–1951	01–04–1976	05–09–2001	
5	ಡಿ. ಕೆ. ಸಣ್ಣನಾಯ್ಕ	13–04–1953	15–10–1981	31–08–2001	
6	ಎಸ್. ಎಸ್. ಕಾಳೆ	01–06–1951	12–05–1976	16–05–2003	

ಸದರಿ ಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ಅಂಶಗಳ ಕುರಿತಂತೆ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಲಿಖಿತ ಮೂಲಕ ಅಧಿಕೃತ ಜ್ಞಾಪನವನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ಸರ್ಕಾರದ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, 2ನೇ ಮಹಡಿ, ಕೊಠಡಿ ಸಂಖ್ಯೆ : 229 ಡಾ|| ಬಿ. ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560 001 ಇವರಿಗೆ ಸಲ್ಲಿಸತಕ್ಕದ್ದು. ಉಲ್ಲೇಖಿತ ಅವಧಿಯ ನಂತರ ಸ್ವೀಕರಿಸುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ಎಂ. ಬಾಟೆ,
ಸರ್ಕಾರದ ಅಧೀನ ಕಾರ್ಯದರ್ಶಿ–3,
ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್. 15

IN THE COURT OF COMMISSIONER FOR WORKMEN'S COMPENSATION BIDAR

PROCLAIMATION

No. LOB/WCA/Cr-. F 01/2012

Applicants :		Respondents :
1. Moinuddin S/o Yasin Sab. Khamargi Age : 40 years Occu : Labour R/o Village Mannakhelli, Tq. Humnabad, Dist. Bidar and 03 others	V/s	1. Syed Rahmatullah Quadri. S/o Syed Kaleemulla Quadri Age : Major, Occup : Business, R/o Bagdal, Tq. & Dist. Bidar 2. United India Insurance Co. Ltd. Bangalore.

Sri/Smt Moinuddin W/o. F/o. S/o. Yasin Sab Khamargi R/o. Village Manna Khalli, Tq. Humnabad, Dist Bidar, have/has filed application in this Court claiming compensation stating that late Quamaruddin was working as Cleaner Under the Respondent No. 1 he met with an accident arising out of and during the course of employment as a result he died on. . . . .

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Dharanesh,
Commissioner for Workmen's Compensation, Bidar.

P.R. 16

ಅಧೀಕ್ಷಕ ಅಭಿಯಂತರ ರವರ ಕಛೇರಿ ಸಣ್ಣ ನೀರಾವರಿ ವೃತ್ತ, ಗುಲಬರ್ಗಾ

ಅಧಿಸೂಚನೆ

ಸಂಖ್ಯೆ : ಅಅ/ಸನೀವೃ/ಗು/ಸಿ–2/2011–12/4650, ದಿನಾಂಕ : 30ನೇ ಡಿಸೆಂಬರ್, 2011.

2005ರ ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಕಾಯ್ದೆ 22)ರ ಅಡಿಯಲ್ಲಿ ಅಧೀಕ್ಷಕ ಅಭಿಯಂತರು, ಸಣ್ಣ ನೀರಾವರಿ ವೃತ್ತ, ಗುಲಬರ್ಗಾ ಕಛೇರಿಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಸದರಿ ಅಧಿನಿಯಮದ ಸೆಕ್ಷನ್ 5(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಅಧಿಕಾರಿಗಳನ್ನು "ಸಾರ್ವಜನಿಕ ಮಾಹಿತಿ ಅಧಿಕಾರಿ" ಹಾಗೂ ಸೆಕ್ಷನ್ 19(1)ರಡಿಯಲ್ಲಿ "ಮೇಲ್ಮನವಿ ಪ್ರಾಧಿಕಾರ" ಎಂದು ನೇಮಕ ಮಾಡಲಾಗಿದೆ.

ಕ್ರ. ಸಂ.	ಕಛೇರಿ ಮತ್ತು ವಿಳಾಸ	ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1)	ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಸೆಕ್ಷನ್ 5(2)	ಮೇಲ್ಮನವಿ ಪ್ರಾಧಿಕಾರ ಸೆಕ್ಷನ್ 19(1)
1	2	3	4	5
1	ಅಧೀಕ್ಷಕ ಅಭಿಯಂತರರು ಸಣ್ಣ ನೀರಾವರಿ ವೃತ್ತ, ಗುಲಬರ್ಗಾ, 08472–221466, 231473	ಶ್ರೀ ಬಿ. ಪ್ರಕಾಶ ಶ್ರೀಹರಿ, ಅಧೀಕ್ಷಕ ಅಭಿಯಂತರರು ಸಣ್ಣ ನೀರಾವರಿ ವೃತ್ತ, ಗುಲಬರ್ಗಾ	ಶ್ರೀ ಅಮರನಾಥ ಪತಂಗೆ ತಾಂತ್ರಿಕ ಸಹಾಯಕ ಸಣ್ಣ ನೀರಾವರಿ ವೃತ್ತ, ಗುಲಬರ್ಗಾ	ಮುಖ್ಯ ಅಭಿಯಂತರರು ಸಣ್ಣ ನೀರಾವರಿ (ಉ) ವಲಯ ಬಿಜಾಪೂರ. 08352–277922, 277095

ಬಿ. ಪ್ರಕಾಶ ಶ್ರೀಹರಿ,
ಅಧೀಕ್ಷಕ ಅಭಿಯಂತರರು,
ಸಣ್ಣ ನೀರಾವರಿ ವೃತ್ತ, ಗುಲಬರ್ಗಾ.

ಪಿ.ಆರ್. 17

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ : ಸಮಾಪನೆಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘ ನಿ, ಗುಂಡಗತ್ತಿ, ಹರಪನಹಳ್ಳಿ–ತಾ॥ ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ :
1) ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ, ಇವರ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–44/2000–01 ದಿನಾಂಕ : 29–09–2001
2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ, ಇವರ ಪತ್ರ ಸಂ : ಸನಿ/ಹೆಚ್‌ಆರ್‌ಪಿ/ಸಮಾಪನೆ/ ಹಾಉಸಸಂನಿ/ ಗುಂಡಗತ್ತಿ/10–11. ದಿನಾಂಕ : 02–04–2011. ಹಾಗೂ ದಿನಾಂಕ : 26–12–2011.

ಪ್ರಸ್ತಾವನೆ :–

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ : ಎಆರ್‌ಹೆಚ್/14714/1976–77 ದಿನಾಂಕ: 09–03–1976ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದ ರಿಂದ ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರು ದಿನಾಂಕ : 29–09–2001ರ ಆದೇಶದಲ್ಲಿ ಸಮಾಪನೆಗೊಳಿಸಿ ಮಾರ್ಗವಿಸ್ತರಣಾಧಿಕಾರಿ,

ಶಿವಮೊಗ್ಗ ಹಾಲು ಒಕ್ಕೂಟ, ಶಿವಮೊಗ್ಗ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಈ ಮಧ್ಯ ಉಲ್ಲೇಖ 2ರ ದಿನಾಂಕ: 02–04–2011ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರು ಸದರಿ ಸಂಘವನ್ನು ಪುನಃಶ್ಚೇತನಗೊಳಿಸಲು ಶಿಫಾರಸ್ ಮಾಡಿದ್ದರು, ಆದರೆ ಸದರಿ ಸಂಘ ಸಮಾಪನೆಗೊಂಡು ಹತ್ತು ವರ್ಷಗಳು ಗತಿಸಿದ್ದು ಪುನಃಶ್ಚೇತನಗೊಂಡರೆ ಮತ್ತೆ ಸ್ಥಗಿತಗೊಳ್ಳುವ ಸಂಭವವಿರುವುದರಿಂದ ಸಂಘದ ನೋಂದಣಿ ಸಂಖ್ಯೆ ರದ್ದುಪಡಿಸಲು ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಕೋರಿದ ಮೇರೆಗೆ ದಿನಾಂಕ : 26–12–2011ರ ಉಲ್ಲೇಖ (2)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರು ಶಿಫಾರಸ್ಸು ಮಾಡಿ ಸಮಾಪನಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ : ಡಿಆರ್:ಡಿವಿಜಿ:ನೋಸಂರ/ಸಿಆರ್–44/2000–01, ದಿನಾಂಕ : 31–12–2011

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಎಂಡಬ್ಲ್ಯೂ/69/ಸಿಎಲ್ಎಂ/2001, ದಿನಾಂಕ : 21–11–2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಗುಂಡಗತ್ತಿ, ಹರಪನಹಳ್ಳಿ–ತಾ॥ ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ. ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳು ನಿಂತು ಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರ ಕಚೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ : 31–12–2011ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್. ನಂ. 20

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರು,
ದ.ಕ. ಉಪವಿಭಾಗ–2 ಬೆಂದೂರ್ ವೆಲ್ ವೃತ್ತ, ಕಂಕನಾಡಿ, ಮಂಗಳೂರು–2 ಇವರ ನ್ಯಾಯಾಲಯ.

ಅಧಿಸೂಚನೆ

ಸಂಖ್ಯೆ : ಡಬ್ಲ್ಯೂಸಿಎ/ಎಸ್ಆರ್–1/2012 ಎಸ, ದಿನಾಂಕ : 06–01–2012.

ಅರ್ಜಿದಾರರು

1. ಶ್ರೀಮತಿ ಕಾತಿಜಮ್ಮ ಮೃತ ದಿ॥ ಮಹಮ್ಮದ್‌ರವರ ಮಡದಿ
2. ವಹೀದಾಬಾನು ಮೃತ ದಿ॥ ಮಹಮ್ಮದ್‌ರವರ ಮಗಳು
3. ಸಮೀದ ಬಾನು ಮೃತ ದಿ॥ ಮಹಮ್ಮದ್‌ರವರ ಮಗಳು
4. ಜುಭೇದ ಮೃತ ದಿ॥ ಮಹಮ್ಮದ್‌ರವರ ಮಗಳು
5. ರಜಯೊ ಮೃತ ದಿ॥ ಮಹಮ್ಮದ್‌ರವರ ಮಗಳು
6. ರೆಹನಾ ಮೃತ ದಿ॥ ಮಹಮ್ಮದ್‌ರವರ ಮಗಳು
7. ಸುಮಯ್ಯ ಮೃತ ದಿ॥ ಮಹಮ್ಮದ್‌ರವರ ಮಗಳು
8. ಆರೀಫ್ ಮೃತ ದಿ॥ ಮಹಮ್ಮದ್‌ರವರ ಮಗ

ಜಲಪಾಡಿ ಹೌಸ್ ಕೆ.ಇ.ಬಿ. ಜಂಕ್ಷನ್ ಹತ್ತಿರ ಬಂಟ್ವಾಳ ತಾಲ್ಲೂಕು.

ಪ್ರತಿವಾದಿಗಳು

1. ಶ್ರೀ ಟಿ. ಕೆ. ಕರೀಂ S/o ಮೃತ ಇಬ್ರಾಹಿಂ ಪ್ರಾಯ 57 ವರ್ಷ, ನವಾಜ್ ಮಂಜಲ್, ತುಂಬೆ ವಿಲೇಜ್, ಬಂಟ್ವಾಳ ತಾಲ್ಲೂಕು.
2. ದಿ ಡಿವಿಜನಲ್ ಮೆನೇಜರ್ ನ್ಯಾಶನಲ್ ಇನ್ಸೂರೆನ್ಸ್ ಕಂ. ಲಿ. ಬ್ರಾಂಚ್ ಆಫೀಸ್, 2ನೇ ಮಹಡಿ ಗಣೇಶ ಬಿಲ್ಡಿಂಗ್, ಬಿ.ಸಿ.ರೋಡ್, ಬಂಟ್ವಾಳ ತಾಲ್ಲೂಕು.

ಅರ್ಜಿದಾರರಾದ ಶ್ರೀಮತಿ ಕಾತಿಜಮ್ಮ ಇವರು ತಮ್ಮ ಗಂಡನಾದ ಶ್ರೀ ಬಿ. ಮಹಮ್ಮದ್ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ : 30–09–2011ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೇಮು ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಎಂ. ಆನಂದಮೂರ್ತಿ,
ಕಾರ್ಮಿಕ ಅಧಿಕಾರಿ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ, ಉಪವಿಭಾಗ–2, ಮಂಗಳೂರು.

ಪಿ.ಆರ್. ನಂ. 22

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಂಇ 113 ಎಲ್‌ಆರ್‌ಎಂ 2011, ಬೆಂಗಳೂರು, ದಿನಾಂಕ : 22ನೇ ಡಿಸೆಂಬರ್, 2011.

ಕಾರ್ಯದರ್ಶಿ, ಮರಡಿಯೂರು ಆಕ್ಸಿಲಿಯಂ ಸೊಸೈಟಿ ಹಾರನಹಳ್ಳಿ ಹೋಬಳಿ, ಪಿರಿಯಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ. ಇವರು ಶೈಕ್ಷಣಿಕ ಉದ್ದೇಶಕ್ಕಾಗಿ ಸ.ನಂ. 15/1 ರಲ್ಲಿ 3.00 ಎಕರೆ ಸ.ನಂ. 16/3ರಲ್ಲಿ 2 ಎಕರೆ 20 ಗುಂಟೆ ವಿಸ್ತೀರ್ಣದ ಭೂಮಿಯನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿ, ಮೈಸೂರು, ಇವರು ಅಧಿಕೃತ ಜ್ಞಾಪನ ಸಂಖ್ಯೆ : ಎಲ್‌ಆರ್‌ಎಫ್/ಎಸ್‌ಪಿಎಲ್/13/2009-10, ದಿನಾಂಕ : 16-12-2009ರಲ್ಲಿ ಕರ್ನಾಟಕ ಭೂ ಸುಧಾರಣೆ ಅಧಿನಿಯಮ (1961)ದ ಕಲಂ 109 (1)ರ ಮೇರೆಗೆ ಖರೀದಿಸಲು ಅನುಮತಿ ನೀಡಿ, ಸದರಿ ಉದ್ದೇಶವನ್ನು ಎರಡು ವರ್ಷಗಳೊಳಗಾಗಿ ಪೂರೈಸುವಂತೆ ಷರತ್ತು ವಿಧಿಸಿದ್ದರು. ಆದರೆ ಅರ್ಜಿದಾರರು ಇದುವರೆಗೆ ಉಲ್ಲೇಖಿತ ಭೂಮಿಯನ್ನು ನಿಗದಿತ ಉದ್ದೇಶಕ್ಕೆ ಬಳಸಿಕೊಂಡಿರುವುದಿಲ್ಲ. ಈ ಕುರಿತಂತೆ ಅರ್ಜಿದಾರರು ದಿನಾಂಕ : 15-09-2011ರ ಮನವಿಯಲ್ಲಿ ನೀಡಿರುವ ಕಾರಣಗಳ ಹಿನ್ನೆಲೆಯಲ್ಲಿ ಪರಿಶೀಸಿದ ನಂತರ ಸಂಬಂಧಪಟ್ಟ ಉದ್ದೇಶ ಪೂರೈಸಿಕೊಳ್ಳಲು ದಿನಾಂಕ : 16-12-2011 ರಿಂದ ಅನ್ವಯವಾಗುವಂತೆ ಇನ್ನೂ ಒಂದು ವರ್ಷ ಕಾಲಾವಧಿ ವಿಸ್ತರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಎನ್. ನಾರಾಯಣಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ)

ಪಿ.ಆರ್. ನಂ. 23

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಂಇ 103 ಎಲ್‌ಆರ್‌ಎಂ 2011, ಬೆಂಗಳೂರು, ದಿನಾಂಕ : 23ನೇ ಡಿಸೆಂಬರ್, 2011.

ಚಾಂಪಿಯನ್ ಎಜುಕೇಷನ್ ಟ್ರಸ್ಟ್, ಬೆಂಗಳೂರು, ಇವರಿಗೆ ಬೆಂಗಳೂರು ನಗರ ಜಿಲ್ಲೆ, ಆನೇಕಲ್, ತಾಲ್ಲೂಕು, ಸರ್ಜಾಪುರ ಹೋಬಳಿ, ಹೆಗ್ಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 46/1, 46/2, 46/3, 46/4, 46/5, 46/6, 48, 49/1, 49/2, 49/4, 50, 51/1, 51/2, 51/3, 51/4, 52, ಮತ್ತು 55ರಲ್ಲಿ ಒಟ್ಟು 19 ಎಕರೆ 29 ಗುಂಟೆ ಜಮೀನನ್ನು **ಶೈಕ್ಷಣಿಕ ಉದ್ದೇಶಕ್ಕಾಗಿ** ಖರೀದಿಸಲು, ನಮೂನೆ 15-ಎ ಮತ್ತು ನಮೂನೆ 15-ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಇವರ ಪತ್ರ ಸಂಖ್ಯೆ : ಎಲ್ ಆರ್ ಎಫ್ (109)(ಎ)ಸಿಆರ್.7/2011-12 ದಿನಾಂಕ : 15-12-2011ರಲ್ಲಿ ಪ್ರಸ್ತಾಪಿತ ಮೇಲ್ಕಂಡ ಜಮೀನನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆ (ತಿದ್ದುಪಡಿ) 2005ರ ಕಲಂ 109 (i)(iv)ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನನ್ನು ಖರೀದಿಸಲು ಖಾತೆದಾರರಿಂದ ವ್ಯವಹರಿಸಿಕೊಂಡಿದ್ದು ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿರ್ಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1)ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆಯು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38-ಬಿ ಮತ್ತು 38-ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ, ಅಥವಾ 80ಕ್ಕೆ ವಿನಾಯಿತಿ ನೀಡಿ ಚಾಂಪಿಯನ್ ಎಜುಕೇಷನ್ ಟ್ರಸ್ಟ್, ಬೆಂಗಳೂರು, ಇವರಿಗೆ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹೆಗ್ಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 46/1, 46/2, 46/3, 46/4, 46/5, 46/6, 48, 49/1, 49/2, 49/4, 50, 51/1, 51/2, 51/3, 51/4, 52, ಮತ್ತು 55ರಲ್ಲಿ ಒಟ್ಟು 19 ಎಕರೆ 29 ಗುಂಟೆ ಜಮೀನನ್ನು **ಶೈಕ್ಷಣಿಕ ಉದ್ದೇಶಕ್ಕಾಗಿ** ಖರೀದಿಸಲು, ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(i)(iv)ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ :-

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1956ರ ಕಲಂ 3ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಅಪ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.

4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನಿಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಎನ್. ನಾರಾಯಣಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. ನಂ. 24

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಾರ್ಯಾಲಯ

ವಿಷಯ : ಸಮಾಪನೆಯಲ್ಲಿರುವ ಬಗ್ಗನಡು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬಗ್ಗನಡು, ಹಿರಿಯೂರು ತಾಲ್ಲೂಕು ಇದರ ನೋಂದಣಿ ರದ್ಧತಿ ಮಾಡುವ ಬಗ್ಗೆ.

ಉಲ್ಲೇಖ : 1) ಈ ಕಛೇರಿ ಆದೇಶ ಸಂಖ್ಯೆ ಡಿಆರ್‌ಡಿ/ಎಲ್ ಕ್ಯೂಡಿ/ಸಿಆರ್/69/2009–10 ದಿನಾಂಕ : 31–03–2011.
2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರ ಪತ್ರದ ಸಂ/ಸನಿ/30/ರದ್ಧತಿ/ಸಿಆರ್/2011–12 ದಿನಾಂಕ : 29–11–2011.

ಪ್ರಸ್ತಾವನೆ :–

ಪ್ರಸ್ತುತ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಬಗ್ಗನಡು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬಗ್ಗನಡು, ಹಿರಿಯೂರು ತಾಲ್ಲೂಕು ಇದರ ನೋಂದಣಿ ಸಂಖ್ಯೆ/ಸನಿ30/51/ಆರ್‌ಜಿಎನ್/30460/2000–01 ದಿನಾಂಕ : 06–12–2000 ರಂದು ನೋಂದಣಿಯಾಗಿದ್ದು, ಸಂಘವು 2001–02 ರಿಂದ ಯಾವುದೇ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸದೇ ಸ್ಥಗಿತಗೊಂಡಿದ್ದು, ಉಲ್ಲೇಖ (1)ರ ಆದೇಶದಲ್ಲಿ ಸಂಘವನ್ನು ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯೂರು ತಾಲ್ಲೂಕು ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಸಮಾಪನಾಧಿಕಾರಿಗಳು ಸಂಘದ ಸದಸ್ಯರುಗಳಿಗೆ ಸಂಘದ ಪುನಃಶ್ಚೇತನದ ಬಗ್ಗೆ ಒಲವು ಇಲ್ಲದಿರುವುದನ್ನು ಮನಗಂಡು ದಿನಾಂಕ : 24–11–2011ರಂದು ನಡೆದಿದ್ದ ಸಮಾಪನಾಧಿಕಾರಿಗಳ ನಡವಳಿಕೆ ರೀತ್ಯಾ ಬರತಕ್ಕ ಆಸ್ತಿಗಳನ್ನು ನಷ್ಟಕ್ಕೆ ವರ್ಗಾಯಿಸಿ ತೀರಿಸತಕ್ಕ ಜವಾಬ್ದಾರಿಗಳನ್ನು ಹೊಂದಾಣಿಕೆ ಮಾಡಿ ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ದಿನಾಂಕ ; 24–11–2011ರ ಅಂತ್ಯಕ್ಕೆ ಶೂನ್ಯ ಗೊಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಂಘವನ್ನು ಯಥಾ ಸ್ಥಿಯಲ್ಲಿ ಮುಂದುವರಿಸಿದಲ್ಲಿ ಸಂಘದ ಸದಸ್ಯರಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನ ಇಲ್ಲವೆಂದು ಪರಿಗಣಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಸಮಾಪನಾಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರು ಉಲ್ಲೇಖ (2)ರ ಪತ್ರದಲ್ಲಿ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿದೆ. ಸಮಾಪನಾಧಿಕಾರಿಗಳು ದಿನಾಂಕ : 24–11–2011ರಂದು ನಡೆಸಿರುವ ಸಮಾಪನಾ ನಡವಳಿ ಸ್ವಯಂ ವೇದ್ಯವಾಗಿರುವುದರಿಂದ ಸಮಾಪನಾಧಿಕಾರಿಗಳ ವರದಿಯ ಮೇರೆಗೆ ಸಂಘವನ್ನು ಮುಂದುವರಿಸುವುದು ಸೂಕ್ತವಲ್ಲವೆಂದು ಸಂಘದ ನೋಂದಣಿಯನ್ನು ರದ್ದುಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ ಕ್ರಮ ಸಂ. ಡಿಆರ್‌ಡಿ/ಎಲ್ ಕ್ಯೂಡಿ/ಸಿಆರ್/69/2009–2010, ದಿನಾಂಕ : 30–11–2011

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ/ಸಿಓ/1391/ಸಿಎಲ್ಎಂ/2010 ಬೆಂಗಳೂರು ದಿನಾಂಕ : 17–02–1011ರ ಪ್ರಕಾರ ದತ್ತವಾದ ಅಧಿಕಾರದನ್ವಯ ಇಲ್ಯಾಸ್ ಉಲ್ಲಾ ಷರೀಫ್, ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ಬಗ್ಗನಡು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬಗ್ಗನಡು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ, ಈ ಸಂಘದ ನೋಂದಣಿ ಸಂಖ್ಯೆ/ಸನಿ/30/51/ಆರ್ ಜಿಎನ್/30460/2000–01 ದಿನಾಂಕ : 06–12–2000ನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದು ಪಡಿಸಿರುತ್ತೇನೆ. ಈ ದಿನದಿಂದ ಸಂಘವು ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ. ಸಮಾಪನಾಧಿಕಾರಿಗಳು ಸಂಘದ ಎಲ್ಲಾ ದಾಖಲೆಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರಿಗೆ ಒಪ್ಪಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ : 30–11–2011ರಂದು ನೀಡಿರುತ್ತೇನೆ.

....
ಸಹಕಾರ ಸಂಘಗಳ ಉಪ ನಿಬಂಧಕರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಪಿ.ಆರ್. ನಂ. 62

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯ,

ಬಿ3:ಅಮೊ:ವಾಹನ:ವಿವ.01/10–11 ದಿನಾಂಕ:16–07–2011

ಉಪಸ್ಥಿತರು	:	ಶ್ರೀ ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಫಿರ್ಯಾಧಿದಾರರು	:	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)
ಭಾದ್ಯತೆದಾರರು	:	ಯಾರು ಇರುವುದಿಲ್ಲ.

ಪ್ರಸ್ತಾವನೆ:–

ದಿ:09–04–2010 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ಸಿಬ್ಬಂದಿಯೊಂದಿಗೆ ಅಂಜನಾಪುರ–ಶಿಕಾರಿಪುರ ರಸ್ತೆಯಲ್ಲಿ ಗಸ್ತು ತಿರುಗುತ್ತಿರುವಾಗ ಒಂದು ವಾಹನದಲ್ಲಿ ಅರಣ್ಯ ಉತ್ಪನ್ನ ಅಕ್ರಮ ಸಾಗಾಣಿಕೆ ಮಾಡಿದ ಬಗ್ಗೆ ಪತ್ತೆಹಚ್ಚಿ ಬರೆದ ಮಹಜರ್‌ನ ವಿವರ ಈ ಕೆಳಗಿನಂತಿದೆ.

ದಿ:09–04–2010 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಮತ್ತು ಇವರ ಸಿಬ್ಬಂದಿಯವರು ಶಿಕಾರಿಪುರ ತಾ॥ ಅಂಜನಾಪುರ ಹೋಬಳಿ ಅಂಜನಾಪುರ–ಶಿಕಾರಿಪುರ ರಸ್ತೆಯ ಮೂಡುಗೆರೆ ಕ್ರಾಸ್ ಬಳಿ ಇಲಾಖಾ ವಾಹನದಲ್ಲಿ ಬೆಳಗಿನ ಜಾವ 5–30ರ ಸಮಯದಲ್ಲಿ ಗಸ್ತು ಮಾಡುತ್ತಾ ಹೋಗುತ್ತಿರುವಾಗ ಒಂದು ವಾಹನ ಟಾಟಾ ಸುಮೋ ಕೆಎ–03–ಬಿ–9183 ಬರುತ್ತಿರುವುದನ್ನು ಬ್ಯಾಟರಿ ಬೆಳಕಿನ ಸಹಾಯದಿಂದ ನಿಲ್ಲಿಸಲು ಸೂಚಿಸಿದರು, ನಿಲ್ಲಿಸದೇ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಡ್ಯಾಂಹೊಸೂರು ಹತ್ತಿರ ತಡೆದು ನಿಲ್ಲಿಸಿ, ವಾಹನದ ಚಾಲಕನನ್ನು ಹಿಡಿದು ವಿಚಾರಿಸಲಾಗಿ ಅವನ ಹೆಸರು ಬಿ.ಎಸ್.ರಾಜು ಬಿನ್ ಸಿದ್ದರಾಜು, 25 ವರ್ಷ, ವಾಸ–ತಾಯಪ್ಪಲೇಔಟ್, ರಾಚೇನಹಳ್ಳಿ ಮುಖ್ಯರಸ್ತೆ, ಬೆಂಗಳೂರು–45 ಎಂದು ತಿಳಿಸಿದನು. ನಂತರ ವಾಹನ ಪರಿಶೀಲಿಸಿದಾಗ ಟಾಟಾ ಸುಮೋ ನಂ.ಕೆಎ–03–ಬಿ–9183, ಇಂಜಿನ್ ನಂ.483DL-SI-BUZ-704313, ಛಾಸಿಸ್ಸ್ ನಂ.446252-BUZ-908535 ಆಗಿದ್ದು, ವಾಹನದೊಳಗಡೆ 6 ಬೀಟೆ ನಾಟಾವಿದ್ದು, ಅದರ ಅಳತೆ 0.845 ಎಂ3 ಪ್ರಮಾಣವಿದ್ದು, ಇದನ್ನು ಸಾಗಿಸಲು ರಹದಾರಿ ಇಲ್ಲವೆಂದು ತಿಳಿಸಿರುತ್ತಾನೆ. ಅಲ್ಲದೇ ಈ ನಾಟಾಗಳು ಹಸಿಯಾಗಿದ್ದು, ಯಾವುದೇ ಇಲಾಖಾ ಛಾಪದ ಗುರುತಿರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ವಾಹನ, ಅರಣ್ಯ ಉತ್ಪನ್ನ ಹಾಗೂ ಒಬ್ಬ ಆಸಾಮಿಯನ್ನು, ಪ್ರಥಮ ಮಾಹಿತಿ ವರದಿ, ಮಹಜರ್ ವರದಿ, ಮತ್ತು ಜಪ್ತು ವರದಿಯೊಂದಿಗೆ, ಇಲಾಖಾ ಪರ ಜಪ್ತು ಮಾಡಿ, ಕರ್ನಾಟಕ ಅರಣ್ಯ ಕಾಯಿದೆ 1963, ಸೆಕ್ಷನ್ 33, 71(ಎ), 104 (ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಅರಣ್ಯ ಸಂಚಾರಿದಳ, ಶಿಕಾರಿಪುರ ಕಛೇರಿಯ ಅ.ಮೊ.ಸಂಖ್ಯೆ:02/10–11ದಿ:09–04–2010ನ್ನು ದಾಖಲಿಸಿ, ಆಸಾಮಿಗಳನ್ನು ಜೆಎಂಎಫ್‌ಸಿ ಶಿಕಾರಿಪುರಕ್ಕೆ ಒಪ್ಪಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ಈ ವಾಹನದ ಆರ್.ಸಿ. ಮಾಲೀಕರನ್ನು ತನಿಖೆ ಮಾಡುವ ಬಗ್ಗೆ **"ಬಿ"** ಎಕ್ಸ್‌ಟ್ರ್ಯಾಕ್ಟ್‌ನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಇಂದಿರಾನಗರ (ಪೂರ್ವ) ಬೆಂಗಳೂರು ಇವರಿಂದ ಪಡೆದು, ಆರ್.ಸಿ.ಮಾಲೀಕರಾದ ಶ್ರೀ ವಿಲಿಯಂ ಕ್ರಿಸ್ಟಫರ್ ಬಿನ್ ಕೆ.ಕ್ರಿಸ್ಟಫರ್, ಮನೆ ನಂ:23/5, ಎಲ್.ಜಿ.ರಾಮಣ್ಣ ಲೇಔಟ್, ಲವಕುಶನಗರ, 2ನೇ ಮೈನ್ ಲಗ್ಗೇರೆ ಬೆಂಗಳೂರು ಇವರಿಗೆ ದಿ:14–05–2011 ರಂದು ನೀಡಿದ ನೋಟಿಸ್ ಸ್ವೀಕರಿಸುವುದಿಲ್ಲವೆಂದು, ಮತ್ತು ಈ ವಾಹನ ಕಳ್ಳುವಾದ ಬಗ್ಗೆ ದೂರು ನೀಡಿರುವುದಿಲ್ಲವೆಂದು, ಇದರಿಂದ ಆರ್.ಸಿ. ಮಾಲೀಕರು ವಾಹನದಲ್ಲಿ ಅಕ್ರಮ ಅರಣ್ಯ ಉತ್ಪನ್ನ ಸಾಗಾಣಿಕೆ ಮಾಡಲು ಉಪಯೋಗಿಸಿರುತ್ತಾರೆ. ಆದ್ದರಿಂದ ಇವರ ಮೇಲೆ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ವಿಚಾರಣಾ ವರದಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

"ಬಿ" ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ಆರ್.ಸಿ.ಮಾಲೀಕರಿಗೆ ಈ ನ್ಯಾಯಾಲಯದಿಂದ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಬಿ)(1)ರ ಪ್ರಕಾರ 30 ದಿನಗಳ ಕಾಲಾವಕಾಶ ನೀಡಿ, ವಾಹನದ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹೇಳಿಕೆಯೊಂದಿಗೆ ಸಲ್ಲಿಸಲು ಮತ್ತು ನಿಗದಿತ ಸಮಯದೊಳಗೆ ಹೇಳಿಕೆ ಸಲ್ಲಿಸದೇ ಹೋದಲ್ಲಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಕಾರಣ ಕೇಳಿ ನೋಟಿಸ್‌ನ್ನು ದಿ:29–07–2010 ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದ, ಲಕೋಟೆ ಮೇಲೆ ಅಂಚೆ ಇಲಾಖೆಯವರು "No such Number in" ಎಂದು ಬರೆದು ಹಿಂದಿರುಗಿಸಿರುತ್ತಾರೆ.

ಈ ನಡುವೆ ಈ ವಾಹನದ ಬಗ್ಗೆ ಹೆಚ್ಚಿನ ಪ್ರಚಾರಕ್ಕಾಗಿ ಈ ನ್ಯಾಯಾಲಯದಿಂದ 30 ದಿನಗಳ ಕಾಲಾವಕಾಶ ನೀಡಿ ಸಂಖ್ಯೆ:ಬಿ3:ಅಮೊ:ವಾಹನ: ಸಿಆರ್:19/10–11/ದಿ:01–07–2010ರಂದು ಪ್ರಕಟಣೆಯನ್ನು ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ

ಪತ್ರ ವಿಭಾಗ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಹಾಗೂ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ:17–07–2010ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಮತ್ತು ದಿ:19–08–2010ರಂದು ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ವಿಚಾರಣಾಧಿಕಾರಿ ಹಾಗೂ ಪ್ರಾಸಿಕ್ಯೂಶನ್ ಸಾಕ್ಷಿ ಶ್ರೀ ಕೆ.ಆರ್.ಸತೀಶ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರನ್ನು ದಿ:02–07–2011 ರಂದು ಈ ನ್ಯಾಯಾಲಯಕ್ಕೆ ಕರೆಸಿ, ಸತ್ಯಪ್ರತಿಜ್ಞೆ ಬೋಧಿಸಿ, ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ಕಳೆದ $2^1/_2$ ವರ್ಷಗಳಿಂದ ಅರಣ್ಯ ಸಂಚಾರಿದಳದಲ್ಲಿ ಕರ್ತವ್ಯ ನಿರ್ವಹಿಸಿದೆಂದು, ದಿ:09–04–2010ರಂದು ಬೆಳಗಿನ ಜಾವ 4–30ರ ಸಮಯದಲ್ಲಿ ಆನಂದಪುರಂ ಕಡೆಯಿಂದ ಒಂದು ವಾಹನ ಟಾಟಾ ಸುಮೋವನ್ನು ತಡೆದು ನಿಲ್ಲಿಸಿದರೂ, ನಿಲ್ಲಿಸದೇ ವಾಹನ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹಿಡಿಯಲಾಯಿತು. ಅದರಲ್ಲಿದ್ದ 2 ಜನ ಆಸಾಮಿಗಳು ಓಡಿ ಹೋಗಲು ಪ್ರಯತ್ನಿಸಿದ್ದು, ರಾಜು ಎಂಬುವವನ್ನು ಹಿಡಿದು ವಿಚಾರಿಸಲಾಗಿ, ಬೀಟೆ ನಾಟಾವನ್ನು ಸಾಗಿಸಲು ರಹದಾರಿ ಇಲ್ಲವೆಂದು ತಿಳಿಸಿದನು. ಇನ್ನೊಬ್ಬನು ತಪ್ಪಿಸಿಕೊಂಡಿರುತ್ತಾನೆಂದು ವಾಹನದಲ್ಲಿ ರಹದಾರಿ ಇಲ್ಲದೇ ಬೀಟೆ ನಾಟಾ ಸಾಗಿಸಿದ್ದರಿಂದ ವಾಹನ ಟಾಟಾ ಸುಮೋ ಕೆಎ–03–ಬಿ–9183ನ್ನು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ. ಯಾರು ಕ್ಲೇಮು ಅರ್ಜಿ ಸಲ್ಲಿಸದೇ ಇರುವುದರಿಂದ ಪಾಟಿಸವಾಲು ಇರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:02–07–2011 ರಂದು ವಾದ ಮಂಡಿಸಿ, ಸದರಿ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಸಾಗಿಸುತ್ತಿರುವಾಗ ಮಾಲು ಸಹಿತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ವಾಹನವನ್ನು ಜಪ್ತುಮಾಡಿ ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಬೀಟೆ ತುಂಡುಗಳನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿದೆ. ಹಾಗೂ ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಮತ್ತು ದಿನಪತ್ರಿಕೆಯಲ್ಲಿ ಪ್ರಕಟಗೊಂಡು ಮತ್ತು ಆರ್.ಸಿ. ಮಾಲೀಕರಿಗೆ ನೋಟಿಸ್ ಜಾರಿ ಮಾಡಿ 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ಜಪ್ತು ಮಾಡಿದ ವಾಹನ ಟಾಟಾಸುಮೋ ಕೆಎ–03–ಬಿ–9183 (ಇಂಜಿನ್ ನಂ.483DL-SI- BUZ-704313, ಛಾಸಿಸ್ಸ್ ನಂ.446252-BUZ-908535) ಮತ್ತು ಈ ವಾಹನದಲ್ಲಿದ್ದ, 06 ತುಂಡು ಬೀಟೆ 0.845 ಎಂ3ವು ಕರ್ನಾಟಕ ಸರ್ಕಾರದ ಸಂಪತ್ತು ಆಗಿರುವುದರಿಂದ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದ್ದೇನೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ **ದಿ:16–07–2011** ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಗರ ವಿಭಾಗ, ಸಾಗರ

ಪಿ.ಆರ್. 767

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ:ವಿವ:07/05–06 ದಿನಾಂಕ:27–08–2011

ಉಪಸ್ಥಿತರು	:	ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಫಿರ್ಯಾಧಿದಾರರು	:	ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ.(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)
ಬಾಧ್ಯತೆದಾರರು	:	ಶ್ರೀ ಲೋಕೇಶ ಪಿ. ಬಿನ್ ಪಾಯಪ್ಪ, ಜಮೇಜಡ್ಡು ಗ್ರಾಮ, ಹೂಕೊಪ್ಪಲು, ಬೈಸೆ–ಅಂಚೆ, ಹೊಸನಗರ ತಾ॥ (ಶ್ರೀ ಕೆ.ಎನ್.ಶ್ರೀಧರ್, ವಕೀಲರು, ಸಾಗರ)

ಪ್ರಸ್ತಾವನೆ:–

ದಿ:19–07–2005 ರಂದು ಟಾಟಾ–407 ವಾಹನದಲ್ಲಿ ಬೀಟೆ ನಾಟಾ ಅಕ್ರಮವಾಗಿ ಸಾಗಿಸುತ್ತಿರುವಾಗ ಆನಂದಪುರಂ ವಲಯದ ವಲಯ ಅರಣ್ಯಾಧಿಕಾರಿ ರವರು ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಬರೆದ ಮಹಜರ್ ವಿವರ ಈ ಕೆಳಗಿನಂತಿದೆ.

ದಿ:19–07–2005ರ ಬೆಳಿಗ್ಗೆ 5–00ಗಂಟೆ ಸಮಯದಲ್ಲಿ ವಲಯ ಅರಣ್ಯಾಧಿಕಾರಿ, ಚೋರಡಿ ಇವರು ಮತ್ತು ಸಿಬ್ಬಂದಿಯವರು ಸಾಗರ ತಾ॥ ಆನಂದಪುರಂ ಹೋಬಳಿ ಆನಂದಪುರಂದಿಂದ–ಶಿಕಾರಿಪುರ ಕಡೆ ಹೋಗುವ ರಸ್ತೆ ಕ್ರಾಸ್ ಬಳಿ ಗಸ್ತು ಮಾಡುತ್ತಾ, ರಸ್ತೆಯಲ್ಲಿ ಬರುವ ಎಲ್ಲಾ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡುತ್ತಿರುವಾಗ ಶಿವಮೊಗ್ಗ ಕಡೆಯಿಂದ ಸಾಗರ ಕಡೆಗೆ ಒಂದು ವಾಹನ ಟಾಟಾ–407 ತಪಾಸಣೆಗಾಗಿ ನಿಲ್ಲಿಸಲು ಸೂಚಿಸಿದರು ನಿಲ್ಲಿಸದೇ ವೇಗ ಮುಂದೆ ಹೋಯಿತು. ನಂತರ ವಾಹನವನ್ನು ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಆ ವಾಹನವನ್ನು ಸಾಗರ ತಾ॥ ಆನಂದಪುರಂ ಹೋಬಳಿ ಹಕ್ರಕೊಪ್ಪದ ಬಳಿ ತಡೆದು ನಿಲ್ಲಿಸಲಾಯಿತು. ಈ ವಾಹನದಲ್ಲಿದ್ದ ಮೂರು ಜನ ಆಸಾಮಿಗಳು ವಾಹನದಿಂದ ಇಳಿದು ಕೈಗೇ ಸಿಗದೇ ಪರಾರಿಯಾದರು. ನಂತರ ವಾಹನ ಪರಿಶೀಲಿಸಲಾಗಿ, ಟಾಟಾ–407 ಕೆಎ–31–1286 ಆಗಿದ್ದು, ವಾಹನದ ಹಿಂದಿನ ಬಾಡಿಯ ತಾಡಪಲನ್ನು ಎತ್ತಿನೋಡಿದಾಗ ಹಸಿ 8 ನಾಟಾ ಇದ್ದು, ಈ ತುಂಡುಗಳಿಗೆ ಸಂಖ್ಯೆ ನೀಡಿ ಅಳತೆ ಮಾಡಿದಾಗ 01.402 ಎಂ3 ಪ್ರಮಾಣವಿರುತ್ತದೆ. ಈ ತುಂಡುಗಳ ತುದಿಬುಡವು ಗರಗಸದಿಂದ ಕೊಯ್ತು ಮಾಡಿದಾಗಿದ್ದು, ಈ ತುಂಡುಗಳ ಮೇಲೆ ಇಲಾಖಾ ಛಾಪಾದ ಗುರುತಿರಲಿಲ್ಲ. ಹಾಗೂ ಸಾಗಿಸಲು ರಹದಾರಿ ಇಲ್ಲದ ಕಾರಣ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾ ಪರ ವಶಪಡಿಸಿಕೊಂಡು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 127, 144ರ ಪ್ರಕಾರ ಆನಂದಪುರಂ ವಲಯದ ಅ.ಮೊ. ಸಂಖ್ಯೆ:36/05–06ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ನಂತರ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ವಾಹನದ 'ಬಿ' ಎಕ್ಸ್‌ಟ್ರ್ಯಾಕ್ಟ್‌ನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ ಈ ನ್ಯಾಯಾಲಯದಿಂದ ಬಿ3.ಅಮೊ.ವಾಹನ.ವಿವ.07/05–06 ದಿ:11–08–2005, 04–03–2006, 24–06–2006 ಮತ್ತು 07–08–2006 ರಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾಗರ ಇವರಿಗೆ ಪತ್ರವನ್ನು ಬರೆದು ಕೋರಲಾಯಿತು. ಅದರಂತೆ, ಈ ವಾಹನದ 'ಬಿ' ಎಕ್ಸ್‌ಟ್ರ್ಯಾಕ್ಟ್‌ನ್ನು ದಿ:05–09–2006 ರಂದು ಈ ನ್ಯಾಯಾಲಯಕ್ಕೆ ಒದಗಿಸಿರುತ್ತಾರೆ. ಈ 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ಶ್ರೀ ಲೋಕೇಶ ಪಿ. ಬಿನ್ ಪಾಯಪ್ಪ, ಜಮೇಜಡ್ಡು ಗ್ರಾಮ, ಹೂಕೊಪ್ಪಲು, ಬೈಸೆ–ಅಂಚೆ, ನಗರ–ಹೋಬಳಿ, ಹೊಸನಗರ ತಾ॥ ಎಂದು ನಮೂದಿಸಲಾಗಿದ್ದು, ಈ ವಾಹನ ಜಪ್ತು ಮಾಡುವಾಗ ಅದರಲ್ಲಿ ಸಿಕ್ಕಿದ್ದ ಜೆರಾಕ್ಸ್ ಆರ್.ಸಿ. ಪುಸ್ತಕದದಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಬಿ)(l)ರ ಪ್ರಕಾರ 30ದಿನಗಳ ಕಾಲಾವಕಾಶ ನೀಡಿ ದಿ:18–08–2005 ರಂದು ಕಾರಣ ಕೇಳಿ ಪತ್ರವನ್ನು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ.

ಈ ವಾಹನದ ಆರ್.ಸಿ. ಮಾಲೀಕರು ಈ ವಾಹನ ಮಧ್ಯಂತರ ಅವಧಿಗೆ ಬಿಡುಗಡೆ ಮಾಡುವಂತೆ ಕೋರಿ ವಕೀಲರ ಮುಖಾಂತರ ದಿ:23–09–2005 ರಂದು ಕ್ಲೇಮು ಅರ್ಜಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ವಾಹನವನ್ನು ಮಧ್ಯಂತರ ಅವಧಿಗೆ ಬಿಡುಗಡೆಗೆ ಕೋರಿದ ವಾಹನ ಮಾಲೀಕರ ಅರ್ಜಿಯನ್ನು ದಿ:05–01–2008 ರಂದು ತಿರಸ್ಕರಿಸಿ ಈ ನ್ಯಾಯಾಲಯದಿಂದ ಆದೇಶ ಹೊರಡಿಸಿದೆ.

ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಮುಕುಂದಚಂದ್ರ, ವಲಯ ಅರಣ್ಯಾಧಿಕಾರಿ, ಭದ್ರಾವತಿ ವಲಯ, ಬದ್ರಾವತಿ (ಚೋರಡಿ ವಲಯದಲ್ಲಿ ಹಿಂದೆ ಕರ್ತವ್ಯ ನಿರ್ವಹಿಸಿರುವ) ಇವರನ್ನು ದಿ:16–07–2011 ರಂದು ನ್ಯಾಯಾಲಯಕ್ಕೆ ಕರೆಸಿ, ಸತ್ಯಪ್ರತಿಜ್ಞೆ ಬೋಧಿಸಲಾಯಿತು. ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ಜುಲೈ–2005 ರಿಂದ 2008 ನವೆಂಬರ್‌ರವರೆಗೆ ಚೋರಡಿ ವಲಯದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತೇನೆ. ದಿ:19–07–2005 ರಂದು ಗಸ್ತು ಮಾಡುತ್ತಾ, ಶಿಕಾರಿಪುರ ರಸ್ತೆ ದಾಸನಕೊಪ್ಪ ಕ್ರಾಸ್ ಬಳಿ ಸಿಬ್ಬಂದಿಯೊಂದಿಗೆ ಕಾಯುತ್ತಿದ್ದಾಗ ಶಿವಮೊಗ್ಗದ ಕಡೆಯಿಂದ ಸಾಗರ ಕಡೆಗೆ ಟಾಟಾ ಮಿನಿಲಾರಿ ಬರುತ್ತಿರುವುದನ್ನು ತಪಾಸಣೆಗೆ ನಿಲ್ಲಿಸಲು ಸೂಚಿಸಿದರು. ನಿಲ್ಲಿಸದೇ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹಕ್ರೆಕೊಪ್ಪ ಬಸ್‌ಸ್ಟ್ಯಾಂಡ್ ಹತ್ತಿರ ಹಿಡಿದೆವು. ಅದರಲ್ಲಿದ್ದ 3 ಜನ ಆಸಾಮಿಗಳು ಕೈಗೆ ಸಿಗದೇ ಪರಾರಿಯಾದರು. ವಾಹನದೊಳಗಡೆ 8 ಹಸಿ ಬೀಟೆ ತುಂಡುಗಳಿದ್ದು. ಈ ತುಂಡುಗಳನ್ನು ಗರಗಸದಿಂದ ಕೊಯ್ತು ಮಾಡಲಾಗಿತ್ತು. ಅವುಗಳ ಮೇಲೆ ಯಾವುದೇ ಛಾಪಾದ ಗುರುತಿರಲಿಲ್ಲ. ಹಿಡಿದ ವಾಹನದ ಡ್ಯಾಸ್ ಬೋರ್ಡ್‌ನಲ್ಲಿ ಡಿ.ಎಲ್., ಆರ್.ಸಿ.ಪುಸ್ತಕ ಸಿಕ್ಕಿತ್ತು. ಓಡಿ ಹೋದ ಒಬ್ಬ ವ್ಯಕ್ತಿಯಾಗಿ ಡಿ.ಎಲ್.ನಲ್ಲಿರುವ ಪೋಟೋಕ್ಕೆ ಹೋಲಿಕೆಯಾಗಿದ್ದು, ಅವನ ಹೆಸರು ಲೋಕೇಶ್ ಬಿನ್ ಪಾಯಪ್ಪ, ಎಂದಿತ್ತು. ಇನ್ನಿಬ್ಬರ ಮಾಹಿತಿ ಸಿಗಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ನಾಟಾಗಳನ್ನು ಅಳತೆ ಮಾಡಿ ಕ್ರಮ ಸಂಖ್ಯೆಕೊಟ್ಟು ಇಲಾಖಾ ಛಾಪಾ ಹೊಡೆದೆವು. ವಾಹನ ಪರಿಶೀಲಿಸಿದಾಗ ಕೆಎ–31–1286 ಆಗಿದ್ದು, ಸ್ಥಳದಲ್ಲಿ ಮಾಡಿದ ಮಹಜರ್–ನಿಪಿ1, ಅದರ ಸಹಿಯನ್ನು 1(ಎ), ಪ್ರಥಮ ವರ್ತಮಾನ ವರದಿಯನ್ನು ನಿಪಿ–2 ಅದರಲ್ಲಿನ ನನ್ನ ಸಹಿಯನ್ನು 2(ಎ) ಜಪ್ತುವರದಿಯನ್ನು ನಿಪಿ–3 ಎಂದು ಅದರಲ್ಲಿನ ನನ್ನ ಸಹಿಯನ್ನು 3(ಪಿ) ಎಂದು ಗುರುತಿಸಿದೆ. ಬೀಟೆ ಮರದ ದೃಢೀಕರಣ ಪತ್ರವನ್ನು ವಲಯ ಅರಣ್ಯಾಧಿಕಾರಿ, ಹಣಗೆರೆ ವಲಯ, ಹಣಗೆರೆ ಇವರಿಂದ ಪಡೆದೆನು. ವಿಚಾರಣಾ ವರದಿ ತಯಾರಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಗೆ ಸಲ್ಲಿಸಿ, ಆರೋಪಿಗಳ ವಿರುದ್ಧ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ವಿಚಾರಣಾ ವರದಿಯನ್ನು ನಿಪಿ–4 ಎಂದು ಅದರಲ್ಲಿನ ನನ್ನ ಸಹಿಯನ್ನು 4(ಎ) ಎಂದು ಗುರುತಿಸಿದೆ. ವಾಹನದಲ್ಲಿ ಸಿಕ್ಕಿದ ಚುನಾವಣಾ ಆಯೋಗದ, ಆರ್.ಸಿ.ಪುಸ್ತಕ ಮತ್ತು ಚಾಲನಾ ಪರವಾನಿಗೆ

ಪತ್ರವನ್ನು ನಿಪಿ–5, 6, 7 ಎಂದು ಗುರುತಿಸಿದೆ. ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮ ಸಾಗಿಸಲು ಉಪಯೋಗಿಸಿರುವುದರಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ".

ಪಾಟಿ ಸವಾಲಿಗೆ ವಕೀಲರು ಗೈರು ಹಾಜರಾಗಿದ್ದರಿಂದ ಪಾಟಿಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:23–07–2011, 30–07–2011 ಮತ್ತು 06–08–2011 ರಂದು ಮತ್ತು ವಾದ ಮಂಡಿಸಲು ದಿನಾಂಕ ನೀಡಿ ತಿಳಿಸಿದರೂ ಸಹ ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗೆ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:20–08–2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ 407 ಕೆಎ–31–1286 ರಲ್ಲಿ ಅರಣ್ಯ ಉತ್ಪನ್ನವಾದ 08 ಬೀಟೆ ನಾಟಾ 1.402ಎಂ3ನ್ನು ದಿ:19–07–2005ರಂದು ಅಕ್ರಮವಾಗಿ ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?
3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ 407 ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಬೀಟ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?
4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ
2. ಎರಡನೇ ಅಂಶಕ್ಕೆ ಹೌದು ಎಂತಲೂ
3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ–1:

ದಿ:19–07–2005 ರಂದು ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಮತ್ತು ಸಿಬ್ಬಂದಿಯವರು ಸಾಗರ ತಾ॥ ಆನಂದಪುರಂ ಹೋಬಳಿ ಆನಂದಪುರಂದಿಂದ ಶಿಕಾರಿಪುಕ್ಕೆ ಹೋಗುವ ರಸ್ತೆಯ ಕ್ರಾಸ್ ಬಳಿ ರಾತ್ರಿ ಗಸ್ತು ತಿರುಗುತ್ತಿರುವಾಗ ಬೆಳಿಗ್ಗೆ 5–00 ಗಂಟೆ ಸಮಯದಲ್ಲಿ ಟಾಟಾ 407 ಕೆಎ–31–1286ರಲ್ಲಿ ಬೀಟೆ ನಾಟಾ 08=1.402 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಬೀಟೆ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ–2:

ಆರ್.ಸಿ. ಮಾಲೀಕರಾದ ಶ್ರೀ ಪಿ.ಲೋಕೇಶ್ ಬಿನ್ ಪಾಯಪ್ಪ, ಜಮೇಜಡ್ಡು ಗ್ರಾಮ, ಹೂಕೊಪ್ಪಲು, ಬೈಸೆ–ಅಂಚೆ, ಹೊಸನಗರ ತಾ॥ ಇವರು ದಿ:23–09–2005ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. 'ಬಿ' ಎಕ್ಸ್‌ಟ್ರಾಕ್ಟ್‌ನಲ್ಲಿ ನಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:18–08–2005 ರಂದು ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ಮೂರು ಬಾರಿ ದಿನಾಂಕಗಳನ್ನು ನೀಡಲಾಗಿದ್ದು, ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ

ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ–3:

ದಿ:19–07–2005 ರಂದು ಟಾಟಾ 407 ನಂ:ಕೆಎ–31–1286ರಲ್ಲಿ 08 ಬೀಟೆ ನಾಟಾ 1.402 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಆನಂದಪುರಂ, ವಲಯ, ಚೋರಡಿಯ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಆನಂದಪುರಂ, ವಲಯ ಚೋರಡಿ ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:23–09–2005ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ಧರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of-Ramesh N. Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that *"the owners required to show under sub-section (2) of section 71-B is that he, his agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. …………………………………………………………………It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse".*

ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡ ಬಗ್ಗೆ ಈ ನ್ಯಾಯಾಲಯಕ್ಕೆ ಸಾಭೀತುಪಡಿಸಿರುವುದಿಲ್ಲ.

ಅಂಶ–4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯಾ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ಅರಣ್ಯ ಮೊಕದ್ದಮೆಯಲ್ಲಿ ಜಪ್ತು ಮಾಡಿದ ಟಾಟಾ–407 ಕೆಎ–31–1286 (ಇಂಜಿನ್ ನಂ:4975P21MUQ806487, ಛಾಸ್ಸಿಸ್ ನಂಬರ್: 357010MUQ838404) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ನಾಟಾ 08=1.402 ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ **ದಿ:27–08–2011** ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ

ಪಿ.ಆರ್. 1103 **ಸಾಗರ ವಿಭಾಗ, ಸಾಗರ.**

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯದಲ್ಲಿ

ಕ್ರ: ಬಿ3:ಅಮೊ:ವಾಹನ:22/06–07 ದಿನಾಂಕ:23–07–2011

ಉಪಸ್ಥಿತರು	:	ಶ್ರೀ ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ
ಪಿರ್ಯಾಧಿದಾರರು	:	ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ, (ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)
ಬಾಧ್ಯತೆದಾರರು	:	ಶ್ರೀ ಇರ್ಫಾನ್ ಹಿತ್ತಲಮನಿ ಬಿನ್ ಭಾಷಾ ಸಾಬ್, ನೆಹರೂ ಕಾಲೋನಿ,2ನೇ ತಿರುವು, ಸೊರಬ ರಸ್ತೆ, ಶಿರಾಳಕೊಪ್ಪ ಟೌನ್, ಶಿಕಾರಿಪುರ. (ಶ್ರೀ ಆರಿಫ್ ಆಲಿ ಖಾನ್, ವಕೀಲರು, ಸಾಗರ)

ಪ್ರಸ್ತಾವನೆ:–

ದಿ:03–12–2006 ರಂದು ವಲಯ ಅರಣ್ಯಾಧಿಕಾರಿ, ಸಾಗರ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಒಂದು ವಾಹನದಲ್ಲಿ ಬೀಟೆ ನಾಟಾ ಅಕ್ರಮ ಸಾಗಾಣಿಕೆ ಮಾಡುತ್ತಿದ್ದ ಬಗ್ಗೆ ಪತ್ತೆಹಚ್ಚಿ ಬರೆದ ಮಹಜರ್‌ನ ವಿವರ ಈ ಕೆಳಗಿನಂತಿದೆ.

ದಿ:03–12–2006ರಂದು ವಲಯ ಅರಣ್ಯಾಧಿಕಾರಿ, ಸಾಗರ ಮತ್ತು ಸಿಬ್ಬಂದಿಗಳಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಾಗರ ತಾಲ್ಲೂಕು ಆನಂದಪುರಂ ಹೋಬಳಿ ತ್ಯಾಗರ್ತಿ ಗ್ರಾಮದ ಬೆಳಂದೂರಿಗೆ ಹೋಗುವ ರಸ್ತೆಯಲ್ಲಿ ಕಾಯುತ್ತಿರುವಾಗ ಸುಮಾರು ಸಾಯಂಕಾಲ 6–30ರ ಸಮಯದಲ್ಲಿ ಮೈಲಾರಿಕೊಪ್ಪದ ಕಡೆಯಿಂದ ಒಂದು ವಾಹನ ಬರುವುದನ್ನು ನಿಲ್ಲಿಸಲು ಸೂಚಿಸಿದಾಗ ಸುಮಾರು 200 ಅಡಿ ದೂರದಲ್ಲಿ ವಾಹನ ನಿಲ್ಲಿಸಿ ಅದರಲ್ಲಿದ್ದ ಅಸಾಮಿಗಳು ವಾಹನದಿಂದ ಜಿಗಿದು ಓಡಿಹೋಗಿರುತ್ತಾರೆ. ಓಡಿಹೋದ ಅಸಾಮಿಗಳನ್ನು ಬೆನ್ನಟ್ಟಿದರೂ ಕೈಗೆ ಸಿಗದೆ ಪರಾರಿಯಾಗಿರುತ್ತಾರೆ. ಓಡಿಹೋದ ಅಸಾಮಿಗಳು ಯಾರೆಂದು ಗೊತ್ತಾಗಿರುವುದಿಲ್ಲ. ವಾಹನ ಪರಿಶೀಲಿಸಿದಾಗ ಬಿಳಿ ಬಣ್ಣದ ಟಾಟಾ 207 ನೊಂದಣಿ ಸಂಖ್ಯೆ:ಕೆಎ–25–ಸಿ–7771, ಛಾಸ್ಸಿಸ್ ನಂ: 374415 DWZ 910150, ಇಂಜಿನ್ ನಂ: DWZ 872793 ಆಗಿದ್ದು, ವಾಹನದೊಳಗೆ ಬೀಟೆ ಜಾತಿಯ ನಾಟಾಗಳಿದ್ದು, ಅವುಗಳ ಮೇಲೆ ಇಲಾಖೆಯ ಛಾಪಾದ ಗುರುತಿರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಬೀಟೆ ನಾಟಾಗಳಿಗೆ ನಂಬರ್ ಕೊಟ್ಟು 8 ಬೀಟೆ ನಾಟಾಗಳನ್ನು ಅಳತೆ ಮಾಡಿದಾಗ ಅವುಗಳ ಪ್ರಮಾಣ 01.032ಎಂ3 ಇದ್ದು, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತುವರದಿಯೊಂದಿಗೆ ವಾಹನ ಮತ್ತು ಬೀಟೆ ನಾಟಾವನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಕಾನೂನು ಉಲ್ಲಂಘಿಸಿರುವುದರಿಂದ ಸಾಗರ ವಲಯದ ಅ.ಮೊ.ಸಂಖ್ಯೆ 110/06–07ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ಆದೇಶವಾಗಿದೆ.

ಈ ವಾಹನದ ಆರ್.ಸಿ. ಮಾಲೀಕರು ವಕೀಲರ ಮುಖಾಂತರ ಅರ್ಜಿಯನ್ನು ದಿ:29–01–2007 ರಂದು ಸಲ್ಲಿಸಿ, ವಾಹನ ಮಧ್ಯಂತರ ಅವಧಿಗೆ ಬಿಡಲು ಕೋರಿರುತ್ತಾರೆ. ಇವರ ಅರ್ಜಿಯನ್ನು ದಿ:19–09–2009 ರಂದು ತಿರಸ್ಕರಿಸಿ ಈ ನ್ಯಾಯಾಲಯದಿಂದ ಆದೇಶ ಹೊರಡಿಸಿದೆ.

ನಂತರ ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಎಸ್.ಎಸ್.ಚಂದ್ರಶೇಖರ್, ವಲಯ ಅರಣ್ಯಾಧಿಕಾರಿ, ಆನೇಕಲ್ ವಲಯ, (ಆಗಿನ ಸಾಗರ ವಲಯದ ವಲಯ ಅರಣ್ಯಾಧಿಕಾರಿ) ಇವರನ್ನು ದಿ:30–10–2010 ರಂದು ಈ ನ್ಯಾಯಾಲಯಕ್ಕೆ ಕರೆಸಿ, ಸತ್ಯಪ್ರತಿಜ್ಞೆ ಬೋಧಿಸಿ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ನಾನು ದಿ:02–07–2005 ರಿಂದ 30–08–2008 ರವರೆಗೆ ಸಾಗರ ವಲಯದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿ:03–12–2006 ರಂದು ಬಂದ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಯೊಂದಿಗೆ ತ್ಯಾಗರ್ತಿ ಗ್ರಾಮದ ಬೆಳಂದೂರು ರಸ್ತೆಯಲ್ಲಿ ಇಲಾಖಾ ವಾಹನದಲ್ಲಿ ಕಾಯುತ್ತಿದ್ದೆವು. ಆ ಸಮಯದಲ್ಲಿ ಅಂಬ್ಲಿಗೊಳ ವಲಯದ ವಲಯ ಅರಣ್ಯಾಧಿಕಾರಿ, ಸುದರ್ಶನ್‌ರವರು ನಮ್ಮೊಂದಿಗಿದ್ದರು. ಸುಮಾರು ಸಂಜೆ 6–30ರ ಸಮಯದಲ್ಲಿ ಮೈಲಾರಿಕೊಪ್ಪ ಕಡೆಯಿಂದ ಬೆಳಂದೂರು ರಸ್ತೆ ಬದಿ ವಾಹನ ಬರುತ್ತಿರುವುದನ್ನು ನೋಡಿ ನಾವು ಅದನ್ನು ತಡೆಯಲು ರಸ್ತೆಗೆ ಅಡ್ಡ ಬಂದಾಗ ನಮ್ಮಿಂದ 200 ಅಡಿ ದೂರದಲ್ಲಿ ವಾಹನ ನಿಲ್ಲಿಸಿ ಓಡಿಹೋಗಿದ್ದು, ಅವರನ್ನು ಹಿಡಿಯಲು ಪ್ರಯತ್ನಿಸಿದರೂ ಸಿಗಲಿಲ್ಲ. ನಂತರ ವಾಹನವನ್ನು ಪರಿಶೀಲಿಸಲಾಗಿ ಅದರ ನೊಂದಣಿ ಸಂ: ಕೆಎ–25–ಸಿ–7771 ಆಗಿತ್ತು. ಅದರಲ್ಲಿ ಬೀಟೆ ಜಾತಿಯ 8 ತುಂಡುಗಳಿತ್ತು. ಅವುಗಳ ಮೇಲೆ ಇಲಾಖಾ ಛಾಪಾದ ಗುರುತಿರಲಿಲ್ಲ. ಆದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಅವುಗಳನ್ನು ಅಳತೆ ಮಾಡಿ ಕ್ರಮ ಸಂಖ್ಯೆ ಕೊಟ್ಟು ಇಲಾಖಾ ಛಾಪಾ ಹೊಡೆದು ಅವುಗಳನ್ನು ಮತ್ತು ವಾಹನವನ್ನು ಮಹಜರ್ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಮಹಜರ್ ಬರೆದೆವು. ಆಗ ಮಾಡಿದ ಮಹಜರ್ ಈಗ ನೋಡುತ್ತಿದ್ದು, ಅದನ್ನು ನಿಪಿ–1 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ–1ಎ ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ–2 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ–2ಎ ಎಂದು, ಜಪ್ತು ವರದಿಯನ್ನು ನಿಪಿ–3 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ–3ಎ ಎಂದು ಗುರುತಿಸಿದೆ. ವಾಹನ ಮತ್ತು ತುಂಡುಗಳನ್ನು ವಲಯ ಕಛೇರಿಗೆ ತಂದೆವು. ಸದರಿ ವಾಹನವನ್ನು ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುವುದರಿಂದ ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ.

ಪಾಟಿಸವಾಲಿಗೆ ಡಿಫೆನ್ಸ ಕಡೆಯ ವಕೀಲರೇ ಸಮಯ ಕೋರಿರುತ್ತಾರೆ. ಆದರೆ, ಸಕಾರಣವಿಲ್ಲದ ಕಾರಣ ಪಾಟಿಸವಾಲು ಇಲ್ಲವೆಂದು ತೀರ್ಮಾನಿಸಿ ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಿದೆ.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:20–11–2010, 29–01–2011, 05–02–2011, 19–02–2011, 02–04–2011, 28–05–2011 ರಂದು ದಿನಾಂಕ ನೀಡಿದ್ದರೂ, ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರು ಈ ಪ್ರಕರಣದಲ್ಲಿ ಹೇಳಿಕೆ ನೀಡಿರುವುದಿಲ್ಲ. ಈ ನಡುವೆ ಡಿಫೆನ್ಸ್ ಕಡೆ ವಕೀಲರು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಈ ಪ್ರಕರಣದಿಂದ ನಿವೃತ್ತಿ ಹೊಂದಿದ್ದೇನೆಂದು ತಿಳಿಸಿರುತ್ತಾರೆ. ಈ ಬಗ್ಗೆ ಆರ್.ಸಿ. ಮಾಲೀಕರಿಗೆ ದಿ:02–07–2011 ರಂದು ಈ ನ್ಯಾಯಾಲಯದಿಂದ ಪತ್ರ ಬರೆದು ದಿ:16–07–2011 ರಂದು 11–00 ಗಂಟೆಗೆ ಹಾಜರಾಗಲು ತಿಳಿಸಿದೆ. ಆದರೆ, ಆರ್.ಸಿ. ಮಾಲೀಕರು ದಿ:16–07–2011 ರಂದು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:16–07–2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ 207 ಕೆಎ–15–ಸಿ–7771 ರಲ್ಲಿ 08 ಬೀಟೆ ನಾಟಾ 1.032ಎಂ3ನ್ನು ದಿ:03–12–2006ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ–207 ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಬೀಟೆ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ–1:

ದಿ:03–12–2006 ರಂದು ವಲಯ ಅರಣ್ಯಾಧಿಕಾರಿ, ಸಾಗರ ವಲಯ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಾಗರ ತಾ॥ ಆನಂದಪುರಂ ಹೋಬಳಿ ತ್ಯಾಗರ್ತಿ ಗ್ರಾಮದ ಬೆಳಂದೂರಿಗೆ ಹೋಗುವ ರಸ್ತೆಯಲ್ಲಿ ಕಾಯುತ್ತಿರುವಾಗ ಒಂದು ವಾಹನ ಟಾಟಾ 207 ಕೆಎ–15–ಸಿ–7771ರಲ್ಲಿ ಬೀಟೆ ನಾಟಾ 08=1.032 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಬೀಟೆ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ–2:

ಆರ್.ಸಿ. ಮಾಲೀಕರಾದ ಶ್ರೀ ಇರ್ಫಾನ್ ಹಿತ್ತಲಮನಿ ಬಿನ್ ಭಾಷಾ ಸಾಬ್, ನೆಹರೂ ಕಾಲೋನಿ, 2ನೇ ತಿರುವು, ಸೊರಬ ರಸ್ತೆ, ಶಿರಾಳಕೊಪ್ಪ ಟೌನ್, ಶಿಕಾರಿಪುರ. ಇವರು ದಿ:29–01–2007 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರ್ಯಾಕ್ಟ್‌ನಲ್ಲಿ

ನಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:31–01–2007 ರಂದು ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ನಾಲ್ಕು ಬಾರಿ ದಿನಾಂಕಗಳನ್ನು ನೀಡಲಾಗಿದ್ದು. ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ–3:

ದಿ:03–12–2006 ರಂದು ಟಾಟಾ 207 ನಂ:ಕೆಎ–15–ಸಿ–7771ರಲ್ಲಿ 08 ಬೀಟೆ ನಾಟಾ 1.032 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ವಲಯ ಅರಣ್ಯಾಧಿಕಾರಿ, ಸಾಗರ ವಲಯ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಸಾಗರ ವಲಯ ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:24–01–2007ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ದರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲ ವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥಾವ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನಚ್ಚೆರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of - Ramesh N. Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that " the owners required to show under sub-section (2) of section 71-B is that he, his agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them …… It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse".

ಅಲ್ಲದೇ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡ ಬಗ್ಗೆ ಯಾವುದೇ ಸಾಕ್ಷಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದಿಲ್ಲ.

ಅಂಶ–4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಇವರು ಜಪ್ತು ಮಾಡಿದ ಟಾಟಾ 207 ನೊಂದಣಿ ಸಂಖ್ಯೆ: ಕೆಎ–25–ಸಿ–7771, (ಛಾಸ್ಸಿಸ್ ನಂ: 374415 DWZ 910150, ಇಂಜಿನ್ ನಂ: DWZ 872793) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ನಾಟಾ 08=1.032 ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ **ದಿ:23–07–2011 ರಂದು** ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್. 912 **ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ.**

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಕ್ರ:ಬಿ3:ಅಮೊ:ವಾಹನ:ವಿವ:32/06–07 ದಿನಾಂಕ:25–06–2011

ಉಪಸ್ಥಿತರು : ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ,
ಆನಂದಪುರಂ ವಲಯ, ಚೋರಡಿ. (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ)

ಭಾದ್ಯತೆದಾರರು : ಶ್ರೀ ಕೆ. ಅಬ್ದುಲ್ ವಾಹಿದ್,
ಬಿನ್ ಕೆ. ಮಹ್ಮದ್ ಸಾಹಿಬ್,50 ವರ್ಷ, 4ನೇ ಕ್ರಾಸ್, ಜನ್ನತ್ ನಗರ ವಾಸಿ, ಸಾಗರ ಟೌನ್.
(ಶ್ರೀ ಎಸ್.ಎನ್. ಮಂಜುನಾಥ, ವಕೀಲರು)

ಪ್ರಸ್ತಾವನೆ:–

ದಿ:23–03–2007 ರಂದು ಆನಂದಪುರಂ ವಲಯ, ಚೋರಡಿಯ ತುಪ್ಪೂರು ಶಾಖೆಯ ಗಿಳಾಲಗುಂಡಿ ಮೀಸಲು ಅರಣ್ಯದ ಸಾಗುವಾನಿ ಮರಗಳಿಂದ ನಾಟಾ ತಯಾರಿಸಿ ವಾಹನದಲ್ಲಿ ಅಕ್ರಮವಾಗಿ ಸಾಗಿಸಿದ ಬಗ್ಗೆ ತುಪ್ಪೂರು ಶಾಖೆಯ ವನಪಾಲಕರು ಈ ಕೆಳಗಿನಂತೆ ಮಹಜರ್ ತಯಾರಿಸಿರುತ್ತಾರೆ.

ದಿ:23–03–2007ರಂದು ಆನಂದಪುರಂ ವಲಯ, ಚೋರಡಿಯ ತುಪ್ಪೂರು ಶಾಖೆಯ ವನಪಾಲಕ ಹಾಗೂ ಇವರ ಸಿಬ್ಬಂದಿಯವರು ಶಿವಮೊಗ್ಗ ತಾಲ್ಲೂಕು ಕುಂಸಿ ಹೋಬಳಿ ಕೋಣೆಹೊಸೂರು ಗ್ರಾಮದ ಗಿಳಾಲಗುಂಡಿ ಮೀಸಲು ಅರಣ್ಯದ ಸಾಗುವಾನಿ ನೆಡುತೋಪಿನಲ್ಲಿ ಕಾಯುತ್ತಿರುವಾಗ ಬೆಳಗಿನ ಜಾವ 6–00ಗಂಟೆ ಸಮಯದಲ್ಲಿ ಒಂದು ವಾಹನ ನೆಡುತೋಪಿನಿಂದ ಎನ್.ಹೆಚ್. 206ರ ರಸ್ತೆಕಡೆ ಬಂದಿತು. ಸದರಿ ವಾಹನವನ್ನು ಇಲಾಖೆಯವರು ತಡೆದು ನಿಲ್ಲಿಸಲಾಗಿ, ವಾಹನದಲ್ಲಿದ್ದ 3 ಜನ ಆಸಾಮಿಗಳು ಓಡಲಾರಂಬಿಸಿದಾಗ ಒಬ್ಬನನ್ನು ಬೆನ್ನಟ್ಟಿ ಹಿಡಿಯಲಾಯಿತು. ಆತನ ಹೆಸರು (1) ಖಾಸಿಂ ಬಿನ್ ಭಾಷಾ, ಎಸ್.ಎನ್. ನಗರ, ಸಾಗರ ಟೌನ್ ಎಂದು ಮತ್ತು ಓಡಿಹೋದವರ ಹೆಸರು (1) ಮಂಜ ಅಲಿಯಾಸ್ ಗದ್ದೆ ಮಂಜ, ಅಂದಾಜು 28 ವರ್ಷ, ಎಸ್.ಎನ್. ನಗರ, ಸಾಗರ ಟೌನ್ ವಾಸಿ (2) ಮುಸ್ತಾಫ್, ಅಂದಾಜು 38 ವರ್ಷ, ಕಾರ್ಗಲ್ ವಾಸಿ, ಸಾಗರ ತಾಲ್ಲೂಕು ಎಂದು ಹಿಡಿದ ಆಸಾಮಿಯು ಹೇಳಿರುತ್ತಾನೆ. ನಂತರ ಆಸಾಮಿಯನ್ನು ವಾಹನದ ಬಳಿ ಕರೆತಂದು ವಾಹನವನ್ನು ಪರಿಶೀಲಿಸಿ ನೋಡಲಾಗಿ, ವಾಹನದೊಳಗೆ ಸಾಗುವಾನಿ ನಾಟಾಗಳಿದ್ದು, ಈ ನಾಟಾಗಳ ಮೇಲೆ ಇಲಾಖೆಯ ಯಾವುದೇ ಛಾಪಾದ ಗುರುತಿರಲಿಲ್ಲ. ಮತ್ತು ಸಾಗಿಸಲು ರಹದಾರಿ ಇರಲಿಲ್ಲ. ಆದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ವಾಹನ ಟಾಟಾ 207 ಡಿ.ಐ. ಕೆಎ–15–3147ನ್ನು, ಅದರಲ್ಲಿದ್ದ ಸಾಗುವಾನಿ ನಾಟಾ 9=1.607ಎಂ3ನ್ನು ಹಾಗೂ ಆಸಾಮಿಯನ್ನು ಇಲಾಖಾ ಪರ ವಶಪಡಿಸಿಕೊಂಡು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿ ಪ್ರಕಾರ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24 62, 71(ಎ), 80 ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಅರಣ್ಯ ಮೊಕದ್ದಮೆ ಸಂಖ್ಯೆ:151/06–07ನ್ನು ದಾಖಲಿಸಿಲಾಯಿತು. ನಂತರ ಆಸಾಮಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿ, ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಸದರಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಈ ನ್ಯಾಯಾಲಯದಿಂದ ಆದೇಶವಾಗಿದೆ.

ಈ ಪ್ರಕರಣದಲ್ಲಿ ವಿಚಾರಣಾ ವರದಿಯನ್ನು ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಸಲ್ಲಿಸಿ ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ಕೋರಿರುತ್ತಾರೆ.

ನಂತರ ಈ ವಾಹನದ ಆರ್.ಸಿ. ಮಾಲಿಕರ ಬಗ್ಗೆ ತಿಳಿಯಲು ನ್ಯಾಯಾಲಯದಿಂದ ಸಂಖ್ಯೆ: ಬಿ3:ಅಮೊ:ವಾಹನ–32/06–07 ದಿ:09–04–2007ರಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾಗರ ಇವರಿಗೆ ಪತ್ರ ಬರೆದು ಈ ವಾಹನದ 'ಬಿ'ಎಕ್ಸ್‌ಟ್ರ್ಯಾಕ್ಟ್‌ನ್ನು ಒದಗಿಸಲು ಕೋರಿದೆ. ಈ ವಾಹನದ 'ಬಿ'ಎಕ್ಸ್‌ಟ್ರ್ಯಾಕ್ಟ್‌ನ್ನು ಸಾರಿಗೆ ಅಧಿಕಾರಿ, ಸಾಗರ ಇವರು ಪತ್ರ ಸಂಖ್ಯೆ:ಸಪ್ರಾಸಾಅ/ಸಾಗರ /ಬಿವಹಿ/07–08 ದಿ:09–05–2007ರ ಮುಖಾಂತರ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ಆರ್.ಸಿ. ಮಾಲಿಕರಾದ ಶ್ರೀ ಅಬ್ದುಲ್ ವಾಹಿದ್ ಬಿನ್ ಕೆ. ಮಹಮ್ಮದ್ ಸಾಹೇಬ್, ಜನ್ನತ್ ನಗರ, 4ನೇ ಕ್ರಾಸ್, ಸಾಗರ ಇವರಿಗೆ ದಿ:24–03–2008 ರಂದು ಕಾರಣ ಕೇಳಿ ಪತ್ರವನ್ನು 30 ದಿನಗಳ ಕಾಲವಕಾಶ ನೀಡಿ ನೋಟೀಸ್‌ನ್ನು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ.

ವಾಹನದ ಮಾಲೀಕರು ಈ ವಾಹನವನ್ನು ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಕೋರಿ ಈ ನ್ಯಾಯಾಲಯಕ್ಕೆ ದಿ:08–05–2007 ರಂದು ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯನ್ನು ದಿ:23–01–2010 ರಂದು ತಿರಸ್ಕರಿಸಿ ಆದೇಶ ಹೊರಡಿಸಿದೆ.

ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಎ.ಜಿ.ಯೋಗೇಂದ್ರಪ್ಪ ವನಪಾಲಕ, ಆನಂದಪುರಂ ವಲಯ, ತುಪ್ಪೂರು ಶಾಖೆ, ಇವರನ್ನು ದಿ:17–07–2010 ರಂದು ನ್ಯಾಯಾಲಯಕ್ಕೆ ಕರೆಯಿಸಿ ಸತ್ಯಪ್ರತಿಜ್ಞೆ ಭೋದಿಸಿ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ "ಕಳೆದ ನಾಲ್ಕು ವರ್ಷಗಳಿಂದ ಚೋರಡಿ ವಲಯದ ತುಪ್ಪೂರು ಶಾಖೆಯಲ್ಲಿ ವನಪಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:22–03–2007 ರಂದು ರಾತ್ರಿ ಬಂದ ಮಾಹಿತಿಯ ಮೇರೆಗೆ ನಾನು ಇತರೆ ಸಿಬ್ಬಂದಿಗಳಾದ ಅರಣ್ಯ ರಕ್ಷಕ ಎಂ. ಹಾಲಪ್ಪ ಮತ್ತು ವಾಹನ ಚಾಲಕ ಚಂದ್ರಶೇಖರ್ ಮತ್ತು ಲೋಕೇಶ ಇವರೊಂದಿಗೆ ಇಲಾಖಾ ವಾಹನದಲ್ಲಿ ಬಿ.ಹೆಚ್. ರಸ್ತೆಯ ಗಿಳಾಲಗುಂಡಿಯ ಹತ್ತಿರ ವಾಹನ ನಿಲ್ಲಿಸಿ ನೆಡುತೋಪಿನಲ್ಲಿ ಕಾಯುತ್ತಿದ್ದಾಗ ದಿ:23–03–2007 ರಂದು ಬೆಳಿಗ್ಗೆ 6–00 ಗಂಟೆಗೆ ಕಾಡಿನ ಕಡೆ ರಸ್ತೆಯಿಂದ ಮುಖ್ಯ ರಸ್ತೆಗೆ ಒಂದು ವಾಹನ ಬರುತ್ತಿರುವುದನ್ನು ನೋಡಿ ಅದನ್ನು ಅಡ್ಡಹಾಕಿ ನಿಲ್ಲಿಸಲು ಪ್ರಯತ್ನಿಸಿದೆವು. ವಾಹನವನ್ನು ನಿಲ್ಲಿಸಿ ಅದರಲ್ಲಿದ್ದ 3 ಜನ ಓಡಿಹೋಗಿದ್ದು, ನಾವು ಬೆನ್ನಟ್ಟಿ ಅವರಲ್ಲಿ ಒಬ್ಬನನ್ನು ಹಿಡಿದೆವು. ನಾವು ತಡೆದ ವಾಹನ ಹಸಿರು ಬಣ್ಣದ ಟಾಟಾ 207 ಡಿ.ಐ. ಆಗಿದ್ದು, ಅದರಲ್ಲಿ ಅಗತಾನೆ ಕತ್ತರಿಸಿದ ಹಸಿಯಾದ ಸಾಗುವಾನಿ ತುಂಡುಗಳಿದ್ದವು. ನಂತರ ಹಿಡಿದ ವ್ಯಕ್ತಿಯನ್ನು ವಿಚಾರಿಸಲಾಗಿ ಅವನ ಹೆಸರು ಖಾಸಿಂ ಎಂದು ಹೇಳಿ ವಿಳಾಸ ಹೇಳಿದ ಓಡಿಹೋದ ವ್ಯಕ್ತಿಗಳನ್ನು ಮಂಜು ಮತ್ತು ಮುಸ್ತಾಫ್ ಎಂದು ಹೇಳಿದ. ಆತನ ಬಳಿ ಸದರಿ ತುಂಡುಗಳನ್ನು ಸಾಗಿಸಲು ರಹದಾರಿಯಾಗಲೀ, ಇಲಾಖಾ ಯಾವುದೇ ಛಾಪಾದ ಗುರುತು ಇರಲಿಲ್ಲ. ಆದ್ದರಿಂದ ಇದನ್ನು ಅಕ್ರಮ ಸಾಗಾಣಿಕೆ ಎಂದು ತೀರ್ಮಾನಿಸಿ, ತುಂಡುಗಳಿಗೆ ಕ್ರಮ ಸಂಖ್ಯೆ ಕೊಟ್ಟು, ಅಳತೆ ಮಾಡಿ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡು ಮಹಜರ್ ಬರೆದೆವು. ವಾಹನ ಸಂಖ್ಯೆ ಕೆಎ–15–3147 ಆಗಿರುತ್ತದೆ. ಸಾಗುವಾನಿ ತುಂಡುಗಳು ಒಟ್ಟು 09=1.607 ಎಂ3 ಇತ್ತು. ಆರೋಪಿ ಹಾಗೂ ತುಂಡುಗಳೊಂದಿಗೆ ಕಛೇರಿಗೆ ಬಂದೆವು. ಸ್ಥಳದಲ್ಲಿ ಮಾಡಿದ ಮಹಜರ್‌ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿನ ನನ್ನ ಸಹಿಯನ್ನು 1ಎ ಎಂದು ಗುರ್ತಿಸಿದೆ. ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿದ್ದು, ಅದನ್ನು ನಿಶಾನೆ ಪಿ2 ಎಂದು, ನನ್ನ ಸಹಿಯನ್ನು 2ಎ ಎಂದು, ಜಪ್ತು ವರದಿಯನ್ನು ನಿಶಾನೆ ಪಿ3 ಎಂದು, ನನ್ನ ಸಹಿಯನ್ನು 3ಎ ಎಂದು ಗುರ್ತಿಸಿದೆ. ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರ್ಪಡಿಸಿದೆವು. ವಾಹನ ಮತ್ತು ಸಾಗುವಾನಿ ತುಂಡುಗಳನ್ನು ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರಕ್ಕೆ ಸಾಗಿಸಿದೆವು. ಮುಂದಿನ ತನಿಖೆಯನ್ನು ವಲಯ ಅರಣ್ಯಾಧಿಕಾರಿಗಳಿಗೆ ಒಪ್ಪಿಸಿರುತ್ತೇನೆ. ವಾಹನವನ್ನು ಅರಣ್ಯ ಉತ್ಪನ್ನಗಳ ಅಕ್ರಮ ಸಾಗಾಣಿಕೆಗೆ ಉಪಯೋಗಿಸಿರುವುದರಿಂದ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ.

ಪಾಟಿ ಸವಾಲಿಗೆ ಡಿಫೆನ್ಸ್ ಕಡೆಯ ವಕೀಲರಿಗೆ ತಿಳಿವಳಿಕೆ ಪತ್ರದ ಮೂಲಕ ತಿಳಿಸಿದ್ದು ಹಾಗೂ ಆ ಪತ್ರಕ್ಕೆ ಡಿಫೆನ್ಸ್ ಕಡೆಯ ವಕೀಲರು ಸಹಿ ಮಾಡಿದ್ದರೂ ಸಹಾ 17–07–2010ರಂದು ಡಿಫೆನ್ಸ್ ಕಡೆಯ ವಕೀಲರು ಗೈರು ಹಾಜರಾಗಿರುತ್ತಾರೆ. ಪಾಟಿಸವಾಲು ಇಲ್ಲವೆಂದು ತೀರ್ಮಾನಿಸಲಾಯಿತು.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:19–02–2011, 26–02–2011, 05–03–2011, 02–04–2011,ರಂದು ಮತ್ತು ವಾದ ಮಂಡಿಸಲು ದಿ:28–05–2011 ರಂದು ದಿನಾಂಕ ನೀಡಿ ತಿಳಿಸಿದರೂ ಸಹ ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:28–05–2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ 207 ಕೆಎ–15–3147 ರಲ್ಲಿ 09 ಸಾಗುವಾನಿ ನಾಟಾ 1.607ಎಂ3ನ್ನು ದಿ:23–03–2007ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?
3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ 207 ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಸಾಗುವಾನಿ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?
4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ–1: ದಿ:23–03–2007 ರಂದು ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಮತ್ತು ಸಿಬ್ಬಂದಿಯವರು ಶಿವಮೊಗ್ಗ ತಾ॥ ಕುಂಸಿ ಹೋಬಳಿ ಕೋಣೆಹೊಸೂರು ಗ್ರಾಮದ ಗಿಳಾಲಗುಂಡಿ ಮೀಸಲು ಅರಣ್ಯದ ಸಾಗುವಾನಿ ನೆಡುತೋಪಿನಿಂದ ಎನ್.ಹೆಚ್–206ರ ಕಡೆ ಟಾಟಾ 207 ಕೆಎ–15 3147ರಲ್ಲಿ ಸಾಗುವಾನಿ ನಾಟಾ 09=1.670 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಸಾಗುವಾನಿ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ–2:

ಆರ್.ಸಿ. ಮಾಲೀಕರಾದ ಶ್ರೀ ಕೆ.ಅಬ್ದುಲ್ ವಾಹಿದ್ ಬಿನ್ ಕೆ.ಮಹ್ಮದ್‌ವಾಹಿದ್, 50 ವರ್ಷ, 4ನೇ ಕ್ರಾಸ್, ಜನ್ನತ್‌ನಗರ ವಾಸಿ, ಸಾಗರ ಟೌನ್, ಇವರು ದಿ:08–05–2007 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. 'ಬಿ' ಎಕ್ಸ್‌ಟ್ರಾಕ್ಟ್‌ನಲ್ಲಿ ನಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:24–03–2008 ರಂದು ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ನಾಲ್ಕು ಬಾರಿ ದಿನಾಂಕಗಳನ್ನು ನೀಡಲಾಗಿದ್ದು. ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ–3:

ದಿ:23–03–2007 ರಂದು ಟಾಟಾ 207 ನಂ:ಕೆಎ–15–3147ರಲ್ಲಿ 9 ಸಾಗುವಾನಿ ನಾಟಾ 01.607 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಆನಂದಪುರಂ, ವಲಯ, ಚೋರಡಿಯ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಆನಂದಪುರಂ, ವಲಯ ಚೋರಡಿ ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:08–05–2007ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ದರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of-Ramesh N. Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that "the owners required to show under sub-section (2) of section 71-B is that he, his agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. ………………………………………………………………………………It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse".

ಅಲ್ಲದೇ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡ ಬಗ್ಗೆ ಯಾವುದೇ ಸಾಕ್ಷಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದಿಲ್ಲ.

ಅಂಶ–4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ಅರಣ್ಯ ಮೊಕದ್ದಮೆಯಲ್ಲಿ ಜಪ್ತು ಮಾಡಿದ ಟಾಟಾ–207 ಕೆಎ–15–3147 (ಇಂಜಿನ್ ನಂ:497SP27GVZ911398, ಛಾಸ್ಸಿಸ್ ನಂಬರ್:374435GVZ926399) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಸಾಗುವಾನಿ ನಾಟಾ 09=1.607 ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ **ದಿ:25–06–2011** ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್. 911 **ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ.**

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ:ವಿವ:38/08–09 ದಿನಾಂಕ:16–07–2011

ಉಪಸ್ಥಿತರು : ಶ್ರೀ ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ,
ಆನವಟ್ಟಿ ವಲಯ, ಆನವಟ್ಟಿ.(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಭಾದ್ಯತೆದಾರರು : ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರ ಜಿಪಿಎ ಶ್ರೀ ಬಶೀರ್ ಅಹಮದ್ ಬಿನ್ ಗೌಸ್ ಮೊಹಿದ್ದೀನ್, ಸವಣೂರು, ತಿಳುವಳ್ಳಿ ವಾಸಿ, ಹಾನಗಲ್ ತಾ॥, ಧಾರವಾಡ ಜಿಲ್ಲೆ. (ಶ್ರೀ ಎಂ.ಹೆಚ್. ಬೆಂಡಿಗೇರಿ, ವಕೀಲರು, ಶಿಗ್ಗಾಂ)

ಪ್ರಸ್ತಾವನೆ:–

ದಿ:27–12–2008 ರಂದು ಆನವಟ್ಟಿ ವಲಯದ ಆನವಟ್ಟಿ ಶಾಖೆಯ ವನಪಾಲಕರು ಹಸವಿ ಗ್ರಾಮದ ಸಮೀಪ ಗಸ್ತು ತಿರುಗುತ್ತಿರುವಾಗ ಒಂದು ವಾಹನದಲ್ಲಿ ಅರಣ್ಯ ಉತ್ಪನ್ನ ಅಕ್ರಮ ಸಾಗಾಣಿಕೆ ಮಾಡಿದ ಬಗ್ಗೆ ಬರೆದ ಮಹಜರ್‌ನ ವಿವರ ಈ ಕೆಳಗಿನಂತಿದೆ.

ದಿ:27–12–2008ರಂದು ಆನವಟ್ಟಿ ವಲಯದ ಆನವಟ್ಟಿ ಶಾಖೆಯ ವನಪಾಲಕ ಮತ್ತು ಸಿಬ್ಬಂದಿಯವರು ಸೊರಬ ತಾ॥ ಕುಪ್ಪಗಡ್ಡೆ ಹೋಬಳಿ, ಹಸವಿ ಗ್ರಾಮದ ಬೆಟ್ಟದ ಕುರ್ಲಿ ಮೀಸಲು ಅರಣ್ಯದ ಸಾಗುವಾನಿ ನೆಡುತೋಪಿನ ಡಿ ಲೈನ್ ಕಲ್ಲು ಸಂಖ್ಯೆ: 18 ಮತ್ತು 19 ರಲ್ಲಿ ಗಸ್ತು ಕಾರ್ಯ ಮಾಡುತ್ತಿರುವಾಗ ದಿ:28–12–2008ರ ಬೆಳಗಿನ ಜಾವ ಸುಮಾರು 4–00 ಗಂಟೆಯ ಸಮಯದಲ್ಲಿ 1 ವಾಹನಕ್ಕೆ ತುಂಡುಗಳನ್ನು ಹಾಕುತ್ತಿರುವ ಶಬ್ದ ಕೇಳಿ ಬ್ಯಾಟರಿ ಬೆಳಕಿನ ಸಹಾಯದಿಂದ ಹತ್ತಿರ ಹೋಗುತ್ತಿರುವಾಗ ಇಲಾಖೆಯವರನ್ನು ನೋಡಿ ಅಲ್ಲಿದ್ದ 8, 10 ಜನ ಅಸಾಮಿಗಳು ಕತ್ತಲೆಯಲ್ಲಿ ಪರಾರಿಯಾದರು. ತಕ್ಷಣ ಇಲಾಖಾ ಡಿ.ಬಿ.ಬಿ.ಎಲ್. ಬಂದೂಕಿನಿಂದ ಒಂದು ಸುತ್ತು ಗುಂಡು ಗಾಳಿಯಲ್ಲಿ ಹಾರಿಸಿ, ನಂತರ ವಾಹನ ಪರಿಶೀಲಿಸಲಾಗಿ ಟಾಟಾ 709 ಕೆಎ–25–ಎ–5148, ಛಾಸ್ಸಿಸ್ ನಂ:386125–K–22822893, ಇಂಜಿನ್ ನಂ:497–TC–84–K–22772333 ಇದ್ದು, ವಾಹನದೊಳಗಡೆ 15 ಸಾಗುವಾನಿ ತುಂಡಿದ್ದು, ವಾಹನದ ಕೆಳಗೆ 5 ಸಾಗುವಾನಿ ತುಂಡಿದ್ದು, ಒಟ್ಟು 20=1.403 ಎಂ3 ಪ್ರಮಾಣವಿದ್ದು, ಈ ತುಂಡುಗಳು ಹಸಿಯಾಗಿದ್ದು, ಗರಗಸದಿಂದ ಕೊಯ್ದ ತುಂಡುಗಳಾಗಿದ್ದು, ಈ ತುಂಡುಗಳಿಗೆ ಛಾಪಾದ ಗುರುತಿರಲಿಲ್ಲ. ಹಾಗೂ ಸಾಗಿಸಲು ರಹದಾರಿ ಇಲ್ಲದ ಕಾರಣ, ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ವಾಹನ ಮತ್ತು ಸಾಗುವಾನಿ ನಾಟಾವನ್ನು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 62, 71(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಆನವಟ್ಟಿ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 98/08–09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ಪ್ರಕರಣದಲ್ಲಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವಲಯ ಅರಣ್ಯಾಧಿಕಾರಿ, ಆನವಟ್ಟಿ ಇವರ ಪತ್ರ ಸಂಖ್ಯೆ:368/09–10ದಿ: 08–07–2009ರಂದು ವಿಚಾರಣಾ ವರದಿ ಸಲ್ಲಿಸಿ ಕೋರಿರುತ್ತಾರೆ.

ಈ ವಾಹನದ 'ಬಿ' ಪ್ರತಿಯನ್ನು ಒದಗಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿ, ಧಾರವಾಡ ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ:ವಾಹನ–38/08–09 ದಿ:29–12–2008ರಂದು ಪತ್ರ ಬರೆದು ಕೋರಲಾಗಿತ್ತು. 'ಬಿ' ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲಿಕರಾದ ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲೆ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1)ರ ಪ್ರಕಾರ ಕಾರಣ ಕೇಳಿ ನೋಟಿಸ್‌ನ್ನು 30 ದಿನಗಳ ಕಾಲಾವಕಾಶ ನೀಡಿ ದಿ:02–06–2009ರಂದು ನೊಂದಣಿ ಅಂಚೆ ಮೂಲಕ ಜಾರಿಮಾಡಿದೆ.

ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲೆ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರ ಜಿಪಿಎದಾರರಾದ ಶ್ರೀ ಬಶೀರ್ ಅಹಮದ್ ಬಿನ್ ಗೌಸ್ ಮೊಹಿದ್ದೀನ್, ಸವಣೂರು, ತಿಳುವಳ್ಳಿ ವಾಸಿ, ಹಾನಗಲ್ ತಾ॥, ಧಾರವಾಡ ಜಿಲ್ಲೆ ಇವರು ವಕೀಲರ ಮುಖಾಂತರ ದಿ:18–04–2009ರಂದು ಮನವಿ ತಯಾರಿಸಿ, ವಾಹನ ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಈ ನ್ಯಾಯಾಲಯವನ್ನು ಕೋರಿರುತ್ತಾರೆ. ಇವರ ಅರ್ಜಿಯನ್ನು ದಿ:02–01–2010ರಂದು ಈ ನ್ಯಾಯಾಲಯದಿಂದ ತಿರಸ್ಕರಿಸಿ ಆದೇಶವಾಗಿದೆ.

ಪ್ರಾಸಿಕ್ಯೂಶನ್ ಸಾಕ್ಷಿ ಶ್ರೀ ರವೀಂದ್ರ ವನಪಾಲಕ, ಆನವಟ್ಟಿ ವಲಯ, ಇವರನ್ನು ಹೇಳಿಕೆ ಪಡೆಯಲು ದಿ:19–02–2011 ರಂದು ನ್ಯಾಯಾಲಯಕ್ಕೆ ಕರೆಸಿ ಸತ್ಯಪ್ರತಿಜ್ಞೆ ಬೋಧಿಸಿ, ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ಕಳೆದ 5 ವರ್ಷಗಳಿಂದ ಆನವಟ್ಟಿ ನಗರ ಶಾಖೆಯಲ್ಲಿ ವನಪಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:27–12–2008ರ ರಾತ್ರಿ ಸಿಬ್ಬಂದಿ ಜೊತೆಯಲ್ಲಿ ಬೆಟ್ಟದಕುರ್ಲಿ ಸಾಗುವಾನಿ ನೆಡುತೋಪಿನಲ್ಲಿ ಗಸ್ತು ಮಾಡುತ್ತಿದ್ದಾಗ ದಿ:28–12–2008ರ ಬೆಳಗಿನ ಜಾವ ಸುಮಾರು 4–00 ಗಂಟೆ ಸಮಯದಲ್ಲಿ ವಾಹನಕ್ಕೆ ತುಂಡುಗಳನ್ನು ತುಂಬುತ್ತಿರುವ ಶಬ್ದ ಕೇಳಿ ಬ್ಯಾಟರಿ ಬೆಳಕು ಬಿಟ್ಟು ನೋಡಲಾಗಿ, ಮಿನಿಲಾರಿಗೆ 8–10 ಜನ ಸಾಗುವಾನಿ ತುಂಡುಗಳನ್ನು ತುಂಬುತ್ತಿದ್ದುದು ಕಂಡುಬಂತು. ಕೂಡಲೇ ಇಲಾಖಾ ಬಂದೂಕಿನಿಂದ ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ಆಗ ಎಲ್ಲಾ ಜನರು ಕೈಗೆ ಸಿಗದೇ ಓಡಿ ಹೋಗಿರುತ್ತಾರೆ. ಸ್ಥಳ ಪರಿಶೀಲಿಸಲಾಗಿ ಅದು ಮಿನಿಲಾರಿ ಕೆಎ–25–ಎ–5148 ಆಗಿದ್ದು, ಅದಕ್ಕೆ 15 ಸಾಗುವಾನಿ ತುಂಡುಗಳನ್ನು ತುಂಬಿದ್ದು, ಇನ್ನೂ ಕೆಳಗೆ 5 ತುಂಡುಗಳು ಇದ್ದವು. ಸದರಿ ತುಂಡುಗಳು ಗರಗಸದಿಂದ ಕೊಯ್ದ ಹಸಿ ತುಂಡುಗಳಾಗಿದ್ದವು. ಹಾಗೂ ಅವುಗಳ ಮೇಲೆ ಯಾವುದೇ ಇಲಾಖಾ ಛಾಪಾ ಇರಲಿಲ್ಲ. ಸ್ಥಳದಿಂದ 5 ಕಿ.ಮೀ. ಅಂತದಲ್ಲಿ 2 ಸಾಗುವಾನಿ ತುಂಡುಗಳನ್ನು ಕತ್ತರಿಸಿ ತುಂಡುಗಳನ್ನಾಗಿ ಪರಿವರ್ತಿಸಲಾಗಿತ್ತು. ತುಂಡುಗಳನ್ನು ಅಳತೆ ಮಾಡಿ, ಸಂಖ್ಯೆಗಳನ್ನು ಕೊಟ್ಟು, ಇಲಾಖಾ ಛಾಪಾ ಮುದ್ರಿಸಿ, ಇಲಾಖಾ ಪರ ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಬರೆಯಲಾಯಿತು. ನಂತರ ಲಾರಿ ಮತ್ತು ತುಂಡುಗಳನ್ನು ಕಛೇರಿಗೆ ಸಾಗಿಸಿ ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿರುತ್ತೇನೆ. ಜಪ್ತು ಪಟ್ಟಿ ತಯಾರಿಸಲಾಯಿತು. ಮುಂದಿನ ತನಿಖೆಯನ್ನು ವಲಯ ಅರಣ್ಯಾಧಿಕಾರಿಗಳಿಗೆ ವಹಿಸಿದೆನು. ಸ್ಥಳದಲ್ಲಿ ಮಾಡಿದ ಮಹಜರ್‌ನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿನ ನನ್ನ ಸಹಿಯನ್ನು 1ಎ ಎಂದು ಗುರುತಿಸಿದೆ. ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿದ್ದು, ಅದನ್ನು ನಿಶಾನೆ ಪಿ2 ಎಂದು, ನನ್ನ ಸಹಿಯನ್ನು 2ಎ ಎಂದು, ಜಪ್ತು ವರದಿಯನ್ನು ನಿಶಾನೆ ಪಿ3 ಎಂದು, ನನ್ನ ಸಹಿಯನ್ನು 3ಎ ಎಂದು ಗುರುತಿಸಿದೆ. ವಾಹನದಲ್ಲಿದ್ದ ಸಾಗುವಾನಿ ತುಂಡುಗಳನ್ನು ಸರ್ಕಾರಿ ನಾಟಾ ಸಂಗ್ರಹಾಲಯ ಮತ್ತು ವಾಹನವನ್ನು ಅಧಿಕೃತ ಅಧಿಕಾರಿ ಹಾಗು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಮತಿಯ ಮೇರೆಗೆ ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರಕ್ಕೆ ಸಾಗಿಸಿದೆವು. ಸದರಿ ವಾಹನವನ್ನು ಅರಣ್ಯ ಉತ್ಪನ್ನಗಳ ಅಕ್ರಮ ಸಾಗಾಣಿಕೆಗೆ ಉಪಯೋಗಿಸಿರುವುದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ".

ಪಾಟಿಸವಾಲು ಮಾಡಲು ದಿ:19–02–2011ರಂದು ಡಿಫೆನ್ಸ್ ಕಡೆಯ ವಕೀಲರು ಗೈರು ಹಾಜರಾಗಿದ್ದರಿಂದ ಪಾಟಿಸವಾಲು ಇಲ್ಲವೆಂದು ಪರಿಗಣಿಸಿ, ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಲಾಯಿತು.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:05–03–2011, 02–04–2011, 28–05–2011 ರಂದು ಮತ್ತು ವಾದ ಮಂಡಿಸಲು ದಿ:02–07–2011 ರಂದು ದಿನಾಂಕ ನೀಡಿ ತಿಳಿಸಿದರೂ ಸಹ ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:02–07–2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ, ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ–709 ನಂ:ಕೆಎ–25–ಎ–5148 ರಲ್ಲಿ 20 ಸಾಗುವಾನಿ ನಾಟಾ 01.403ಎಂ3ನ್ನು ದಿ:28–12–2008 ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ–709ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಸಾಗುವಾನಿ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ–1:

ದಿ:27–12–2008 ರಂದು ಆನವಟ್ಟಿ ವಲಯದ ವನಪಾಲಕರು ಮತ್ತು ಸಿಬ್ಬಂದಿಯವರು ಸೊರಬ ತಾ॥ ಕುಪ್ಪಗಡ್ಡೆ ಹೋಬಳಿ ಬೆಟ್ಟದಕುರ್ಲಿ ರಕ್ಷಿತ ಅರಣ್ಯದ ಸಾಗುವಾನಿ ನೆಡುತೋಪಿನಲ್ಲಿ ರಾತ್ರಿ 11–30ಕ್ಕೆ ಗಸ್ತು ಕಾಯುತ್ತಿರುವಾಗ, ದಿ:28–12–2008ರ ಬೆಳಗಿನ ಜಾವ ಸುಮಾರು 4–00 ಗಂಟೆಗೆ ಒಂದು ಟಾಟಾ–709ಗೆ 8–10 ಜನ ಸಾಗುವಾನಿ ನಾಟಾ 20=1.403 ಎಂ3ನ್ನು ತುಂಬಿ ಅಕ್ರಮವಾಗಿ ಸಾಗಿಸಲು ಪ್ರಯತ್ನಿಸುತ್ತಿದ್ದಾಗ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಸಾಗುವಾನಿ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ–2:

ಆರ್.ಸಿ. ಮಾಲೀಕರಾದ ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರ ಜಿಪಿಎ ಶ್ರೀ ಬಶೀರ್ ಅಹಮದ್ ಬಿನ್ ಗೌಸ್ ಮೊಹಿದ್ದೀನ್, ಸವಣೂರು, ತಿಳುವಳ್ಳಿ ವಾಸಿ, ಹಾನಗಲ್ ತಾ॥, ಧಾರವಾಡ ಜಿಲ್ಲೆ. ಇವರು ದಿ:18–04–2009 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:07–06–2009ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದ ಲಕೋಟೆಯ ಮೇಲೆ ಅಂಚೆ ಇಲಾಖೆಯವರು " No Such Number in " ಎಂದು ನಮೂದಿಸಿ ಈ ನ್ಯಾಯಾಲಯಕ್ಕೆ ಹಿಂದಿರುಗಿಸಿರುತ್ತಾರೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ಮೂರು ಬಾರಿ ದಿನಾಂಕಗಳನ್ನು ನೀಡಲಾಗಿದ್ದು. ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ–3:

ದಿ:28–12–2008 ರಂದು ಟಾಟಾ–709 ನಂ: ಕೆಎ–25–ಎ–5148ರಲ್ಲಿ 20 ಸಾಗುವಾನಿ ನಾಟಾ 1.403 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಆನವಟ್ಟಿ ವಲಯದ ವನಪಾಲಕರು ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ, ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:18–04–09ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ಧರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವಾನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of - Ramesh N Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that the owners required to show under sub-section (2) of section 71-B is that he, his

agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. ………………………………………………………………………………It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse. ಅಲ್ಲದೇ ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬುದು ನನ್ನ ಉತ್ತರವಾಗಿರುತ್ತದೆ.

ಅಂಶ–4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ, ಇವರು ಜಪ್ತು ಮಾಡಿದ ಟಾಟಾ–709 ನಂ:ಕೆಎ–25 ಎ–5148 (ಛಾಸ್ಸಿಸ್ ನಂ: 386125-K-22822893, ಇಂಜಿನ್ ನಂ: 497-TC-84-K-22772333) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಸಾಗುವಾನಿ ನಾಟಾ 20=1.403ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ **ದಿ:16–07–2011** ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಪಿ.ಆರ್. 766 **ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ.**

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/22/ಡಿಟಿಸಿಆರ್/2010–11 ದಿನಾಂಕ: 22–09–2011

ಉಪಸ್ಥಿತರು: **ಬಿ.ವಿ. ಹೂವಪ್ಪಗೌಡ** ಅಧಿಕೃತ ಅಧಿಕಾರಿಗಳು ಹಾಗೂ ಡಿಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು
ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ
ಪುತ್ತೂರು.

ಆರೋಪಿ

1) ಜಗದೀಶ ಶೆಟ್ಟಿ, ಬಿನ್:ರೋಹಿತಾಶ್ವ ಶೆಟ್ಟಿ, ವಾಸ: ಕುತ್ಯಾಳ ಮನೆ, ನೆಟ್ಟಣಿಗೆ ಮಾಡ್ನೂರು ಗ್ರಾಮ, ಪುತ್ತೂರು
2) ಸದಾನಂದ ರೈ, ಬಿನ್:ಬೀರಣ್ಣ ರೈ, ವಾಸ: ಅರೆಪ್ರಾಡಿ ಮನೆ, ಪಡ್ಡೆ ಬಡಗನ್ನೂರು ಗ್ರಾಮ, ಪುತ್ತೂರು ತಾಲೂಕು

ವಾಹನದ ಮಾಲೀಕರು

ಶ್ರೀ.ಸಂಜೀವ ರೈಕೆ, ಬಿನ್:ಮೈಲಪ್ಪ ರೈ, ಕೊಲ್ಯ ಹೌಸ್, ನೆಟ್ಟಣಿಗೆ ಅಂಚೆ,ಬೆಳ್ಳೂರು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:21–8–2010ರಂದು ಸಂಜೆ 3–30 ಗಂಟೆ ಸಮಯಕ್ಕೆ ಫಿರ್ಯಾದುದಾರರಾದ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಖಚಿತ ಮಾಹಿತಿಯ ಮೇರೆಗೆ ಪುತ್ತೂರು ತಾಲೂಕಿನ ನೆಟ್ಟಣಿಗೆ ಮುಡ್ನೂರು ಗ್ರಾಮದ ಈಶ್ವರಮಂಗಲ–ಕರ್ನೂರು ಎಂಬಲ್ಲಿ ಶ್ರೀ.ಪಂಚಲಿಂಗೇಶ್ವರ ದೇವಸ್ಥಾನದ ಕೂಡು ರಸ್ತೆಯ ಸಮೀಪ ವಾಹನ ತಪಾಸಣೆ ನಡೆಸುತ್ತಿದ್ದಾಗ ಈಶ್ವರ ಮಂಗಲ ಕಡೆಯಿಂದ ಕರ್ನೂರು ಕಡೆಗೆ ಬರುತ್ತಿದ್ದ ಜೀಪು ನೊಂದಣಿ ಸಂ: KL–14–4283 ಇದನ್ನು ತಪಾಸಣೆ ಮಾಡಿದಾಗ, ಜೀಪಿನ ಹಿಂಭಾಗದಲ್ಲಿ 8 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು 69.120 ಲೀ ಮದ್ಯವನ್ನು ಯಾವುದೇ ದಾಖಲಾತಿಗಳಿಲ್ಲದೇ ಅಕ್ರಮವಾಗಿ ಹೊಂದಿ

ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34,43(ಎ)ರಂತೆ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ ,ಅರೋಪಿಗಳಾದ ಜಗದೀಶ್ ಶೆಟ್ಟಿ, ಬಿನ್:ರೋಹಿತಾಶ್ವ ಶೆಟ್ಟಿ, ವಾಸ: ಕುತ್ಯಾಳ ಮನೆ, ನೆಟ್ಟಣಿಗೆ ಮೂಡ್ನೂರು ಗ್ರಾಮ, ಪುತ್ತೂರು ಮತ್ತು ಸದಾನಂದ ರೈ,ಬಿನ್: ಬೀರಣ್ಣ ರೈ, ವಾಸ:ಅರೆಪ್ಪಾಡಿ ಮನೆ, ಪಡ್ಡೆ ಬಡಗನ್ನೂರು ಗ್ರಾಮ, ಪುತ್ತೂರು ತಾಲೂಕು ಇವರುಗಳ ವಿರುದ್ದ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ ಕ್ರೈಂ ಸಂ: 81/2010, ದಿನಾಂಕ: 21-8-2010-ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿನಾಂಕ:7-9-2010ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು ಪುತ್ತೂರು ವಲಯ ಇವರಿಗೆ ದಿ:22-9-2010 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಜೀಪು ನೊಂದಣಿ ಸಂ: KL-14-4283

2) 8 ರಟ್ಟಿನ ಪೆಟ್ಟಿಗೆಗಳಲ್ಲಿ ತಲಾ 48ರಂತೆ 180 ಎಂ ಎಲ್ ನ ಜಾನ್ ಬುಲ್ ವಿಸ್ಕಿಯ ಒಟ್ಟು 384 ಬಾಟಲಿಗಳಲ್ಲಿ ಒಟ್ಟು 69.120 ಲೀಟರು ಮದ್ಯ.

(ಮೇಲಿನ 8 ಪೆಟ್ಟಿಗೆಗಳಿಂದ ತಲಾ 4ರಂತೆ ಒಟ್ಟು 32 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ:ಅನಿ/ಪು.ವ/ ಅರ್‌ಸಿಆರ್/10/2010-11 ದಿ: 26-11-2010ರೊಂದಿಗೆ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು,ಮಂಗಳೂರು ವಲಯ ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ:ಇಎಕ್ಸ್‌ನಂ: ಇ-196-8, 26-10-2010 ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಾಸರಗೋಡು ಇವರು ವಾಹನ ಸಂ: KL-14-4283 ಜೀಪಿನ ಬಗ್ಗೆ ನೀಡಿದ ಬಿ ಎಕ್ಸ್‌ಟ್ರಾಕ್ಟ್ ವರದಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರು ನೀಡಿದ ಮೌಲ್ಯ ಮಾಪನ ವರದಿ ಹಾಗೂ ಪ್ರಕರಣದ ದಾಖಲಾತಿಗಳ ಪ್ರತಿಗಳನ್ನು ಒಪ್ಪಿಸಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಳ್ಳಲಾದ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರದ ತೀಕ್ಷ್ಣತೆ 42% ವಿ/ವಿ ಇರುವುದಾಗಿ ದೃಡೀಕರಿಸಿರುತ್ತಾರೆ. ವಶಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ವರದಿಯಲ್ಲಿ ಶ್ರೀ.ಸಂಜೀವ ರೈ ಕೆ, ಬಿನ್:ಮೈಲಪ್ಪ ರೈ, ಕೊಲ್ಯ ಹೌಸ್, ನೆಟ್ಟಣಿಗೆ ಅಂಚೆ, ಬೆಳ್ಳೂರು ಇವರು ದಿನಾಂಕ: 20-11-2007ರಿಂದ ಅನ್ವಯವಾಗುವಂತೆ ವಾಹನದ ಮಾಲೀಕರಾಗಿರುವುದಾಗಿ ದೃಡೀಕೃತವಾಗಿರುವ ಮೇರೆಗೆ ಅವರಿಗೆ ಈ ಪ್ರಾಧಿಕಾರದಿಂದ ದಿ:08-03-2011ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೊಂದಾಯಿತ ಅಂಚೆಯ ಮೂಲಕ ನೀಡಲಾದ ಕಾರಣ ಕೇಳಿ ನೋಟಿಸು ದಿನಾಂಕ: 21-3-2011 ರಂದು ಜಾರಿಯಾಗಿದ್ದು, ಸದ್ರಿಯವರು ದಿ:12-05-2011ರಂದು ಉತ್ತರಿಸುತ್ತಾ ತಾನು ವಾಹನವನ್ನು ದಿ:23-03-2010 ರಂದು ಶ್ರೀ.ಅಮರನಾಥ ಆಳ್ವ ,ಬಿನ್:ರಾಮಣ್ಣ ಆಳ್ವ, ಅಮರ ನಿವಾಸ, ಕರ್ನೂರು ಮನೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ದ.ಕ ಜಿಲ್ಲೆ ಎಂಬವರಿಗೆ ಡೆಲಿವರಿ ನೋಟು ಪಡೆದು ಮಾರಾಟ ಮಾಡಿರುತ್ತೇನೆ. ಮತ್ತು ಈ ಬಗ್ಗೆ ಪಾರಂ ನಂ:2ನ್ನು ನೀಡಿರುತ್ತೇನೆ. ಸದ್ರಿ ವಾಹನ ಮಾರಾಟ ಮಾಡಲಾಗಿದ್ದರೂ , ನೋಂದಾಣಿ ಬದಲಾವಣೆ ಮಾಡದ ಬಗ್ಗೆ ಕಾಸರಗೋಡು ಅರ್.ಟಿ.ಓ ರವರಿಗೆ ಸದ್ರಿ ಈ ಎರಡು ದಾಖಲೆಗಳ ಪ್ರತಿಯನ್ನು ಲಗತ್ತಿಸಿ ದೂರು ನೀಡಿರುತ್ತೇನೆ ಎಂದು ತಿಳಿಸಿ ತನಗೂ , ವಾಹನಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದು ಹಾಗೂ ಕಾನೂನಿನಲ್ಲಿ ಯುಕ್ತ ಕಂಡ ಕ್ರಮ ಜರುಗಿಸಬಹುದೆಂದು ಉತ್ತರಿಸಿರುತ್ತಾರೆ.ವಾಹನ ಶ್ರೀ.ಅಮರನಾಥ ಆಳ್ವ ಇವರಿಗೆ ಪರಭಾರೆ ಆದ ಬಗ್ಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಯಾವುದೇ ಅಧಿಕೃತ ದಾಖಲೆಗಳು ಲಭ್ಯವಿರುವುದಿಲ್ಲ ಹಾಗೂ ಪ್ರಕರಣ ದಾಖಲಾಗಿ 1 ವರ್ಷ ಕಳೆದರೂ ವಾಹನದ ಮಾಲೀಕ /ಸುಪರ್ಧಿ ಹೊಂದಿರುವವರಾಗಲೀ ಅವರ ಪರ ಪ್ರತಿನಿಧಿಗಳಾಗಲೀ ಸದ್ರಿ ವಾಹನಕ್ಕೆ ವಾರೀಸುದಾರಿಕೆ ನಿರೂಪಿಸಿ ಅದನ್ನು ಹಸ್ತಾಂತರ ಪಡೆಯುವ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದು ಕಂಡು ಬರುವುದಿಲ್ಲ. ಅಬಕಾರಿ ಕಾಯಿದೆ 43 ಎ ರಡಿ ಜಪ್ತಾದ ವಾಹನ/ಸೊತ್ತುಗಳನ್ನು ಅಧಿಕೃತ ಅಧಿಕಾರಿಗಳ ಅಭಿಪ್ರಾಯಕ್ಕೆ ಒಳಪಟ್ಟು ಯಾವುದೇ ವಿಳಂಭವಿಲ್ಲದೇ ವಿಲೇವಾರಿ ಮಾಡಲು ಕಾನೂನಾತ್ಮಕ ಅವಕಾಶವಿರುತ್ತದೆ.

ಪ್ರಕರಣದ ತನಿಖಾದಿಕಾರಿಗಳು ದಿ:26-11-2010ರಂದು ಸಲ್ಲಿಸಿರುವ ಶಿಪಾರಸ್ಸು ವರದಿಯನ್ನು ಪರಿಗಣಿಸಿ ಜಪ್ತುಪಡಿಸಿಕೊಂಡ ವಾಹನ ಸಂ: KL-14-4283 ಜೀಪು ಇದನ್ನು ಹೊರತುಪಡಿಸಿ ಉಳಿದ ಮದ್ಯ (ಮಾದರಿ ಹೊರತುಪಡಿಸಿ)ವನ್ನು ದಿನಾಂಕ :11-02-2011ರ ಅದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಅದೇಶಿಸಲಾಗಿರುತ್ತದೆ.

ವಾಹನವನ್ನು ದಿ:21-08-2010ರಂದು ವಶಪಡಿಸಿಕೊಂಡು ಈಗಾಗಲೆ 1 ವರ್ಷ 1 ತಿಂಗಳು ಕಳೆದರೂ, ವಾಹನದ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾದಿಕಾರವು ಮನಗಂಡು ಪ್ರಾದಿಕಾರದಲ್ಲಿ ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಟ್ಟುಗೋಲು ನಡವಳಿ ಪ್ರಯುಕ್ತ ಸಾಕ್ಷಿ ವಿಚಾರಣೆಯನ್ನು ಆರಂಭಿಸಿ, ಪ್ರಕರಣದ ಫಿರ್ಯಾದುದಾರರೊಂದಿಗೆ ಸಹ–ಸಾಕ್ಷಿದಾರರಾದ ಶ್ರೀ.ಪ್ರಮೋದ್ ಎ.ಎಸ್, ಪಿ.ಸಿ ಸಂ:572 ಮತ್ತು ತನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ ಇವರುಗಳನ್ನು ಪ್ರಾಸಾ–1 ಮತ್ತು 2 ರವರನ್ನಾಗಿ ಸಾಕ್ಷಿ ವಿಚಾರಣೆ ನಡೆಸಿ ಪ್ರಕರಣದ ದಾಖಲಾತಿಗಳನ್ನು ನಿಶಾನೆ ಪಿ–1ರಿಂದ ನಿಶಾನೆ ಪಿ– 6ಎ ತನಕ ಸಾಕ್ಷಿದಾರರಿಂದ ಗುರುತಿಸಲಾಗಿರುತ್ತದೆ. ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲಿ, ಅವರ ಪರ ಪ್ರತಿನಿಧಿಗಳಾಗಲೀ ಹಾಜರಿರದ ಕಾರಣ ರಕ್ಷಣಾ ಪರ ಸಾಕ್ಷಿಗಳು ಇಲ್ಲವೆಂದು ಪರಿಗಣಿಸಿ, ಅಭಿಯೋಗದ ಪರ ಸಾಕ್ಷಿಯ ವಿಚಾರಣೆ ಮುಕ್ತಾಯಗೊಳಿಸಿ, ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿ ಆ ಈ ಕೆಳಗಿನಂತೆ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

1) ದಿನಾಂಕ:21–08–2010ರಂದು ಜೀಪು ನೊಂದಣಿ ಸಂ: KL–14–4283ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ:21–08–2010 ರಂದು ಜೀಪು ನೊಂದಣಿ ಸಂ: KL-14-4283ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಜಪ್ತಾದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ಸಹಾಯಕ ರಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ನೀಡಿರುವ ವರದಿ ಸಂ: ಇಎಕ್ಸ್‌ನಂ: ಇ–196–8, 26–10–2010 ರಲ್ಲಿ ಮದ್ಯದ ತೀಕ್ಷ್ಣತೆ 42% ವಿ/ವಿ ಇರುವುದಾಗಿ ದೃಡೀಕರಿಸಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಸಾಭೀತಾಗಿದ್ದು ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದ ಫಿರ್ಯಾದುದಾರರು ತಯಾರಿಸಿ ಒಪ್ಪಿಸಿರುವ ದಾಖಲಾತಿಗಳು ಹಾಗೂ ತನಿಖೆ ಕೈಗೊಂಡ ಬಗ್ಗೆ ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳ ಮೇಲೆ ದಿ:21–08–2011 ರಂದು ಜಪ್ತಿಪಡಿಸಿರುವ ಜೀಪು ನೊಂದಣಿ ಸಂ: KL-14-4283 ಅಕ್ರಮವಾಗಿ 69.120 ಲೀ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಹೊಂದಿ ಸಾಗಾಣಿಕೆ ಮಾಡಿರುವುದು ಮತ್ತು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32,34 ಮತ್ತು 43 ಎ ರೀತ್ಯಾ ಅಪರಾಧಕ್ಕೆ ಬಳಸಿರುವುದು ಸಾಭೀತಾಗಿರುವುದರಿಂದ ಎರಡನೆ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಜಪ್ತುಪಡಿಸಿಕೊಂಡ ವಾಹನ ಜೀಪು ನೊಂದಣಿ ಸಂ: KL–14–4283 ಇದಕ್ಕೆ ಸಂಬಂಧಿಸಿದಂತೆ ತನಿಖಾದಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಾಸರಗೋಡು ಇವರಿಂದ ಪಡೆದು ಸಲ್ಲಿಸಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾಗಿರುವ ವಾಹನದ ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ಕಾರಣ ಕೇಳಿ ನೋಟಿಸನ್ನು ನೊಂದಾಯಿತ ಅಂಚೆಯ ಮೂಲಕ ನೀಡಲಾಗಿ, ಸದ್ರಿಯವರು ದಿ:12–05–2011ರಂದು ಉತ್ತರಿಸುತ್ತಾ ತಾನು ದಿ:23–03–2010ರಂದು ಶ್ರೀ.ಅಮರನಾಥ ಆಳ್ವ ,ಬಿನ್:ರಾಮಣ್ಣ ಆಳ್ವ, ಅಮರ ನಿವಾಸ, ಕರ್ನೂರು ಮನೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ದ.ಕ ಜಿಲ್ಲೆ ಎಂಬವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುವರಾದರೂ, ಸದ್ರಿ ವಾಹನ 2ನೇ ವ್ಯಕ್ತಿಗೆ ಪರಭಾರೆಯಾಗಿರುವ ಬಗ್ಗೆ ಪ್ರಾದೇಶಿಕ ಸಾರಿಗೆ ಅದಿಕಾರಿಗಳಿಂದ ಅಧಿಕೃತ ದಾಖಲೆಗಳು ಲಭ್ಯ ವಾಗದೇ ಇರುವುದರಿಂದ ವಾಹನದ ಪರಭಾರೆ ಅಂಶವನ್ನು ಪರಿಗಣಿಸಲು ಬರುವುದಿಲ್ಲ. ಹಾಗೂ ವಾಹನವನ್ನು ಖರೀದಿಸಿಕೊಂಡ ವ್ಯಕ್ತಿಯಾಗಲೀ ಆತನ ಪರ ಪ್ರತಿನಿಧಿಗಳಾಗಲೀ ವಾಹನದ ಬಿಡುಗಡೆ ಬಗ್ಗೆ ಯಾವುದೇ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ವಾಹನದ ಮಾಲೀಕ/ಸುಪರ್ಧಿ ಹೊಂದಿರುವವರು ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಟದಂತಹ ಅಪರಾಧವೆಸಗಿರುವುದು ಹಾಗೂ ತದನಂತರದಲ್ಲಿ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದ ಇದೊಂದು ಕವಾರೀಸುದಾರರು ಇಲ್ಲದ ಪ್ರಕರಣವೆಂದು ಕಿ ಸಾಭೀತಾಗಿದ್ದು ಮೂರನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಲಾಗಿದೆ.

<u>ಪೂರಕ ಅಂಶ–:</u>

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಅರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾದಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ,

ಸದ್ರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ,ಪುತ್ತೂರು ಇವರ ತಕ್ಷೀರು ಸಂಖ್ಯೆ:81/2010, ದಿ: 21–08–2010 ರಂದು ದಾಖಲಿಸಿದ ಪ್ರಕರಣದಲ್ಲಿ ಆರೋಪಿಯು 69.120 ಲೀ ಅಕ್ರಮ ಮದ್ಯ ಸಾಗಾಣಿಕೆ ಮಾಡುವುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿ ಹಾಗೂ ವಾಹನದಲ್ಲಿ ಜಪ್ತು ಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಡಪಟ್ಟು, ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಪ್ರಾಧಿಕಾರವು ಈ ಕೆಳಕಂಡಂತೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ: 81/2010, ದಿ: 21–08–2010ರಲ್ಲಿ ಜಪ್ತಿಪಡಿಸಿಕೊಂಡಿರುವ ಜೀಪು ನೊಂದಣಿ ಸಂ: KL–14–4283 (ಚಾಸೀಸ್ ನಂ:CJ447303599 ಮತ್ತು ಇಂಜಿನ್ ನಂ: DI3216S) ನಿಯಮ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ: 11–02–2011ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿ: 22–09–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವುಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1066

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/178/ಡಿಟಿಸಿಆರ್/2010–11 ದಿನಾಂಕ: 15–09–2011

ಉಪಸ್ಥಿತರು: **ಬಿ.ವಿ. ಹೂವಪ್ಪಗೌಡ** ಅಧಿಕೃತ ಅಧಿಕಾರಿಗಳು ಹಾಗೂ ಡಿಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:	**ಆರೋಪಿ**
ಪೋಲೀಸ್ ಉಪ ನಿರೀಕ್ಷಕರು (ಕಾ &ಸು) ಪುತ್ತೂರು ನಗರ ಪೊಲೀಸ್ ಠಾಣೆ ಪುತ್ತೂರು	ಸಂತೋಷ್ ಕುಮಾರ್

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:30–10–2010ರಂದು ಬೆಳಿಗ್ಗೆ 10–45 ಗಂಟೆ ಸಮಯಕ್ಕೆ ಫಿರ್ಯಾದು ದಾರರಾದ ಪೊಲೀಸ್ ಉಪ ನಿರೀಕ್ಷಕರು, (ಕಾ&ಸು) ಪುತ್ತೂರು ನಗರ ಪೊಲೀಸ್ ಠಾಣೆ, ಪುತ್ತೂರು ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಖಚಿತ ಮಾಹಿತಿಯ ಮೇರೆಗೆ ಪುತ್ತೂರು ತಾಲೂಕು ಕಣ್ಣೂರು ಗ್ರಾಮದ ಆನೆಮಜಲು ಎಂಬಲ್ಲಿರುವ ಸಂತೋಷ್ ಕುಮಾರ್ ಎಂಬವರ ಮನೆಯ ಬಳಿಯ ಕಾಡು ಪ್ರದೇಶದೊಳಗೆ ಧಾಳಿ ಮಾಡಲಾಗಿ ಅಲ್ಲಿ KA-19-P-6837 ನೊಂದಣಿ ಸಂಖ್ಯೆ ಇರುವ ಕ್ವಾಲಿಸ್ ಕಾರಿನೊಳಗೆ 35 ಲೀಟರು ಸಾಮರ್ಥ್ಯದ 34 ಕ್ಯಾನುಗಳಲ್ಲಿ ತಲಾ 35 ಲೀಟರಿನಂತೆ ಒಟ್ಟು 1,020 ಲೀಟರು ಮದ್ಯಸಾರ ಇರುವುದನ್ನು ಪತ್ತೆಹಚ್ಚಿ , ಪ್ರಕರಣ ಸಂದರ್ಭದಲ್ಲಿ ಅರೋಪಿಗಳು ತಲೆಮರೆಸಿಕೊಂಡಿರುವ ಮೇರೆಗೆ ಇದೊಂದು ಅಕ್ರಮ ಮದ್ಯಸಾರ ಹೊಂದಿ ಸಾಗಾಟ ಮಾಡುತ್ತಿರುವ ಪ್ರಕರಣವೆಂದು ಪರಿಗಣಿಸಿ ಇದು ಅಬಕಾರಿ ಕಾಯಿದೆ ಕಲಂ 32,34, 43(3)ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯಸಾರದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ ತಲೆಮರೆಸಿಕೊಂಡಿರುವ ಸಂತೋಷ್ ಕುಮಾರ್ ಎಂಬವರ ವಿರುದ್ದ ಪುತ್ತೂರು ನಗರ ಠಾಣೆ ಕ್ರೈಂ ಸಂ: 218/2010, ದಿನಾಂಕ:30–10–2010 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿನಾಂಕ:22–1–2011 ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು

ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ದಿ:14–3–2011 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಕ್ವಾಲಿಸ್ ಕಾರು ಸಂ: KA–19–P–6837 (ಇಂಜಿನ್ ಸಂ:2L9729418 ಮತ್ತು ಚಾಸೀಸ್ ಸಂ:LF5010507820102)

2) 35 ಲೀಟರು ಸಾಮರ್ಥ್ಯದ 34 ಕ್ಯಾನುಗಳಲ್ಲಿ ತಲಾ 35 ಲೀಟರಿನಂತೆ ಒಟ್ಟು 1,020 ಲೀಟರು ಮದ್ಯಸಾರ. ಸದ್ರಿ ಮದ್ಯಸಾರವನ್ನು ಹಸ್ತಾಂತರಿಸುವ ಸಮಯದಲ್ಲಿ 11 ಕ್ಯಾನುಗಳು ಒಡೆದು ಹೋಗಿದ್ದು 23 ಕ್ಯಾನುಗಳಲ್ಲಿ ತಲಾ 29.250 ಲೀಟರಿನಂತೆ ಒಟ್ಟು 72.750 ಲೀ ಮದ್ಯಸಾರ ಇರುತ್ತದೆ.

(ಮೇಲಿನ ಮದ್ಯಸಾರದಿಂದ ತಲಾ 180 ಮಿಲಿಯ 23 ಬಾಟಲಿಗಳಲ್ಲಿ ಮದ್ಯಸಾರವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿ:14–3–2011ರಂದು ಸಲ್ಲಿಸಿರುವ ವರದಿ ಸಂ: ಅನಿ/ಪುವ/ಅರ್ ಸಿಆರ್/34/2010–11ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಪ್ತುಪಡಿಸಲಾದ 35 ಲೀಟರು ಸಾಮರ್ಥ್ಯದ 34 ಬಿಳಿ ಕ್ಯಾನುಗಳಲ್ಲಿ ತಲಾ 30 ಲೀಟರಿನಂತೆ 1020 ಲೀಟರು ಮದ್ಯಸಾರದ ಪೈಕಿ 23 ಕ್ಯಾನುಗಳಲ್ಲಿ ತಲಾ 29.250 ಲೀಟರಿನಂತೆ ಒಟ್ಟು 672.750 ಮದ್ಯಸಾರ ಮಾತ್ರ ಸ್ವೀಕೃತವಾಗಿದ್ದು ಉಳಿದಂತೆ 11 ಕ್ಯಾನುಗಳು ಒಡೆದುಹೋಗಿ ಅದರಲ್ಲಿದ್ದ ಮದ್ಯಸಾರ ಸೋರಿಹೋಗಿರುತ್ತದೆ ಎಂದು ತಿಳಿಸಿ ಈ ಬಗ್ಗೆ ಸೊತ್ತುಗಳನ್ನು ಪೊಲೀಸ್ ಅಧಿಕಾರಿಗಳಿಂದ ಸ್ವೀಕರಿಸುವ ಸಂದರ್ಭದಲ್ಲಿ ಇಲಾಖಾ ಸಿಬ್ಬಂದಿಗಳು ಮತ್ತು ಪಂಚರ ಸಮಕ್ಷಮ ತಯಾರಿಸಲಾದ ಮಹಜರನ್ನು ವರದಿಯೊಂದಿಗೆ ಒಪ್ಪಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ: ಅನಿ/ಪು.ವ/ ಅರ್‌ಸಿಆರ್/35/2010–11 ದಿ: 17–5–2011ರ ವರದಿಯೊಂದಿಗೆ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು,ಮಂಗಳೂರು ವಲಯ ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ: ಇಎಕ್ಸ್‌ನಂ: ಇ–47–23 ದಿ:29–4–2011, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು, ದ.ಕ ಜಿಲ್ಲೆ ಇವರು ವಾಹನ ಸ ಸಂ: KA-19-P-6837 ಕ್ವಾಲಿಸ್ ಕಾರಿನ ಬಗ್ಗೆ ನೀಡಿದ ಬಿ ಎಕ್ಸ್ ಟ್ರಾಕ್ಟ್ ವರದಿ, ಮೌಲ್ಯ ಮಾಪನ ವರದಿ ಮತ್ತು ಪ್ರಕರಣದ ದಾಖಲಾತಿಗಳ ಪ್ರತಿಗಳನ್ನು ಒಪ್ಪಿಸಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಳ್ಳಲಾದ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯಸಾರದ ತೀಕ್ಷ್ಣತೆ 80% ವಿ/ವಿ @ 60 ಡಿಗ್ರಿ F ಇರುವುದಾಗಿ ದೃಡೀಕರಿಸಿರುತ್ತಾರೆ. ವಶಪಡಿಸಿಕೊಂಡ ವಾಹನದ ನೊಂದಣಿ ಸಂಖ್ಯೆ ಆಧಾರಿತವಾಗಿ ಪಡೆಯಲಾದ ಬಿ ರಿಜಿಸ್ಟ್ರಾರ್ ವರದಿಯಲ್ಲಿ ನಮೂದಿತವಾದ ವಾಹನವು ಮಾರುತಿ ಕಂಪೆನಿ ನಿರ್ಮಿತ ವಾಹನವಾಗಿದ್ದು, ಜಪ್ತುಪಡಿಸಿಕೊಂಡ ವಾಹನವು ಕ್ವಾಲಿಸ್ ಕಾರು ಆಗಿರುವುದರಿಂದ ಒಂದಕ್ಕೊಂದು ತಾಳೆಯಾಗದೇ ಇರುವುದು ಕಂಡುಬಂದಿದ್ದು ವಾಹನಕ್ಕೆ ನಕಲಿ ನಂಬರ್ ಪ್ಲೇಟು ಆಳವಡಿಸಿ ಅಕ್ರಮಕ್ಕೆ ಬಳಸಿಕೊಂಡಿರುವುದು ಖಾತ್ರಿಯಾಗಿರುತ್ತದೆ. ಆದಾಗ್ಯೂ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾದ ವಾಹನದ ಮಾಲೀಕರಾದ ಶ್ರೀ.ಅಬ್ದುಲ್ ಅಜೀಜ್ ,ಬಿನ್:ಚೆಯ್ಯಬ್ಬ ಪ್ಲಾಟ್ ನಂ:502, ಸಿಂಪನಿ ಅಪಾರ್ಟ್‌ಮೆಂಟ್, ಕಾಸಾಗ್ರಾಂಡ , ಸ್ಟರಕ್ ರೋಡ್, ಅತ್ತಾವರ, ಮಂಗಳೂರು ಇವರಿಗೆ ಪ್ರಾಧಿಕಾರದಿಂದ ದಿ:30–5–2011ರಂದು ನೀಡಲಾದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೀಡಲಾದ ಕಾರಣ ಕೇಳಿ ನೋಟಿಸಿಗೆ ಸದ್ರಿಯವರು ದಿ: 6–6–2011 ರಂದು ಉತ್ತರಿಸುತ್ತಾ ಜಪ್ತಾದ ವಾಹನ ಹಾಗೂ ತನ್ನ ವಾಹನ ಒಂದಕ್ಕೊಂದು ತಾಳೆಬಾರದೇ ಇರುವುದರಿಂದ ಈ ಪ್ರಕರಣಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿ ಪ್ರಕರಣದಲ್ಲಿ ಜಪ್ತಾದ ಟೋಯೋಟೋ ಕಂಪೆನಿ ನಿರ್ಮಿತ ಕ್ವಾಲಿಸ್ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ತನ್ನ ಅಭ್ಯಂತರವೇನು ಇಲ್ಲವೆಂದು ತಿಳಿಸಿರುತ್ತಾರೆ.

ವಾಹನವನ್ನು ದಿ:30–10–2010ರಂದು ವಶಪಡಿಸಿಕೊಂಡು ಈಗಾಗಲೇ 10 ತಿಂಗಳು ಕಳೆದರೂ, ವಾಹನದ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರವನ್ನು ಸಾಗಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಜಪ್ತಾದ ಸೊತ್ತುಗಳ ಸಮೇತ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಸೂಕ್ತವೆಂದು ಪ್ರಾಧಿಕಾರವು ಮನಗಂಡು ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಟ್ಟುಗೋಲು ನಡವಳಿ ಪ್ರಯುಕ್ತ ಸಾಕ್ಷಿ ವಿಚಾರಣೆಯನ್ನು ಆರಂಭಿಸಿ, ಪ್ರಕರಣದ ತನಿಖಾಧಿಕಾರಿ ಮತ್ತು ಫಿರ್ಯಾದುದಾರರನ್ನು ಪ್ರಾಸಾ–1 ಮತ್ತು 2ರನ್ನಾಗಿ ಸಾಕ್ಷಿ ವಿಚಾರಣೆ ನಡೆಸಿ ಪ್ರಕರಣದ ಮುಖ್ಯ ದಾಖಲಾತಿಗಳನ್ನು ನಿಶಾನೆ ಪಿ–1ರಿಂದ ನಿಶಾನೆ ಪಿ–10ಎ ತನಕ ಸಾಕ್ಷಿದಾರರಿಂದ ಗುರುತಿಸಲಾಗಿರುತ್ತದೆ. ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲಿ, ಅವರ ಪರ ಪ್ರತಿನಿಧಿಗಳಾಗಲೀ ಹಾಜರಿರದ ಕಾರಣ ರಕ್ಷಣಾ ಪರ ಸಾಕ್ಷಿಗಳು ಇಲ್ಲವೆಂದು ಪರಿಗಣಿಸಿ, ಅಭಿಯೋಗದ ಪರ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿ, ಸರ್ಕಾರಿ ಅಭಿಯೋಜಕರ ವಾದ ಮಂಡನೆಯನ್ನು ಆಲಿಸಿ ಆ ವಾದ ಮಂಡನೆಯನ್ನು ಆಲಿಸಿ ಈ ಕೆಳಗಿನ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

1) ದಿನಾಂಕ:30–10–2010ರಂದು ಕ್ವಾಲಿಸ್ ನೊಂದಣಿ ಸಂ: KA–19–P–6837ರಲ್ಲಿ ಸಾಗಾಣಿಕೆ ಯಾದ ಸೊತ್ತು ಮದ್ಯಸಾರ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ: 30–10–2010 ರಂದು ಕ್ವಾಲಿಸ್ ಕಾರು ನೊಂದಣಿ ಸಂ: KA-19-P-6837 ಇದರಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯಸಾರ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಜಪ್ತಾದ ಮದ್ಯಸಾರದ ಮಾದರಿಗಳ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ಸಹಾಯಕ ರಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ನೀಡಿರುವ ವರದಿ ಸಂ: ಇ–47–20 ದಿ:29–4–2011ರಲ್ಲಿ ಮದ್ಯಸಾರದ ತೀಕ್ಷ್ಣತೆ 80% ವಿ/ವಿ @ 60 ಡಿಗ್ರಿ F ಇರುವುದಾಗಿ ದೃಡೀಕರಿಸಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯಸಾರ) ಆಗಿರುವುದು ಸಾಬೀತಾಗಿರುವುದು ಒಂದನೇ ಅಂಶಕ್ಕೆ ಗುಣಾತ್ಮಕ ವಾಗಿರುತ್ತದೆ.

ಪ್ರಕರಣದ ಫಿರ್ಯಾದುದಾರರು ತಯಾರಿಸಿರುವ ದಾಖಲಾತಿಗಳು ಹಾಗೂ ತನಿಖಾಧಿಕಾರಿಯವರು ಪುರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ದಿ:30–10–2010 ಜಪ್ತುಪಡಿಸಿಕೊಂಡಿರುವ ಕ್ವಾಲಿಸ್ ಕಾರು ನೊಂದಣಿ ಸಂ: KA-19-P-6837 ರಲ್ಲಿ ಅಕ್ರಮವಾಗಿ 1020.000 ಲೀಟರ್ ಮದ್ಯಸಾರವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಜಪ್ತುಪಡಿಸಿಕೊಂಡ ವಾಹನ ನೊಂದಣಿ ಸಂ: KA-19-P-6837 ಎಂಬ ಫಲಕವನ್ನು ಆಳವಡಿಸಲಾದ ಕ್ವಾಲಿಸ್ ಕಾರು ಇದಕ್ಕೆ ಸಂಬಂಧಿಸಿದಂತೆ ತನಿಖಾದಿಕಾರಿಗಳು ನೊಂದಣಿ ಸಂಖ್ಯೆ ಆಧಾರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು ಸಲ್ಲಿಸಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪರಿಶೀಲಿಸಲಾಗಿ ಸದ್ರಿ ವರದಿಯು ಮಾರುತಿ ಕಂಪೆನಿ ನಿರ್ಮಿತ (ಚಾಸೀಸ್ ಸಂ:MA3EED81 S00394995 ಮತ್ತು ಇಂಜಿನ್ ಸಂ: F10DN 4218699) ವಾಹನದ್ದಾಗಿದ್ದು ಜಪ್ತಾದ ವಾಹನವು ಟೋಯೋಟೋ ಕಂಪೆನಿ ನಿರ್ಮಿತ (ಇಂಜಿನ್ ನಂ:2L9729418 ಮತ್ತು ಚಾಸೀಸ್ ನಂ: LF5010507820102) ಆಗಿದ್ದು ಒಂದಕ್ಕೊಂದು ತಾಳೆ ಕಂಡು ಬಾರದೇ ಇರುವುದರಿಂದ ಅಕ್ರಮ ಸಂದರ್ಭದಲ್ಲಿ ಕ್ವಾಲಿಸ್ ಕಾರಿಗೆ ನಕಲಿ ನಂಬರ್ ಪ್ಲೇಟ್ KA–19–P–6837ನ್ನು ತಿಳುವಳಿಕೆಯಿಂದಲೇ ಆಳವಡಿಸಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ಉದ್ದೇಶ ಪೂರ್ವಕವಾಗಿ ವಾಹನದ ಸುಪರ್ಧಿ ಹೊಂದಿರುವ ವ್ಯಕ್ತಿ ಅಥವಾ ವಾಹನದ ಮಾಲೀಕರು ಪ್ರಯತ್ನಿಸಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಪ್ರಕರಣ ದಾಖಲಾಗಿ 10 ತಿಂಗಳುಗಳು ಕಳೆದರೂ ತನ್ನ ವಾಹನವನ್ನು ಪತ್ತೆಹಚ್ಚಲು ಅಥವಾ ಪಡೆಯಲು ಪ್ರಯತ್ನಿಸದೇ ಇರುವುದರಿಂದ ವಾಹನದ ಮಾಲೀಕರು ತಮ್ಮ ತಿಳುವಳಿಕೆಯಿಂದಲೇ ಉದ್ದೇಶ ಪೂರ್ವಕವಾಗಿ ಈ ಅಪರಾಧವನ್ನು ಎಸಗಿ ತದನಂತರದಲ್ಲಿ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದ ಪ್ರಕರಣವು 'ವಾರೀಸುದಾರರು ಇಲ್ಲದ ಪ್ರಕರಣವೆಂದು' ಸಾಭೀತಾಗಿರುವುದರಿಂದ ಮೂರನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಲಾಗಿದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಅರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾದಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರ ದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಕಾರಣ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು,(ಕಾ&ಸು) ಪುತ್ತೂರು ನಗರ ಪೊಲೀಸ್ ಠಾಣೆ, ಪುತ್ತೂರು ಇವರ ಠಾಣಾ ತಕ್ಷೀರು ಸಂಖ್ಯೆ: 218/2010 ದಿ:–30–10–2010 ರಂದು ದಾಖಲಿಸಿದ ಪ್ರಕರಣದಲ್ಲಿ 1020 ಲೀಟರ್ ಅಕ್ರಮ ಮದ್ಯಸಾರವನ್ನು ಸಾಗಾಣಿಕೆ ಮಾಡುವುದುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯಸಾರವೆಂದು ದೃಡಪಟ್ಟಿದ್ದು, ಸದರಿ ವಾಹವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿರುವುದನ್ನು ಪರಿಗಣಿಸಿ ನಕಲಿ ನಂಬರ್ ಪ್ಲೇಟು ಆಳವಡಿಸಿ ಆಕ್ರಮ ಮದ್ಯಸಾರ ಸಾಗಾಟಕ್ಕೆ ಬಳಸಿದ ವಾಹನ ಕ್ವಾಲಿಸ್ ಕಾರು ಸಂ: KA-19-P-6837 ಮತು ಇತರ ಸೊತ್ತುಗಳಾದ 1020 ಲೀಟರು ಮದ್ಯಸಾರದ ಪೈಕಿ ಸೋರಿಹೋದ ಮದ್ಯಸಾರವನ್ನು ಹೊರತುಪಡಿಸಿ ಉಳಿದ ಮದ್ಯಸಾರವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಸಿ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರವನ್ನು ಪ್ರಸ್ತುತ ಸರ್ಕಾರದ ನೀತಿಯಂತೆ ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಪ್ಲಾಸ್ಟಿಕ್ ಕ್ಯಾನುಗಳನ್ನು ವಿಲೇವಾರಿ ಮಾಡಬಹುದಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರಿವನ್ನು ಚಲಾಯಿಸಿ, ಕಲಂ 43 (ಬಿ) ಅಡಿ ಕ್ರಮ ಜರುಗಿಸಿ, ಪೊಲೀಸ್ ಉಪ ನಿರೀಕ್ಷಕರು, (ಕಾ& ಸು), ಪುತ್ತೂರು ನಗರ ಪೊಲೀಸ್ ಠಾಣೆ , ಪುತ್ತೂರು ಇವರ ಕ್ರೈಂ ಸಂ: 218/2010 ದಿನಾಂಕ: 30–10–2010 ರಲ್ಲಿ ಜಪ್ತು ಪಡಿಸಿಕೊಂಡಿರುವ ನಕಲಿ ನಂಬರು ಪ್ಲೇಟ್ ಸಂ: KA-19-P-6837 ಆಳವಡಿಸಲಾದ ಕ್ವಾಲಿಸ್ ಕಾರು (ಇಂಜಿನ್ ನಂ:2L9729418 ಮತ್ತು ಚಾಸೀಸ್ ನಂ:LF501050 7820102)ನ್ನು ಮತ್ತು ಜಪ್ತುಪಡಿಸಿಕೊಂಡ 35 ಲೀಟರು ಸಾಮರ್ಥ್ಯದ 34 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 30 ಲೀಟರಿನಂತೆ ಒಟ್ಟು 1020 ಲೀಟರು ಮದ್ಯಸಾರದ ಪೈಕಿ ಸೋರಿಹೋದ 11 ಕ್ಯಾನುಗಳಲ್ಲಿದ್ದ ಮದ್ಯಸಾರವನ್ನು ಹೊರತುಪಡಿಸಿ ಉಳಿದ 23 ಕ್ಯಾನುಗಳಲ್ಲಿ ತಲಾ 29.250 ಲೀಟರಿನಂತೆ ಒಟ್ಟು 672.750 ಲೀ. ಮದ್ಯಸಾರ (ಮಾದರಿ ಹೊರತುಪಡಿಸಿ)ವನ್ನು ನಿಯಮ 43(ಸಿ)ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಐಎಸ್/2007 ದಿ: 13–7–2007 ರಂತೆ ಅಧಿಸೂಚನೆಯನ್ನು ಅನುಸರಿಸಿ ಕಲಂ 43(ಎ) 3ರ ಅನ್ವಯ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗರವರು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಹಾಗೂ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್, ಪುತ್ತೂರು ಡಿಪೋ ಇವರನ್ನು ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾಧ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಇಸಿಸಿ/73/ಸಿಆರ್‌ಎಂ/2004 ದಿ: 12–9–2005ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಮದ್ಯಸಾರವನ್ನು ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಪ್ಲಾಸ್ಟಿಕ್ ಡ್ರಂಗಳನ್ನು ವಿಲೇವಾರಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿ: 15–09–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಗೆ ಬರುವುದು.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1077

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/321/ಡಿಟಿಸಿಆರ್/2008–09 ದಿನಾಂಕ: 20–10–2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು
ಸುಳ್ಯ ಪೊಲೀಸ್ ಠಾಣೆ ಸುಳ್ಯ

ಆರೋಪಿ

1) ಯತೀಶ್, ಬಿನ್:ಕುಂಞಣ್ಣ ಭಂಡಾರಿ , ಮಂಡೆಕೋಲು ಶಾಲೆಯ ಬಳಿ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು.
2) ಕುಂಞಕಣ್ಣನ್, ಬಿನ್:ಕುಂಞರಾಮ, ಮರೆಯೂರು ವಾಸ: ಕಣಿಮಾರಡ್ಕ ಮನೆ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು

ವಾಹನದ ಮಾಲೀಕರು

ಶ್ರೀ.ಎಂ.ಯತೀಶ್ ಬಿನ್:ಕುಂಞಣ್ಣ ಭಂಡಾರಿ, ನಿಯರ್ ಮಂಡೆಕೋಲು ಶಾಲೆ, ಮಂಡೆಕೋಲು ಗ್ರಾಮ, ಸುಳ್ಯ **ತಾಲೂಕು** .

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:10–2–2009ರಂದು ಸಂಜೆ 7–00 ಗಂಟೆ ಸಮಯಕ್ಕೆ ಫಿರ್ಯಾದುದಾರರಾದ ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಖಚಿತ ಮಾಹಿತಿಯ ಮೇರೆಗೆ ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ಪಂಚಾಯತ್‌ನ ನೀರಿನ ಟ್ಯಾಂಕ್‌ನ ಹತ್ತಿರ ಟಿ.ವಿ.ಎಸ್. ಮೋಟಾರು ಸೈಕಲ್ ಸಂ: KA–21–J–8782 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ 6.480 ಲೀಟರು ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34ರಂತೆ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ, ಅರೋಪಿಗಳಾದ ಯತೀಶ್, ಬಿನ್:ಕುಂಞಣ್ಣ ಭಂಡಾರಿ ಮಂಡೆಕೋಲು ಶಾಲೆಯ ಬಳಿ, ಮಂಡೆಕೋಲು ಗ್ರಾಮ,ಸುಳ್ಯ

ತಾಲೂಕು ಮತ್ತು ಕುಂಞ ಕಣ್ಣನ್, ಬಿನ್:ಕುಂಞರಾಮ , ಮರೆಯೂರು ವಾಸ: ಕಣಿಮಾರಡ್ಕ ಮನೆ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು ಇವರುಗಳ ವಿರುದ್ದ ಸುಳ್ಯ ಪೊಲೀಸ್ ಠಾಣಾ ಕ್ರೈಂ ಸಂ: 37/2009ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿನಾಂಕ:18–4–2009ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಇವರಿಗೆ ದಿ:12–6–2009 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಟಿ.ವಿ.ಎಸ್ ಮೋಟಾರು ಸೈಕಲ್ ನೊಂದಣಿ ಸಂ: KA–21–J–8782

2) ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ 180 ಎಂಎಲ್‌ನ 14 ಬಾಟಲಿಗಳಲ್ಲಿ ಒಟ್ಟು 2–520 ಲೀ ಮದ್ಯ.

3) ಕ್ಲಬ್ ಚಾಯ್ಸ್ ಪ್ರೈಸ್ಸ್ ವಿಸ್ಕಿ 180 ಎಂಎಲ್‌ನ 22 ಬಾಟಲಿಗಳಲ್ಲಿ ಒಟ್ಟು 3–960 ಲೀ ಮದ್ಯ.

4) ನಗದು ಹಣ ರೂ.566/–

(ಮೇಲಿನ ಬ್ರಾಂಡ್‌ವಾರು ಮದ್ಯದಿಂದ ತಲಾ ಒಂದೊಂದರಂತೆ ಒಟ್ಟು 2 ಬಾಟಲಿ ಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಇವರ ವರದಿ ಸಂಖ್ಯೆ: ಸುಳ್ಯ ವಲಯ/ಸಿಆರ್‌ಎಂ/ 7/2009–10 ದಿ:3–7–2009ರೊಂದಿಗೆ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಮತ್ತು ಮೌಲ್ಯ ಮಾಪನ ವರದಿ ಹಾಗೂ ದಿ:23–7–2011 ರಂದು ಸಲ್ಲಿಸಿರುವ ವರದಿಯೊಂದಿಗೆ ಮದ್ಯದ ಮಾದರಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ ಬಗ್ಗೆ ವಿಶ್ಲೇಷಣಾ ವರದಿ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ವಶಪಡಿಸಿಕೊಂಡ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿಗೊಳಿಸಲು ಅದೇಶಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ.

ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರದ ತೀಕ್ಷ್ಣತೆ 42.25% ವಿ/ವಿ ಇರುವುದಾಗಿ ಹಾಗೂ ಭಾರತೀಯ ಬ್ಯೂರೋದ ಮಾನಕಕ್ಕೆ ಅನುಗುಣವಾಗಿದೆ ಎಂದು ದೃಡೀಕರಿಸಿರುತ್ತಾರೆ. ತನಿಖಾದಿಕಾರಿಗಳ ಶಿಫಾರಸ್ಸು ಮೇರೆಗೆ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ ಜಪ್ತುಪಡಿಸಿಕೊಳ್ಳಲಾದ ಮದ್ಯ ಹಾಗೂ ನಗದು ಮೊತ್ತವನ್ನು ದಿ:31–7–2009ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಸರ್ಕಾರದ ಪ್ರಚಲಿತ ನೀತಿ ಅನ್ವಯ ಮದ್ಯವನ್ನು ನಾಶಪಡಿಸಲು ಹಾಗೂ ನಗದು ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿರುತ್ತದೆ.

ವಶಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ದ.ಕ ಜಿಲ್ಲೆ ಇವರಿಂದ ಪಡೆಯಲಾಗಿದ್ದು,ಸದ್ರಿ ವರದಿಯಲ್ಲಿ ಶ್ರೀ.ಎಂ.ಯತೀಶ್ ಬಿನ್:ಕುಂಜಣ್ಣ ಭಂಡಾರಿ, ಹೌಸ್ ನಂ:1–300, ಮಂಡೆಕೋಲು ಶಾಲೆಯ ಹತ್ತಿರ, ಮಂಡೆಕೋಲು, ಸುಳ್ಯ ತಾಲೂಕು ಇವರು ದಿನಾಂಕ: 30–6–2007ರಿಂದ ಅನ್ವಯವಾಗುವಂತೆ ವಾಹನದ ಮಾಲೀಕ ರಾಗಿರುವುದಾಗಿ ದೃಡೀಕೃತವಾಗಿರುವ ಮೇರೆಗೆ ಅವರಿಗೆ ಈ ಪ್ರಾಧಿಕಾರದಿಂದ ದಿ:11–6–2009 ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೀಡಲಾದ ಕಾರಣ ಕೇಳಿ ನೋಟಿಸು ನೊಂದಾಯಿತ ಅಂಚೆ ಮೂಲಕ ರವಾನಿಸಿ ಹಾಗೂ ತನಿಖಾಧಿಕಾರಿಗಳ ಮೂಲಕ ಖುದ್ದಾಗಿ ಜ್ಯಾರಿಗೊಳಿಸಲಾಗಿರುತ್ತದೆ. ಆದರೆ ವಾಹನದ ಮಾಲೀಕರು ದಿ:23–3–2009ರಂದು ತಮ್ಮ ವಕೀಲರ ಮೂಲಕ ವಾಹನದ ಮದ್ಯಂತರ ಬಿಡುಗಡೆಗೆ ಕೋರಿರುವುದನ್ನು ಹೊರತುಪಡಿಸಿ, ಪ್ರಾಧಿಕಾರದಿಂದ ಮೇಲಿನಂತೆ ನೀಡಲಾದ ಕಾರಣ ಕೇಳಿ ನೋಟಿಸಿಗೆ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ . ಪ್ರಕರಣ ದಾಖಲಾಗಿ 2 ವರ್ಷ 8 ತಿಂಗಳು ಕಳೆದಿದ್ದು, ಅಬಕಾರಿ ಕಾಯಿದೆ 43 ಎ ರಡಿ ಜಪ್ತಾದ ವಾಹನ/ಸೊತ್ತುಗಳನ್ನು ಅಧಿಕೃತ ಅಧಿಕಾರಿಗಳ ಅಭಿಪ್ರಾಯಕ್ಕೆ ಒಳಪಟ್ಟು ಯಾವುದೇ ವಿಳಂಭವಿಲ್ಲದೇ ವಿಲೇವಾರಿ ಮಾಡಲು ಕಾನೂನಾತ್ಮಕ ಅವಕಾಶ ವಿರುವುದರಿಂದ ಜಪ್ತಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾಧಿಕಾರವು ಮನಗಂಡು ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ನಂತರ ಪ್ರಕರಣದಲ್ಲಿ ವಿಚಾರಣೆಯನ್ನು ಪ್ರಾರಂಬಿಸಿ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಅಭಿಯೋಗದ ಪರ ಪ್ರಾ.ಸಾ–1 ರಿಂದ 5ರವರನ್ನು ವಿಚಾರಣೆ ನಡೆಸಿ ನಿಶಾನೆ ಪಿ–1 ರಿಂದ 9 ಎ ರವರೆಗೆ ಗುರುತಿಸಿಕೊಳ್ಳಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಗದ ಪರ ಸಲ್ಲಿಸಿರುವ ಸಾಕ್ಷಾಧ್ಯಾರಗಳಿಂದ ಈ ಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

ವಿವಾಧಾಂಶಗಳು

1) ದಿನಾಂಕ: 10–02–2009 ರಂದು ವಾಹನ ಸಂ: KA-21-J-8782 ಟಿ.ವಿ.ಎಸ್ ವಿಕ್ಟರ್ ಮೋಟಾರ್ ಸೈಕಲ್ ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ದಿನಾಂಕ:10–02–2009ರಂದು KA–21–J–8782 ಟಿ.ವಿ.ಎಸ್ ವಿಕ್ಟರ್ ಮೋಟಾರ್ ಸೈಕಲ್ ಇದರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಢೀಕೃತವಾಗಿದೆಯೇ?

3) ವಶಪಡಿಸಿಕೊಳ್ಳಲಾಗಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಮತ್ತು ವಾಹನ ಅಕ್ರಮದಲ್ಲಿ ಶಾಮೀಲಾಗದಂತೆ ವಾಹನದ ಮಾಲೀಕರು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

<u>**ಪ್ರಾ.ಸಾ–1:–**</u>

ಪ್ರಕರಣದಲ್ಲಿ ಪಿರ್ಯಾಧುದಾರರೊಂದಿಗೆ ಸಹ ಸಾಕ್ಷಿದಾರರಾದ ಶ್ರೀ.ರಾಧಕೃಷ್ಣ ಹೆಚ್.ಸಿ ನಂ:1391, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ದಿ:21–10–2009ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ಪೊಲೀಸರು ಉಪ ನಿರೀಕ್ಷಕರು ಇವರ ಜೊತೆಯಲ್ಲಿ ಸುಳ್ಯ ಪೊಲೀಸ್ ಠಾಣೆ ಸಿಬ್ಬಂಧಿಗಳು ಹಾಗೂ ಪಂಚರೊಂದಿಗೆ ತಕ್ಷೀರು ಸ್ಥಳಕ್ಕೆ ಧಾವಿಸಿ ಮೋಟಾರು ಸೈಕಲ್ ಸಂ: KA–21–J–8782 ಇದರಲ್ಲಿ ಇಬ್ಬರು ವ್ಯಕ್ತಿಗಳು ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದನ್ನು ಕಂಡು ಅವರನ್ನು ಸುತ್ತುವರಿದ್ದು ಪಂಚರ ಸಮಕ್ಷಮ ಅವರು ಹೊಂದಿರುವ ಪಾಲಿಥೀನ್ ಚೀಲದ ಕಟ್ಟನ್ನು ಬಿಡಿಸಿ ನೋಡಲಾಗಿ ಅದರಲ್ಲಿ ಕಬ್ಸ್ ಚಾಯ್ಸ್ ಫೈನ್ ವಿಸ್ಕಿ ಎಂಬ 180 ಎಂಎಲ್‌ನ 22 ಬಾಟಲಿಗಳು ಮತ್ತು ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ 14 ಬಾಟಲಿಗಳಲ್ಲಿ ಮದ್ಯ ಮತ್ತು ಮದ್ಯ ಮಾರಾಟದಿಂದ ಬಂದಂತಹ ರೂ.566/– ನಗದು ಇರುವುದನ್ನು ಪತ್ತೆಹಚ್ಚಿ, ಈ ಬಗ್ಗೆ ಯಾವುದೇ ಪರವಾನಿಗೆ ಇಲ್ಲದೇ ಇರುವುದರಿಂದ ಇದು ಒಂದು ಅಕ್ರಮ ಮದ್ಯ ಸಾಗಾಟವೆಂದು ಖಚಿತಪಡಿಸಿಕೊಂಡು ವಾಹನ ಮೋಟಾರು ಸೈಕಲ್ ಸಂ: KA–21–J–8782 ಮತ್ತು ಮದ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಪಂಚರ ಸಹಿಮಾಡಿರುವ ಚೀಟಿಗಳನ್ನು ಜಪ್ತುಪಡಿಸಿ ಕೊಂಡಿರುವ ಸೊತ್ತುಗಳಿಗೆ ಅಂಟಿಸಿ ಮದ್ಯದ ಪ್ರತಿ ಬ್ರಾಂಡಿನಿಂದ ತಲಾ ಒಂದೊಂದು ಬಾಟಲಿಗಳಂತೆ ಒಟ್ಟು 2 ಬಾಟಲಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಪ್ರತ್ಯೇಕಿಸಿ ಬಿಳಿ ಬಟ್ಟೆ ಸುತ್ತಿ ಅರಗು ಸೀಲು ಹಾಕಿ ಪಂಚರ ಸಹಿ ಚೀಟಿ ಅಂಟಿಸಿ ಸದ್ರಿ ಮದ್ಯದ ಬಾಟಲಿ ಗಳಿಗೆ ಎ ಮತ್ತು ಬಿ ಎಂದು ಗುರುತು ನೀಡಿರುವುದಾಗಿ , ಮದ್ಯದ ಬಾಟಲಿ ತುಂಬಿದ ಪಾಲಿಥೀನ್ ಚೀಲಕ್ಕೆ ಸಿ ಎಂಬ ಗುರುತು ನೀಡಿರುವುದಾಗಿಯೂ , ಮದ್ಯ ಮಾರಾಟ ಮಾಡಿ ಅರೋಪಿಗಳು ಸಂಗ್ರಹಿಸಿದ ಮೊತ್ತ ರೂ. 566/–ಕ್ಕೆ ಡಿ ಎಂದು ಗುರುತು ನೀಡಿರುವುದಾಗಿಯೂ, ವಾಹನ KA–21–J–8782 ಇದಕ್ಕೆ ಇ ಎಂದು ಗುರುತು ನೀಡಿರುವುದಾಗಿಯೂ, ಈ ಬಗ್ಗೆ ಸ್ಥಳದಲ್ಲಿಯೇ ತಯಾರಿಸಲಾದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನೀಡಿ ಮಹಜರನ್ನು ನಿಶಾನೆ ಪಿ–1 ಎಂದು , ಅದರ ಮೇಲಿನ ಸಾಕ್ಷ್ಯ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಿರುತ್ತಾರೆ. ಅನಂತರ ಜಪ್ತುಪಡಿಸಿಕೊಂಡ ಸೊತ್ತುಗಳ ಸಮೇತ ಅರೋಪಿಯಾದ ಯತೀಶ್ ಬಿನ್:ಕುಂಜಣ್ಣ ಭಂಡಾರಿ ಮತ್ತು ಕುಂಞಕಣ್ಣನ್ ಬಿನ್:ಕುಂಞ ರಾಮ ಇವರುಗಳನ್ನು ದಸ್ತಗಿರಿ ಮಾಡಿ ಕೊಂಡು ಠಾಣೆಗೆ ಕರೆದೊಯ್ದು ಮುಂದಿನ ಕ್ರಮವನ್ನು ಪಿ.ಎಸ್.ಐ ರವರು ಠಾಣೆಯಲ್ಲಿ ಕೈಗೊಂಡಿರುತ್ತಾರೆ ಎಂದು ಸಾಕ್ಷ್ಯ ನೀಡಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

<u>**ಪ್ರಾ.ಸಾ–2**</u>

ಪ್ರಕರಣದ ಇನ್ನೊರ್ವ ಸಹ ಸಾಕ್ಷಿದಾರರಾದ ಶ್ರೀ.ಜಗನ್ನಾಥ,ಪಿ.ಸಿ ನಂ:1741 ,ಸುಳ್ಯ ಪೊಲೀಸ್ ಠಾಣೆ,ಸುಳ್ಯ ಇವರು ದಿ:19–1–2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ದಿನಾಂಕ:10–2–2009ರಂದು ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ಮಂಡೆಕೋಲು ಪಂಚಾಯತ್ ನೀರಿನ ಟ್ಯಾಂಕಿನ ಬಳಿ ಇಬ್ಬರು ವ್ಯಕ್ತಿಗಳು ಮೋಟಾರು ಸೈಕಲ್ ನಲ್ಲಿ ಮದ್ಯದ ಬಾಟಲಿಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಪೊಲೀಸ್ ಉಪ ನಿರೀಕ್ಷಕರಿಗೆ ಬಂದ ಮಾಹಿತಿ ಮೇರೆಗೆ ಆ ದಿನ ಸಂಜೆ 7–00 ಗಂಟೆ ಸಮಯಕ್ಕೆ ಇತರ ಸಿಬ್ಬಂಧಿಗಳೊಂದಿಗೆ ಮಾಹಿತಿ ಸ್ಥಳಕ್ಕೆ ತೆರಳಿದಾಗ ಬೈಕಿನ ಮೇಲೆ ಪಾಲಿಥೀನ್ ಚೀಲ ವೊಂದನ್ನು ಇಟ್ಟುಕೊಂಡು ಇಬ್ಬರು ವ್ಯಕ್ತಿಗಳು ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದನ್ನು ಕಂಡು ಅವರನ್ನು ಪಂಚಸಾಕ್ಷಿದಾರರ ಸಮಕ್ಷಮ ಸುತ್ತುವರಿದ್ದು ಪಾಲಿಥೀನ್ ಚೀಲದ ಕಟ್ಟನ್ನು ಬಿಡಿಸಿ ನೋಡಲಾಗಿ ಅದರಲ್ಲಿ ಕಬ್ಸ್ ಚಾಯ್ಸ್ ಫೈನ್ ವಿಸ್ಕಿ ಎಂಬ 180 ಎಂಎಲ್‌ನ 22 ಬಾಟಲಿಗಳು ಮತ್ತು ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ 14 ಬಾಟಲಿಗಳಲ್ಲಿ ಮದ್ಯ ಮತ್ತು ಮದ್ಯ ಮಾರಾಟದಿಂದ ಬಂದಂತಹ ರೂ.566/– ನಗದು ಇರುವುದನ್ನು ಪತ್ತೆಹಚ್ಚಿ, ಈ ಬಗ್ಗೆ ಯಾವುದೇ ಪರವಾನಿಗೆ ಇಲ್ಲದೇ ಇರುವುದರಿಂದ ವಾಹನ ಮೋಟಾರು ಸೈಕಲ್ ಸಂ: KA–21–J–8782 ಮತ್ತು ಮದ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಪಂಚರ ಸಹಿ ಮಾಡಿರುವ ಚೀಟಿಗಳನ್ನು ಜಪ್ತುಪಡಿಸಿ ಕೊಂಡಿರುವ ಸೊತ್ತುಗಳಿಗೆ ಅಂಟಿಸಿ ಮದ್ಯದ ಪ್ರತಿ ಬ್ರಾಂಡಿನಿಂದ ತಲಾ ಒಂದೊಂದು ಬಾಟಲಿಗಳಂತೆ ಒಟ್ಟು 2 ಬಾಟಲಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಪ್ರತ್ಯೇಕಿಸಿ ಬಿಳಿ ಬಟ್ಟೆ ಸುತ್ತಿ ಅರಗು ಸೀಲು ಹಾಕಿ ಪಂಚರ ಸಹಿ ಚೀಟಿ ಅಂಟಿಸಿ ಸದ್ರಿ ಮದ್ಯದ ಬಾಟಲಿಗಳಿಗೆ ಎ ಮತ್ತು ಬಿ ಎಂದು ಗುರುತು ನೀಡಿರುವುದಾಗಿ , ಮದ್ಯದ ಬಾಟಲಿ ತುಂಬಿದ ಪಾಲಿಥೀನ್ ಚೀಲಕ್ಕೆ ಸಿ ಎಂಬ ಗುರುತು ನೀಡಿರುವುದಾಗಿಯೂ ಮದ್ಯ ಮಾರಾಟ ಮಾಡಿ ಅರೋಪಿಗಳು ಸಂಗ್ರಹಿಸಿದ ಮೊತ್ತ ರೂ.566/–ಕ್ಕೆ ಡಿ ಎಂದು ಗುರುತು ನೀಡಿರುವುದಾಗಿಯೂ, ವಾಹನ KA–21–J–8782

ಇದಕ್ಕೆ ಇ ಎಂದು ಗುರುತು ನೀಡಿರುವುದಾಗಿಯೂ, ಈ ಬಗ್ಗೆ ಸ್ಥಳದಲ್ಲಿಯೇ ತಯಾರಿಸಿಲಾದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನೀಡಿ ಮಹಜರನ್ನು ನಿಶಾನೆ ಪಿ–1 ಎಂದು , ಅದರ ಮೇಲಿನ ಸಾಕ್ಷ್ಯ ಸಹಿಯನ್ನು ನಿಶಾನೆ ಪಿ–1 ಬಿ ಎಂದು ಗುರುತಿಸಿರುತ್ತಾರೆ. ಅನಂತರ ಜಪ್ತು ಪಡಿಸಿಕೊಂಡ ಸೊತ್ತುಗಳ ಸಮೇತ ಅರೋಪಿಯನ್ನು ಠಾಣೆಗೆ ತಂದು ಮುಂದಿನ ಕ್ರಮವನ್ನು ಪಿ.ಎಸ್.ಐ ರವರು ಠಾಣೆಯಲ್ಲಿ ಕೈಗೊಂಡಿರುತ್ತಾರೆ ಎಂದು ಸಾಕ್ಷ್ಯ ನೀಡುತ್ತಾ ಜಪ್ತುಪಡಿಸಿಕೊಂಡ ಮೋಟಾರು ಸೈಕಲ್ ಮತ್ತು ಇತರ ಸೊತ್ತುಗಳನ್ನು ನೋಡಿದರೆ ಗುರುತಿಸಬಲ್ಲೇ ಮತ್ತು ಮದ್ಯ ಮಾರಾಟಕ್ಕೆ ಮೋಟಾರು ಸೈಕಲ್‌ನ್ನು ಉಪಯೋಗಿಸಿದ ಕಾರಣ ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಪ್ರಾಧಿಕಾರದ ಮುಂದೆ ವಿನಂತಿಸಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಾ.ಸಾ–3

ಪ್ರಕರಣದ ಪಿರ್ಯಾದುದಾರರಾದ ಶ್ರೀ. ಪಿ.ಡಿ ಸವಿತ್ರ ತೇಜ,ಪೊಲೀಸ್ ಉಪ ನಿರೀಕ್ಷಕರು ಇವರು ದಿ:17–2–2011ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ತಾನು ಸುಳ್ಯ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ದಿ:10–2–2009 ರಂದು ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ನೀರಿನ ಟ್ಯಾಂಕಿನ ಬಳಿ ಇಬ್ಬರು ವ್ಯಕ್ತಿಗಳು ಬೈಕಿನಲ್ಲಿ ಪಾಲಿಥೀನ್ ಚೀಲವೊಂದರಲ್ಲಿ ಮದ್ಯವನ್ನು ಹೊಂದಿ ಮಾರಾಟ ಮಾರುತ್ತಿರುವ ಬಗ್ಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಸಿಬ್ಬಂಧಿ ಮತ್ತು ಪಂಚರೊಂದಿಗೆ ತಕ್ಷೀರು ಸ್ಥಳಕ್ಕೆ ಧಾವಿಸಿದಾಗ ಅಲ್ಲಿ ಇಬ್ಬರು ವ್ಯಕ್ತಿಗಳು ಮೋಟಾರು ಸೈಕಲ್ ಸಂ: KA–21–J–8782 ಮೇಲೆ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದು ಅವರನ್ನು ವಿಚಾರಿಸಲಾಗಿ ಒಬ್ಬ ಯತೀಶ್ ಮತ್ತು ಇನ್ನೊಬ್ಬ ಕುಂಞಕಣ್ಣನ್ ಎಂದು ತಿಳಿದುಬಂದು ಅವರ ವಶದಲ್ಲಿದ್ದ ಪಾಲಿಥೀನ್ ಚೀಲವನ್ನು ಪಂಚರ ಸಮಕ್ಷಮ ಶೋಧಿಸಲಾಗಿ ಚೀಲದಲ್ಲಿ ಕಬ್ಸ್ ಚಾಯ್ಸ್ ಪೈನ್ ವಿಸ್ಕಿ ಎಂಬ 180 ಎಂಎಲ್‌ನ 22 ಬಾಟಲಿಗಳು ಮತ್ತು ಸೂಪರ್ ಚಾಕ್ ಕ್ಲಾಸಿಕ್ ವಿಸ್ಕಿ ಎಂಬ 14 ಬಾಟಲಿಗಳಲ್ಲಿ ಮದ್ಯ ಇರುವುದು ಪತ್ತೆಯಾಗಿ ಸದ್ರಿ ಮದ್ಯವನ್ನು ಮಾರಾಟ ಮಾಡಲು ಯಾವುದೇ ಪರವಾನಿಗೆ ಪಡೆಯದೇ ಹೆಚ್ಚಿನ ಲಾಭಕ್ಕಾಗಿ ಅವುಗಳನ್ನು ಮಾರಾಟ ಮಾಡಲು ಹೊಂದಿರುವುದಾಗಿ ತಿಳಿಸಿರುವ ಮೇರೆಗೆ ಇದೊಂದು ಅಕ್ರಮ ಮದ್ಯ ಮಾರಾಟ ಎಂದು ಖಚಿತ ಪಡಿಸಿಕೊಂಡು ಜಪ್ತುಪಡಿಸಿಕೊಳ್ಳಲಾದ 2 ಬ್ರಾಂಡ್‌ನ ಮದ್ಯದ ಬಾಟಲಿಗಳಿಂದ ತಲಾ ಒಂದೊಂದರಂತೆ ಒಟ್ಟು 2 ಬಾಟಲಿಗಳನ್ನು ಸ್ಯಾಂಪಲ್ ತೆಗೆದು ಬಿಳಿ ಬಟ್ಟೆ ಸುತ್ತಿ ಅರಗು ಸೀಲು ಹಾಕಿ ಪಂಚರ ಸಹಿ ಇರುವ ಚೀಟಿ ಅಂಟಿಸಿ ಸದ್ರಿ ಮದ್ಯದ ಬಾಟಲಿಗಳಿಗೆ ಎ ಮತ್ತು ಬಿ ಎಂದು ಗುರುತು ನೀಡಿರುವುದಾಗಿ , ಮದ್ಯದ ಬಾಟಲಿ ತುಂಬಿದ ಪಾಲಿಥೀನ್ ಚೀಲಕ್ಕೆ ಸಿ ಎಂಬ ಗುರುತು ನೀಡಿರುವುದಾಗಿಯೂ ,ಮದ್ಯ ಮಾರಾಟ ಮಾಡಿ ಅರೋಪಿಗಳು ಸಂಗ್ರಹಿಸಿದ ಮೊತ್ತ ರೂ 566/–ಕ್ಕೆ ಡಿ ಎಂದು ಗುರುತು ನೀಡಿರುವುದಾಗಿಯೂ , ವಾಹನ KA–21–J–8782 ಇದಕ್ಕೆ ಇ ಎಂದು ಗುರುತು ನೀಡರುವುದಾಗಿಯೂ, ಈ ಬಗ್ಗೆ ತಯಾರಿಸಿದ ಮಹಜರನ್ನು ಪಂಚರ ಸಮಕ್ಷಮ ಸ್ಥಳದಲ್ಲಿಯೇ ಜೀಪಿನ ಬೆಳಕಿನ ಸಹಾಯದಿಂದ ಬರೆಯಲಾಯಿತು ಎಂದು ಸಾಕ್ಷ್ಯ ನೀಡಿ ಮಹಜರನ್ನು ನಿಶಾನೆ ಪಿ–1 ಎಂದು , ಅದರ ಮೇಲಿನ ಸಾಕ್ಷ್ಯ ಸಹಿಯನ್ನು ನಿಶಾನೆ ಪಿ–1 ಸಿ ಎಂದು ಗುರುತಿಸಿರುತ್ತಾರೆ. ಅನಂತರ ಅರೋಪಿಗಳನ್ನು ಸೊತ್ತಿನೊಂದಿಗೆ ಠಾಣೆಗೆ ಕರೆದು ಕೊಂಡು ಠಾಣಾ ಅಕ್ರಮ ಸಂ: 37/2009ರಂತೆ ಕರ್ನಾಟಕ ಅಬಕಾರಿ ಕಾಯಿದೆಯಡಿ ಪ್ರಕರಣ ದಾಖಲಿಸಿ ಪ್ರಥಮ ಮಾಹಿತಿ ವರದಿ ಮತ್ತು ವಶಪಡಿಸಿದ ಸೊತ್ತನ್ನು ಸೊತ್ತು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿರುವುದಾಗಿಯೂ ,ನಿವೇದನಾ ವರದಿಯನ್ನು ನಿಶಾನೆ ಪಿ–2 ಎಂದು,ಅದರ ಮೇಲಿನ ಸಹಿಯನ್ನು ನಿಶಾನೆ ಪಿ–2 ಎ ಎಂದು ,ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–3 ಎಂದು ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ–3 ಎ ಎಂದು , ಮಾಲು ಪಟ್ಟಿಯನ್ನು ನಿಶಾನೆ ಪಿ–4 ಎಂದು ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ–4 ಎ ಎಂದು ,ವಶಪಡಿಸಿಕೊಂಡ ಸೊತ್ತುಗಳನ್ನು ಮುಟ್ಟುಗೋಲು ವ್ಯವಹಣೆಗೆ ಅಧಿಕೃತ ಅಧಿಕಾರಿಗಳಿಗೆ ಹಸ್ತಾಂತರಿಸಲು ನ್ಯಾಯಾಲಯದಿಂದ ಅನುಮತಿ ಕೋರಿರುವುದಾಗಿಯೂ, ದಸ್ತಗಿರಿ ಮಾಡಿರುವ ಅರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿಯೂ , ದಿ: 28–3–2009ರಂದು ವಶಪಡಿಸಿ ಕೊಂಡ ಸೊತ್ತುಗಳನ್ನು ಮಾನ್ಯ ಅಧಿಕೃತ ಅಧಿಕಾರಿಗಳಿಗೆ ಹಸ್ತಾಂತರಿಸುವ ಬಗ್ಗೆ ಅದೇಶಕ್ಕಾಗಿ ವರದಿ ಸಲ್ಲಿಸಿರುವುದಾಗಿಯೂ ,ಸಾಕ್ಷಿ ನೀಡಿ ಸದ್ರಿ ವರದಿಯನ್ನು ನಿಶಾನೆ ಪಿ–5 ಎಂದು ,ಅದರ ಮೇಲಿನ ಸಹಿ ಯನ್ನು ನಿಶಾನೆ ಪಿ–5 ಎ ಎಂದು ಗುರುತಿಸಿರುತ್ತಾರೆ. ಹಾಗೂ ಅನಂತರದಲ್ಲಿ ದಿ:28–4–2009 ರಂದು ಪ್ರಕರಣದ ಮುಂದಿನ ತನಿಖೆಯನ್ನು ಕೈಗೊಂಡ ತನಿಖಾದಿಕಾರಿಗಳು ಸೊತ್ತನ್ನು ಅಬಕಾರಿ ಉಪ ನಿರೀಕ್ಷಕರು, ಸುಳ್ಯ ಇವರಿಗೆ ಹಸ್ತಾಂತರಿಸಿರುವುದಾಗಿಯೂ ಸಾಕ್ಷ್ಯ ನೀಡಿರುತ್ತಾರೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ಖಚಿತ ವರ್ತಮಾನ ತನಗೆ ದಿ:10–2–2009ರಂದು ಖುದ್ದಾಗಿ ಬಂದಿದ್ದು,ಸದ್ರಿ ದಿನಾಂಕದಂದು ದಾಳಿಗೆ ಹೋದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಲಾಗಿದ್ದು ಅದನ್ನು ಅಗತ್ಯವಿದ್ದಲ್ಲಿ ಅಧಿಕೃತ ಅದಿಕಾರಿಗಳಿಗೆ ಹಾಜರುಪಡಿಸಬಹುದು, ದಾಳಿಗೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇನೆ, ಜೀಪನ್ನು ಇಲಾಖಾ ಚಾಲಕ ಕಣ್ಣನ್ ಎಂಬವರು ಚಲಾಯಿಸುತ್ತಿದ್ದರು, ಪೊಲೀಸ್ ತಕ್ಷೀರು ಸ್ಥಳ ಸುಮಾರು 15 ಕಿಮೀ ಅಂತರದಲ್ಲಿದೆ, ತಕ್ಷೀರು ಸ್ಥಳದಲ್ಲಿ ಅರೋಪಿಗಳ ಹತ್ತಿರವೇ ಜೀಪನ್ನು ನಿಲ್ಲಿಸಲಾಗಿದೆ , ತಕ್ಷೀರು ಸ್ಥಳದ ಗುರುತು ನೀರಿನ ಟ್ಯಾಂಕ್ ಬಸ್ ಸ್ಟಾಪ್‌ನಿಂದ ಎಷ್ಟು ದೂರ ಇದೆ ಎಂದು ಈಗ ಹೇಳಲು ನೆನಪಿರುವುದಿಲ್ಲ, ಜೀಪನ್ನು ಪಶ್ಚಿಮದ ಕಡೆಗೆ ಅಂದರೆ ಅರೋಪಿಗಳ ಎದುರಿಗೆ ನಿಲ್ಲಿಸಲಾಗಿರುತ್ತದೆ, ಅರೋಪಿಗಳನ್ನು ಸುತ್ತುವರಿದ್ದು ಎಲ್ಲರೂ ನೋಡಿ ವಶಕ್ಕೆ ತೆಗೆದುಕೊಳ್ಳಲಾಗಿದೆ, ಸುತ್ತುವರಿದ ಕಾರಣ ಅವರು ಓಡಲು ಸಾದ್ಯವಾಗಿರಲಿಲ್ಲ, ತಕ್ಷೀರು ಸ್ಥಳದ ಸುತ್ತಮುತ್ತ ಅಂಗಡಿ ಮನೆಗಳು ಇತ್ತೋ ಎಂದು ಹೇಳಲು ಈಗ ನೆನಪಿಗೆ ಬರುವುದಿಲ್ಲ, ತಕ್ಷೀರು ಸಂದರ್ಭ ಒಬ್ಬ ಗಿರಾಕಿಯನ್ನು ನೋಡಿದ ನೆನಪಿದ್ದು ಅತನು ಓಡಿಹೋಗಿರುತ್ತಾನೆ, ತಕ್ಷೀರು ಸ್ಥಳದಲ್ಲಿ ಅರೋಪಿಗಳನ್ನು ವಿಚಾರಿಸುವಾಗ ಜನ ಸೇರಿದ್ದಾರೋ ಇಲ್ಲವೋ ಎಂದು ಈಗ ಹೇಳಲು ನೆನಪು ಬರುವುದಿಲ್ಲ, ಪಂಚರುಗಳನ್ನು ಸ್ಥಳದಲ್ಲಿ ಬರಮಾಡಿಕೊಳ್ಳಲಾಗಿರುತ್ತದೆ, ವಶಪಡಿಸಿಕೊಂಡ

ಪಾಲಿಥೀನ್ ಚೀಲ ಬಿಳಿ ಬಣ್ಣದಾಗಿದ್ದು ಅದಕ್ಕೆ ಕೈಗಳು ಇತ್ತೋ ಇಲ್ಲವೋ ಎಂಬ ಬಗ್ಗೆ ಈಗ ಹೇಳಲು ಸಾದ್ಯವಿಲ್ಲ, ಅದರೆ ಚೀಲವನ್ನು ನೋಡಿದರೇ ಗುರುತಿಸಬಲ್ಲೇ , ಮೋಟಾರು ಬೈಕನ್ನು ಸೈಡ್ ಸ್ಟಾಂಡ್ ಹಾಕಿ ಅರೋಪಿಗಳು ನಿಲ್ಲಿಸಿದ್ದರು, ತಕ್ಷೀರು ಸ್ಥಳ ತಲುಪುವಾಗ ರಾತ್ರಿಯಾಗಿದ್ದು ಕತ್ತಲು ಇತ್ತು, ಮದ್ಯ ಮಾರಾಟಕ್ಕೆ ಪರವಾನಿಗೆ ಇಲ್ಲದ ಬಗ್ಗೆ ಅರೋಪಿಗಳೇ ಖುದ್ದಾಗಿ ಹೇಳಿರುವುದರಿಂದ ಪರವಾನಿಗೆ ಇರಲಿಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ ,ತಕ್ಷೀರು ಸ್ಥಳದ ವಾಟರ್ ಟ್ಯಾಂಕ್‌ನ ಅಕ್ಕಪಕ್ಕ ಒಂದು ಸುಳ್ಯಕ್ಕೆ ಮತ್ತು ಇನ್ನೊಂದು ಕಾಸರಗೋಡಿಗೆ ಹೋಗುವ ರಸ್ತೆಗಳಿರುತ್ತದೆ. ಈ ಪ್ರಕರಣದಲ್ಲಿ ಮುಂದಿನ ತನಿಖೆ ಮಾಡದೇ ಇರುವ ಕಾರಣ ಪಂಚರ ಹೇಳಿಕೆಗಳನ್ನು ಮಾಡಿದೆನೋ ಇಲ್ಲವೋ ಎಂಬ ಬಗ್ಗೆ ಹೇಳಲು ಈಗ ಸಾಧ್ಯವಿಲ್ಲ, ಅರೋಪಿಗಳು ತಪ್ಪಿಸಿಕೊಳ್ಳುವ ಸಾಧ್ಯತೆ ಇರುವ ಕಾರಣ ತಕ್ಷೀರು ಸಮಯದಲ್ಲಿ ಮಾನ್ಯ ನ್ಯಾಯಿಕ ದಂಡಾಧಿಕಾರಿಯವರಿಂದ ಸರ್ಚ್ ವಾರೆಂಟ್ ಪಡೆಯಲು ಸಾದ್ಯವಾಗಿರುವುದಿಲ್ಲ, ಈ ಬಗ್ಗೆ ಕಾರಣಗಳನ್ನು ದಾಖಲಿಸಿ ರೆಕಾರ್ಡ್ ಆಫ್ ರಿಜನ್ಸ್‌ನ್ನು ಸ್ಥಳದಲ್ಲಿ ತಯಾರು ಮಾಡಿಲ್ಲ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ,ಅರೋಪಿಗಳಿಂದಲೇ ಮದ್ಯದ ಬಾಟಲಿಗಳಿರುವ ಪಾಲಿಥೀನ್ ಚೀಲಗಳನ್ನು ಓಪನ್ ಮಾಡಿಸಿರುತ್ತೇನೆ ,ಮದ್ಯದ ಬಾಟಲಿಗಳು ಪ್ಲಾಸ್ಟಿಕ್ ಯಾ ಗಾಜಿನದೋ ಎಂಬ ಬಗ್ಗೆ ಈಗ ಹೇಳಲು ನೆನಪಿರುವುದಿಲ್ಲ, ಬಾಟಲಿಗಳ ಮೇಲಿರುವ ಮುಚ್ಚಳ ಯಾವ ಬಣ್ಣದು ಎಂದು ಈಗ ಹೇಳಲು ಸಾದ್ಯವಿಲ್ಲ ,ಮಹಜರನ್ನು ತನಿಖಾ ಸಹಾಯಕರು ಬರೆದಿದ್ದು ಅವರ ಹೆಸರು ನೆನಪಿಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾ ತಕ್ಷಿರು ಸ್ಥಳಕ್ಕೆ ಹೋಗಲೇ ಇಲ್ಲ, ಯಾವುದೇ ಪಂಚ ನಾಮೆ ತಯರಿಸಿಲ್ಲ, ಯಾವುದೇ ವಸ್ತು ಗಳನ್ನು ವಶಪಡಿಸಿಲ್ಲ, ಹಾಗೂ ಅರೋಪಿಗಳನ್ನು ದಸ್ತಗಿರಿ ಮಾಡಿಲ್ಲ, ಅರೋಪಿಗಳಿಗೂ ಈ ಮೊಕದ್ದಮೆಗೂ ಯಾವುದೇ ಸಂಬಂಧವಿಲ್ಲ , ಮೇಲಾಧಿಕಾರಿಗಳ ಒತ್ತಡಕ್ಕೆ ಮಣಿದು ಸುಳ್ಳು ಮೊಕದ್ದಮೆ ಹಾಕಲಾಗಿದೆ , ದಾಳಿಗೆ ಹೋಗುವ ಸಂದರ್ಭ ಕೆಲವೊಮ್ಮೆ ಅನಾಮಧೇಯ ಮದ್ಯ ಸಿಗುತ್ತದೆ ಎಂದು ಸೂಚಿಸುವುದು ಇತ್ಯಾದಿ ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಸರಿಯಲ್ಲ ಎಂದು ನಿರಾಕರಣ ಉತ್ತರ ನೀಡಿರುತ್ತಾರೆ.

ಪ್ರಾ.ಸಾ –4

ಪ್ರಕರಣದ ತನಿಖಾದಿಕಾರಿಗಳಾದ ಶ್ರೀ.ಕೃಷ್ಣ ನಾಯ್ಕ್ ನಿವೃತ್ತ ಅಬಕಾರಿ ನಿರೀಕ್ಷಕರು ಇವರು ದಿನಾಂಕ:17–2–2011ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಮೊಕದ್ದಮೆಗೆ ಸಂಬಂಧಪಟ್ಟ ಸೊತ್ತುಗಳಾದ ಮೋಟಾರು ಸೈಕಲ್, ವಿಸ್ಕಿ ಬಾಟಲಿ ಮತ್ತು ನಗದು ರೂ.566/–ನ್ನು ಮುಂದಿನ ವಿಲೇಯ ಬಗ್ಗೆ ಅದಿಕೃತ ಅಧಿಕಾರಿಗಳ ಅದೇಶದಂತೆ ದಿ: 28–4–2009ರಂದು ಸುಳ್ಯ ಪೊಲೀಸ್ ಠಾಣೆಯಿಂದ ಸ್ವೀಕರಿಸಿಕೊಂಡು ಈ ಬಗ್ಗೆ ಮಾನ್ಯ ಅಧಿಕೃತ ಅಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ, ಪುತ್ತೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಿಂದ ವಾಹನದ ಮಾಲೀಕತ್ವದ ಬಗ್ಗೆ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಮತ್ತು ಮೌಲ್ಯ ಮಾಪನ ವರದಿ ಪಡೆದಿದ್ದು ಅದನ್ನು ಅನುಕ್ರಮವಾಗಿ ನಿಶಾನೆ ಪಿ–6 ಮತ್ತು 7 ಎಂದೂ, ಪಿರ್ಯಾದುದಾರರಿಂದ ಪಡೆಯಲಾದ ವಿಶ್ಲೇಷಣಾ ವರದಿಯ ಪ್ರತಿಯನ್ನು ನಿಶಾನೆ ಪಿ – 8 ಎಂದು ಗುರುತಿಸಿ ಸಾಕ್ಷ್ಯ ನೀಡಿರುತ್ತಾರೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸೊತ್ತುಗಳನ್ನು ಸ್ವೀಕರಿಸಿಲ್ಲ, ಸುಳ್ಯ ಪೊಲೀಸ್ ಠಾಣೆಯಿಂದ ಮೊಕದ್ದಮೆಯಲ್ಲಿ ಅಮಾನತ್ತು ಸೊತ್ತುಗಳನ್ನು ತೆಗೆದುಕೊಂಡ ಬಗ್ಗೆ ಅದಿಕೃತ ಅದಿಕಾರಿಗಳ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ ಎಂದು ಸೂಚಿಸಿರುವುದು ಸುಳ್ಳು ,ವಾಹನದ ಮಾಲೀಕತ್ವದ ಬಿ ರಿಜಿಸ್ಟ್ರಾರ್ ವಹಿ, ಮೌಲ್ಯಮಾಪನ ವರದಿ ಬಗ್ಗೆ ಪುತ್ತೂರು ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದಿಲ್ಲ ಹಾಗೂ ಮೊಕದ್ದಮೆಯಲ್ಲಿ ಸರಿಯಾದ ತನಿಖೆ ಮಾಡಿರುವುದಿಲ್ಲ ಎಂಬಿತ್ಯಾಧಿ ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಸರಿಯಲ್ಲ ಎಂದು ತಮ್ಮ ನಿರಾಕರಣ ಉತ್ತರ ನೀಡಿರುತ್ತಾರೆ.

ಪ್ರಾ.ಸಾ –5

ಪ್ರಕರಣದ ಮುಂದಿನ ತನಿಖಾದಿಕಾರಿಗಳಾದ ಶ್ರೀ.ಎಸ್.ತಮ್ಮ ಅಬಕಾರಿ ನಿರೀಕ್ಷಕರು, ಮಂಗಳೂರು ಉಪ ವಿಭಾಗ–1 ಇವರು ದಿನಾಂಕ:21–4–2011ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಕ್ಷೀರಿಗೆ ಸಂಬಂಧಪಟ್ಟಂತೆ ಜಪ್ತುಪಡಿಸಿಕೊಳ್ಳಲಾದ ಮದ್ಯ,ವಾಹನ ಹಾಗೂ ನಗದು ರೂ.566/–ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಪಾರಸ್ಸು ಮಾಡಿ ಬಗ್ಗೆ ಅದಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ ಮಂಗಳೂರು ಇವರಿಗೆ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರ ಮುಖಾಂತರ ರಸಾಯನಿಕ ವಿಶ್ಲೇಷಣಾ ವರದಿ, ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ,ವಾಹನದ ಮೌಲ್ಯ ಮಾಪನ ಇತ್ಯಾದಿ ದಾಖಲೆ ಪ್ರತಿಗಳೊಂದಿಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನೀಡುತ್ತಾ ಸದ್ರಿ ವರದಿಯನ್ನು ನಿಶಾನೆ ಪಿ–9ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–9ಎ ಎಂದು ಗುರುತಿಸಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಕರಣದಲ್ಲಿ ಪ್ರಾ.ಸಾ–1 ರಿಂದ 5 ರವರೆಗೆ ಇಲಾಖಾ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ ಅಭಿಯೋಗದ ಪರ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿ ರಕ್ಷಣಾ ಸಾಕ್ಷಿಗಳನ್ನು ಪ್ರಾಧಿಕಾರದ ಮುಂದೆ ಹಾಜರುಪಡಿಸುವಂತೆ ಹಲವಾರು ಬಾರಿ ಕಾಲವಕಾಶ ನೀಡಿ,ತದನಂತರದಲ್ಲಿ ವಾದ ಮಂಡನೆಗೂ ಕಾಲಾವಕಾಶ ನೀಡಲಾಗಿದ್ದರೂ ವಾಹನದ ಮಾಲೀಕರಾಗಲೀ, ರಕ್ಷಣಾ ಪರ ವಕೀರಾಗಲೀ ಯಾವುದೇ ಪ್ರತಿಕ್ರಿಯೆ ನೀಡದೇ ಇರುವುದರಿಂದ ಸಹಾಯಕ ಅಭಿಯೋಗ ನಿರ್ದೇಶಕರ ವಾದವನ್ನು ಆಲಿಸಲಾಯಿತು.

ಪ್ರಕರಣವು ಮುಟ್ಟುಗೋಲು ನಡವಳಿಯಾಗಿದ್ದು ಇದು ಯಾವುದೇ ಕ್ರಿಮಿನಲ್ ನಡವಳಿಯಾಗಿರುವುದಿಲ್ಲ ಹಾಗೂ ಮುಟ್ಟುಗೋಲು ನಡವಳಿಯಲ್ಲಿ ಸ್ವತಂತ್ರ ಸಾಕ್ಷಿಗಳನ್ನು ಒದಗಿಸಲೇ ಬೇಕೆಂಬುದನ್ನು ಕಡ್ಡಾಯಗೊಳಿಸುವುದು ಸಮ್ಮತವಾಗುವುದಿಲ್ಲ. ಏಕೆಂದರೆ ಸ್ವತಂತ್ರ

ಸಾಕ್ಷಿದಾರರುಗಳ ಹೇಳಿಕೆಗಳು ಅಭಿಯೋಗದ ಪರ ಇರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.ಪ್ರಕರಣದ ಸಂದರ್ಭದಲ್ಲಿ ಕಲಂ 54ರಡಿ ಶೋಧನಾ ವಾರೆಂಟನ್ನು ಪಡೆಯದೇ ಇರುವುದು ಅಭಿಯೋಗದ ವಿಫಲತೆ ಎಂಬುದನ್ನು ಕಕ್ಷಿದಾರರು ಎತ್ತಿ ತೋರಿಸುವಂತಿಲ್ಲ ಏಕೆಂದರೆ ಕಲಂ 54ರಡಿ ಶೋಧನಾ ವಾರೆಂಟನ್ನು ಪಡೆಯುವುದು ಅಜ್ಞಾಪಕವಾಗಿರುವುದಿಲ್ಲ ಎಂಬುದನ್ನು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ವ್ಯಾಖ್ಯಾನಿಸಬೇಕಾಗಿರುತ್ತದೆ. ಶೋಧನಾ ವಾರೆಂಟ್‌ಗಳನ್ನು ಪಡೆಯಲು ವಿಫಲರಾದ ಬಗ್ಗೆ ಕಾರಣಗಳನ್ನು ದಾಖಲಿಸದೇ ಇರುವುದು ಕೇವಲ ಕಾನೂನಿನ ಪ್ರಕ್ರಿಯೆಯಲ್ಲಿ ಒಂದು ಅನಿಯಮತೆಯಾಗಿದ್ದು ಕೇವಲ ಅದೇ ಒಂದು ಕಾರಣದಡಿ ಇಡೀ ಶೋಧನೆಯನ್ನು ಅಥವಾ ಮುಟ್ಟುಗೋಲು ವ್ಯವಹಣೆಯನ್ನು ಅಥವಾ ಪ್ರಾಧಿಕಾರವು ಮಾಡಿದ ಅಂತಿಮ ಮುಟ್ಟುಗೋಲು ಅದೇಶವನ್ನು ಕಾನೂನಿನಡಿ ಅಸಿಂಧುವೆಂದು ಘೋಷಿಸಲು ಬರುವುದಿಲ್ಲ. ಶೋಧನೆಯನ್ನು ಮಾಡುವ ಮೊದಲು ವಾರೆಂಟ್ ಪಡೆದುಕೊಳ್ಳದೇ ಇರುವ ಬಗ್ಗೆ ಅಥವಾ ವಾರೆಂಟ್ ಪಡೆಯಲು ವಿಫಲರಾದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕಾರಣಗಳನ್ನು ದಾಖಲಿಸದೇ ಇರುವುದು ಅರೋಪಿಯ ಹಕ್ಕಿಗೆ ಅಥವಾ ಆತನ ಹಿತಾಸಕ್ತಿಗೆ ದಕ್ಕೆಯನ್ನು ಉಂಟುಮಾಡುತ್ತದೆ ಎಂಬುದಾಗಿ ಅರೋಪಿ ತೋರಿಸಿಕೊಡಬೇಕಾಗುತ್ತದೆ. ಶೋಧನಾ ವಾರೆಂಟನ್ನು ಪಡೆಯಲೇ ಬೇಕು ಎಂಬುದು ಖಡ್ಡಾಯವಾಗಿರುವುದಿಲ್ಲ ಅಥವಾ ಅಜ್ಞಾಪಕವಾಗಿರುವುದಿಲ್ಲ. ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ವಿಫಲರಾದ ಬಗ್ಗೆ ಕಾರಣಗಳನ್ನು ನಮೂದಿದುವುದು ಇಡೀ ಶೋಧನೆ ಮತ್ತು ಅದರ ನಂತರದ ಮುಟ್ಟುಗೋಲು ವ್ಯವಹರಣೆಯನ್ನು ಅಥವಾ ಅಂತಿಮ ಮುಟ್ಟುಗೋಲು ಅದೇಶ ಅಸಿಂಧು ಎಂದು ಘೋಷಣೆ ಮಾಡಿದರೇ ಹಾಡುಹಗಲೇ ಅಥವಾ ಕಣ್ಣೆದುರೇ ಅಕ್ರಮ ಮದ್ಯ ಸಮೇತ ಪ್ರಕರಣದ ಅಪರಾಧಿಗಳನ್ನು ಕೈಚೆಲ್ಲಬೇಕಾಗುತ್ತದೆ ಕಾನೂನನ್ನು ಅಪರಾಧಿಗಳಿಗೆ ಸಹಾಯ ವಾಗುವ ರೀತಿಯಲ್ಲಿ ಅರ್ಥಮಾಡಿಕೊಂಡಲ್ಲಿ ಇನ್ನು ಹೆಚ್ಚಿನ ಅಪರಾಧಗಳು ಆಗುವ ಸಂಭಾವ್ಯತೆಗಳು ಜಾಸ್ತಿ. ಆದುದರಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54 ರ ಹಿಂದಿನ ಉದ್ದೇಶವನ್ನು ಅರಿತು ವ್ಯಾಖ್ಯಾನಿಸಬೇಕಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಗೌರವಾನ್ವಿತರಾದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನೀಡಿದ ತೀರ್ಪು ಸಂ: ILR: 2004:KAR:536ರ ಪುಟ ಸಂ:527ರಲ್ಲಿ ವಿವರವಾಗಿ ಪ್ರಸ್ತಾವಿಸಿರುವುದನ್ನು ವಿವರಿಸುತ್ತಾ ಸಹಾಯಕ ಅಭಿಯೋಗ ನಿರ್ದೇಶಕರು ತಮ್ಮ ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಾ.ಸ–1 ರಿಂದ 5 ರವರ ಸಾಕ್ಷಿ ವಿಚಾರಣೆ ಯನ್ನು ನಡೆಸಲಾಗಿದ್ದು, ರಕ್ಷಣಾ ಪರ ವಕೀಲರಿಗೆ ರಕ್ಷಣಾ ಸಾಕ್ಷಿ ಒದಗಿಸಲು ಸಾಕಷ್ಟು ಕಾಲಾವಕಾಶ ನೀಡಲಾಗಿದ್ದರೂ ರಕ್ಷಣಾ ಪರ ಸಾಕ್ಷಿಗಳನ್ನು ಒದಗಿಸಲು ವಿಫಲರಾಗಿರುವುದು ಮಾತ್ರವಲ್ಲದೇ ವಾದಮಂಡನೆಗೂ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ಸೊತ್ತುಗಳನ್ನು ಜಪ್ತುಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಅಂಶಗಳನ್ನು ಅವಲೋಕಿಸಿ ಮೋಟಾರ್ ಸೈಕಲ್ ನೊಂದಣಿ ಸಂ: KA–21–J–8782ನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಸಾಭೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ದಿ:15–5–2009ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿಗಳಲ್ಲೂ 42.25% ಇರುವುದಾಗಿ ಹಾಗೂ Samples are not confirming to the standards ಎಂದು ದೃಡೀಕರಿಸಲ್ಪಟ್ಟಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಎಂದು ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಹಾಗೂ ತನ್ನ ವಾಹನವು ಅಕ್ರಮ ಮದ್ಯ ಸಾಗಾಣಿಕೆಯಲ್ಲಿ ಶಾಮೀಲಾಗದೇ ಇರುವ ಬಗ್ಗೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ವಾಹನದ ಮಾಲೀಕರು ತೆಗೆದುಕೊಂಡಿದ್ದಾರೆ ಎಂಬ ಅಂಶವನ್ನು ವಾಹನದ ಮಾಲೀಕರು ಸಾಭೀತುಗೊಳಿಸಬೇಕಾಗುತ್ತದೆ. ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸನ್ನು ಖುದ್ದಾಗಿ ಜ್ಯಾರಿಗೊಳಿಸಲಾಗಿದ್ದರೂ ವಾಹನದ ಮಾಲೀಕರಿಂದಾಗಲೀ ಅಥವಾ ಅವರ ಪ್ರತಿನಿಧಿಗಳಿಂದಾಗಲೀ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಯ ನಂತರದಲ್ಲಿ ರಕ್ಷಣಾ ಸಾಕ್ಷಿ ವಿಚಾರಣೆಗಾಗಿ ಕಾಲಾವಕಾಶ ನೀಡಲಾಗಿದ್ದರೂ ವಾಹನದ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಹಾಗೂ ವಾದ ಮಂಡನೆ ಸಂದರ್ಭದಲ್ಲಿ ಕೂಡ ರಕ್ಷಣಾ ಪರ ವಕೀಲರು ಪ್ರಾಧಿಕಾರದ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದನ್ನು ಅವಲೋಕಿಸಿದಾಗ ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಸಾಕ್ಷ್ಯಾಧಾರಗಳೊಂದಿಗೆ ಹಾಜರಾಗಿ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಹಾಗೂ ಸದ್ರಿ ವಾಹನವು ಅಬಕಾರಿ ತಕ್ಷೀರಿನಲ್ಲಿ ಶಾಮೀಲಾಗದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ಅಂಶವನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಅಡಿಯಲ್ಲಿ ಹೇಳಿದಂತೆ ರುಜುವಾತು ಪಡಿಸಲು ವಿಫಲರಾಗಿರುವುದರಿಂದ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ವಾಹನದ ಮಾಲೀಕರು ಬಳಸಿರುವುದು ನಿಸ್ಸಂದೇಹ ಎಂದು ಪ್ರಾಧಿಕಾರವು ಮನಗಂಡು ಮೂರನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಹಾಗೂ ವಾಹನದಲ್ಲಿ ಜಪ್ತುಪಡಿಸಿದ ಮದ್ಯದಲ್ಲಿ ಮದ್ಯಸಾರದ ಅಂಶ ಇರುವುದು ವಿಶ್ಲೇಷಣಾ ವರದಿಯಿಂದ ದೃಡಪಟ್ಟಿರುವುದರಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ

ಮೋಟಾರ್ ಸೈಕಲ್ ನೊಂದಣಿ ಸಂ: KA-21-J-8782ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ,ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲ0 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಸುಳ್ಯ ಪೊಲೀಸ್ ಠಾಣಾ ಕ್ರೈಂ ಸಂ:37/2009, ದಿ:10–2–2009ರಲ್ಲಿ ಜಪ್ತು ಪಡಿಸಿರುವ ಮೋಟಾರ್ ಸೈಕಲ್ ನೊಂದಣಿ ಸಂ: KA–21–J–8782 ನ್ನು (ಚಾಸೀಸ್ ನಂ:MD625DF4471D98597 ಮತ್ತು ಇಂಜಿನ್ ನಂ:–0:F4D71214986) ನ್ನು ನಿಯಮ 43ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ:31–7–2009 ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿನಾಂಕ:20–10–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–1 : ಶ್ರೀ.ರಾಧಕೃಷ್ಣ, ಹೆಚ್.ಸಿ ನಂ: 1391 , ಸುಳ್ಯ ಪೊಲೀಸ್ ಠಾಣೆ
ಪ್ರಾ.ಸಾ–2 : ಶ್ರೀ.ಜಗನ್ನಾಥ ,ಪಿ.ಸಿ. ನಂ: 1741, ಸುಳ್ಯ ಪೊಲೀಸ್ ಠಾಣೆ
ಪ್ರಾ.ಸಾ 3: ಶ್ರೀ. ಪಿ.ಡಿ.ಸವಿತ್ರ ತೇಜ, ಪೊ.ಉ.ನಿ ,ಬೈಂದೂರು ಪೊಲೀಸ್ ಠಾಣೆ
ಪ್ರಾ.ಸಾ–4 : ಶ್ರೀ.ಕೃಷ್ಣ ನಾಯ್ಕ, ನಿವೃತ್ತ ಅಬಕಾರಿ ನಿರೀಕ್ಷಕರು
ಪ್ರಾ.ಸಾ–5 : ಶ್ರೀ.ಎಸ್.ತಮ್ಮ ,ಅ.ನಿ ,ಮಂಗಳೂರು ಉಪ ವಿಭಾಗ–1

ಅನುಬಂಧ– II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ– 1 : ಮಹಜರು ಪ್ರತಿ ಮತ್ತು ನಿಶಾನೆ ಪಿ–1ಎ ,ಬಿ,ಸಿ : ಸಾಕ್ಷಿ ಗಳ ಸಹಿ
ನಿಶಾನೆ ಪಿ–2 : ಮಾನ್ಯ ಜೆ.ಎಂ.ಎಫ್ ಸಿ ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನಾ ವರದಿ
ನಿಶಾನೆ ಪಿ–2ಎ : ಅದರ ಸಾಕ್ಷಿ ಸಹಿ
ನಿಶಾನೆ ಪಿ–3 : ಪ್ರಥಮ ಮಾಹಿತಿ ವರದಿ ಮತ್ತು ನಿಶಾನೆ ಪಿ–3 ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–4 : ಸೊತ್ತು ಪಟ್ಟಿ ಮತ್ತು ನಿಶಾನೆ ಪಿ–4 ಎ : ಸಾಕ್ಷಿ ಸಹಿ
ನಿಶಾನೆ ಪಿ–5 : ಫಿರ್ಯಾದುದಾರರು ಅಧಿಕೃತ ಅಧಿಕಾರಿಗಳಿಗೆ ಪ್ರಕರಣ ಹಸ್ತಾಂತರ ಬಗ್ಗೆ ಕೋರಿದ ಪತ್ರ
ನಿಶಾನೆ ಪಿ–5ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–6:– ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ–7 :– ಮೌಲ್ಯ ಮಾಪನ ವರದಿ
ನಿಶಾನೆ ಪಿ–8 : :ರಸಾಯನಿಕ ವರದಿ
ನಿಶಾನೆ ಪಿ–9 : ತನಿಖಾ ವರದಿ ಮತ್ತು ನಿಶಾನೆ ಪಿ–9 ಎ : ಅದರ ಮೇಲಿನ ಸಾಕ್ಷಿ ಸಹಿ

ಅನುಬಂಧ– **III**

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

–ಯಾವುದು ಇರುವುದಿಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :–

–ಯಾವುದು ಇರುವುದಿಲ್ಲ–

ಬಿ.ವಿ. ಹೂವಪ್ಪಗೌಡ

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1200

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/53/ಡಿಟಿಸಿಆರ್/2010–11 ದಿನಾಂಕ: 20–10–2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು ವಿಶೇಷ ಪೊಲೀಸ್ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು

ಆರೋಪಿ

1) ಯೂಸೂಫ್ ಯಾನೆ ಇಸುಬು, ಕೋಡಪದವು, ವಿಟ್ಲ, ಬಂಟ್ವಾಳ ತಾಲೂಕು

ವಾಹನದ ಮಾಲೀಕರು

ಶ್ರೀ.ಡೆಲ್ವಿನ್ ಡಿಸೋಜ, ಬಿನ್:ಫೆಲಿಕ್ಸ್ ಡಿಸೋಜ, ರಾಂಡ್ ಹೌಸ್, ಬಂಗ್ರಕೂಳೂರು, ಮಂಗಳೂರು

ಪ್ರಕರಣದ ಮುಖ್ಯಾಂಶಗಳು:–

ದಿನಾಂಕ:07–10–2010ರಂದು ಸಂಜೆ 3–30 ಗಂಟೆ ಸಮಯಕ್ಕೆ ದೊರೆತ ಖಚಿತ ಮಾಹಿತಿಯ ಮೇರೆಗೆ ಫಿರ್ಯಾದುದಾರರಾದ ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಬಂಟ್ವಾಳ ತಾಲೂಕು ಬಾಳೆಪುಣಿ ಗ್ರಾಮದ ಮುಡಿಪು–ಪಾತೂರು ರಸ್ತೆಯಲ್ಲಿ ಇರಾ ಕಡೆ ಹೋಗುವ ಮಾರ್ಗದಲ್ಲಿ ಟಾಟಾ ಇಂಡಿಕಾ ಕಾರು ನೊಂದಣಿ ಸಂ:KA–19–Z–1636ರಲ್ಲಿ ಅಕ್ರಮವಾಗಿ 286.560 ಲೀ.ಗೋವಾ ಮದ್ಯವನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34ರಂತೆ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ ,ಅರೋಪಿಯಾದ ಯೂಸೂಫ್ ಯಾನೆ ಇಸುಬು, ಕೋಡಪದವು, ವಿಟ್ಲ, ಬಂಟ್ವಾಳ ತಾಲೂಕು ಇವರ ಹಾಗೂ ವಾಹನದ ಮಾಲೀಕರ ವಿರುದ್ದ ವಿಶೇಷ ಪೊಲೀಸ್ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ,ಮಂಗಳೂರು ಇವರ ಕ್ರೈಂ ಸಂ: 38/2010, ದಿನಾಂಕ: 07–10–2010 ರಂದಿ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಅಬಕಾರಿ ಕಾಯಿದೆಯಡಿ ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿ:11–10–2010ರಂದು ಈ ಪ್ರಾದಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯ ವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:03–11–2010 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಸಿಲ್ವರ್ ಬಣ್ಣದ ಟಾಟಾ ಇಂಡಿಕಾ ಕಾರು ಸಂ: KA–19–Z–1636 (ಚಾಸೀಸ್ ಸಂ: 600142CVZP279188 ಮತ್ತು ಇಂಜಿನ್ ಸಂ: 279001153804)
2) 27 ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ತಲಾ 48ರಂತೆ ಸೊಲೋ ಪೈನ್ ಬ್ರಾಂಡಿ ಎಂಬ ಒಟ್ಟು 1,296 ಬಾಟಲಿಗಳಲ್ಲಿ –233.280 ಲೀ . ಗೋವಾ ಮದ್ಯ .
3) 4 ರಟ್ಟಿನ ಪೆಟ್ಟಿಗೆಗಳಲ್ಲಿ 750 ಎಂಎಲ್‌ನ ತಲಾ 12ರಂತೆ ಗ್ರೀನ್ ಲೇಬಲ್ ಗ್ರೇಫ್ ಬ್ರಾಂಡಿ ಎಂಬ ಒಟ್ಟು 48 ಬಾಟಲಿಗಳಲ್ಲಿ –36.000 ಲೀ ಗೋವಾ ಮದ್ಯ .
4) ಒಂದು ಕೈಚೀಲದಲ್ಲಿ 180 ಎಂಎಲ್‌ನ ಸೊಲೋ ಪೈನ್ ಬ್ರಾಂಡಿಯ 96 ಬಾಟಲಿಗಳಲ್ಲಿ –17.280 ಲೀ ಗೋವಾ ಮದ್ಯ
5) KA-19-MK-2277 ಎಂಬ ಸಂಖ್ಯೆ ಇರುವ ನಂಬರ್ ಪ್ಲೇಟು–1

(ಕ್ರ.ಸಂ:2ರಿಂದ 4 ರವರೆಗಿನ ಮದ್ಯದಿಂದ ಪ್ರತಿ ಪೆಟ್ಟಿಗೆ ಮತ್ತು ಕೈಚೀಲದಿಂದ ತಲಾ ಒಂದೊಂದು ಬಾಟಲಿಯಂತೆ ಒಟ್ಟು 32 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ ಇವರ ಮುಖೇನಾ ಸಲ್ಲಿಸಿರುವ ತನಿಖಾ ವರದಿ ಸಂಖ್ಯೆ : ಅ.ಇ/ಬ.ವ/ ಅರ್‌ಸಿಆರ್.ಸಂ: 17/2010–11 ದಿ:30–11–2010ರ ವರದಿಯೊಂದಿಗೆ ಮುಖ್ಯ ರಾಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ ಸಹಾಯಕ ರಸಾಯನ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ ವಿಶ್ಲೇಷಕರು,ಅಬಕಾರಿ ಇಲಾಖೆ,ಬೆಂಗಳೂರು ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ: ಸಿಸಿಎಲ್–5668/2010 ದಿ:23–10–2010ನ್ನು ಸಲ್ಲಿಸಿ, ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ ಇತರ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಅದೇಶ ಕೋರಿರುತ್ತಾರೆ. ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರದ ತೀಕ್ಷ್ಣತೆ ಅನುಕ್ರಮವಾಗಿ 25.6 ಡಿಗ್ರಿ ಯು.ಪಿ, 24.9 ಡಿಗ್ರಿ ಯು.ಪಿ ಮತ್ತು 25.2 ಡಿಗ್ರಿ ಯು.ಪಿ ಇರುವುದಾಗಿ ದೃಡೀಕರಿಸಿದ್ದು, ತನಿಖಾದಿಕಾರಿಗಳ ಶಿಫಾರಸ್ಸಿನಂತೆ ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ ಉಳಿದ ಮದ್ಯ (ಮಾದರಿ ಹೊರತುಪಡಿಸಿ)ವನ್ನು ದಿ:17–2–2011ರ ಅದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶ ಪಡಿಸಲು ಅದೇಶಿಸಲಾಗಿರುತ್ತದೆ. ಸದ್ರಿ ಅದೇಶದ ಅನ್ವಯ ಮದ್ಯವನ್ನು ದಿನಾಂಕ:2–5–2011 ರಂದು ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ಪ್ರಕರಣದ ತನಿಖಾದಿಕಾರಿಗಳು ದಿ:1–3–2011ರ ವರದಿ ಸಂ: ಅಇ /ಬ.ವ/ಆರ್.ಸಿಆರ್/ 17/2010–11ರೊಂದಿಗೆ ಪ್ರಕರಣ ಜಪ್ತು ಸಂದರ್ಭದಲ್ಲಿ ವಾಹನಕ್ಕೆ ಆಳವಡಿಸಲಾದ ನೊಂದಣಿ ಫಲಕ ಸಂ: KA-19-Z-1636 ಮತ್ತು ವಾಹನದಲ್ಲಿ ಪತ್ತೆಯಾದ ಇನ್ನೊಂದು ನೊಂದಣಿ ಫಲಕ ಸಂ: KA-19-MK-2277 ಇವುಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆಯಲಾದ ಬಿ ಎಕ್ಸ್ ಟ್ರಾಕ್ಟ್ ವರದಿಗಳನ್ನು ಈ ಪ್ರಾದಿಕಾರಕ್ಕೆ ಸಲ್ಲಿಸಿ ವಾಹನದ ಒಡೆತನ ನಿರೂಪಿಸಿ ಯಾರೊಬ್ಬರೂ ಬಿಡುಗಡೆ ಬಗ್ಗೆ ಮುಂದೆ ಬಾರದೇ ಇರುವುದರಿಂದ ಹಾಗೂ ವಾಹನದ ಸ್ಥಿತಿಗತಿ ತೀರಾ ಕ್ಷೀಣವಾಗಿರುವುದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ. ವಾಹನಕ್ಕೆ ಆಳವಡಿಸಲಾದ ನೊಂದಣಿ ಫಲಕ ಸಂ: KA–19–Z–1636ಕ್ಕೆ ಸಂಬಂಧಿಸಿದಂತೆ ಪಡೆಯಲಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪರಿಶೀಲಿಸಲಾಗಿ ಸದ್ರಿ ಸಂಖ್ಯೆಯು ಮಾರುತಿ ಅಲ್ಟೋ ಕಾರಿಗೆ ಸಂಬಂಧಿಸಿದಾಗಿದ್ದು, ವಾಹನದ ಮಾದರಿ, ಚಾಸೀಸ್ ಸಂಖ್ಯೆ ಮತ್ತು ಇಂಜಿನ್ ಸಂಖ್ಯೆ ಜಪ್ತಾದ ವಾಹನಕ್ಕೆ ತಾಳೆಕಂಡುಬಾರದೇ ಇರುತ್ತದೆ. ಆದಾಗ್ಯೂ ಸದ್ರಿ ನೊಂದಣಿ ಫಲಕ ಸಂ: KA-19-Z-1636ಕ್ಕೆ ಸಂಬಂಧಿಸಿದ ಮಾಲೀಕರಾದ ಶ್ರೀ.ಮಂಜುನಾಥ ದೇವದಾಸ್ ನಾಯಕ್, ಬಿನ್:ದೇವದಾಸ್ ನಾಯಕ್, ಡೋರ್ ನಂ:307 3ನೇ ಶ್ರೀ.ಭುವನೇಂದ್ರ ಅಪಾರ್ಟ್‌ಮೆಂಟ್ ,ಸಿ.ವಿ ನಾಯಕ್ ಹಾಲ್ ನ ಹಿಂದುಗಡೆ ,ಕದ್ರಿ, ಮಂಗಳೂರು ಮತ್ತು ಪ್ರಕರಣದ ಮುಖ್ಯ ಅರೋಪಿತನಾದ ಯೂಸೂಫ್ ಯಾನೆ ಇಸುಬು , ಕೋಡಪದವು,ವಿಟ್ಲ ಬಂಟ್ವಾಳ ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಪ್ರಕಾರ ದಿ:8–3–2011ರಂದು ನೀಡಲಾದ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿದ್ದು, ಅರೋಪಿತ ವ್ಯಕ್ತಿಗೆ ದಿ:22–3–2011ರಂದು ನೋಟಿಸು ಜ್ಯಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರ ಸ್ವೀಕೃತವಾಗಿದ್ದು , ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಹಾಗೂ ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಬಿಡಿಯಾಗಿ ಪತ್ತೆಯಾದ ನೊಂದಾಣಿ ಫಲಕ ಸಂ: KA-19-MK-2277ಕ್ಕೆ ಸಂಬಂಧಿಸಿದಂತೆ ಪಡೆಯಲಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿತವಾದ ವಾಹನದ ಮಾದರಿ, ಚಾಸೀಸ್ ಸಂಖ್ಯೆ ಮತ್ತು ಇಂಜಿನ್ ಸಂಖ್ಯೆ ಜಪ್ತಾದ ವಾಹನಕ್ಕೆ ಒಂದಕ್ಕೊಂಡು ತಾಳೆಕಂಡು ಬಂದಿದ್ದು, ಸದ್ರಿ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾಗಿರುವ ವಾಹನದ ಮಾಲೀಕರಾದ ಶ್ರೀ.ಡೆಲ್ವಿನ್ ಡಿಸೋಜ, ಬಿನ್:ಫೆಲಿಕ್ಸ್ ಡಿಸೋಜ, ರಾಂಡ್ ಹೌಸ್ , ಬಂಗ್ರಕೂಳೂರು, ಮಂಗಳೂರು ಇವರಿಗೆ ಮತ್ತು ವಾಹನದ ಹೆಚ್.ಪಿ.ಎ ದಾರರಾದ ಶ್ರೀರಾಮ್ ಟ್ರಾನ್ಸ್ ಪೋರ್ಟ್ಸ್ ಪೈನ್ಯಾನ್ಸ್ ,ಕೆ.ಎಚ್.ರೋಡ್,ಬೆಂಗಳೂರು ಇವರಿಗೆ ದಿ:28–7–2011ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೊಂದಾವಣೆ ಅಂಚೆ ಮೂಲಕ ನೀಡಲಾದ ಕಾರಣ ಕೇಳಿ ನೋಟಿಸು ದಿನಾಂಕ:1–8–2011ರಂದು ಜ್ಯಾರಿಯಾಗಿದ್ದರೂ ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ವಾಹನವನ್ನು ದಿನಾಂಕ:07–10–2010ರಂದು ಪ್ರಕರಣ ದಾಖಲಿಸಿ ವಶಪಡಿಸಿಕೊಂಡು ಈಗಾಗಲೇ 1 ವರ್ಷ ಕಳೆದರೂ, ವಾಹನದ ಮಾಲೀಕರು/ಸುಪರ್ಧಿ ಹೊಂದಿರುವವರಾಗಲೀ ಅಥವಾ ಅವರ ಪರ ವಕೀಲರಾಗಲೀ ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಜಪ್ತು ಸಂದರ್ಭದಲ್ಲಿ ವಾಹನಕ್ಕೆ ನಕಲಿ ನೊಂದಾಣಿ ಫಲಕವನ್ನು ಆಳವಡಿಸಿರುವುದು ತನಿಖೆಯಿಂದ ತಿಳಿದುಬಂದಿರುವುದರಿಂದ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಭೀತಾಗಿದ್ದು , ಜಪ್ತಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾದಿಕಾರವು ಮನಗಂಡು ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಟ್ಟುಗೋಲು ನಡವಳಿ ಪ್ರಯುಕ್ತ ಸಾಕ್ಷಿ ವಿಚಾರಣೆಯನ್ನು ಆರಂಭಿಸಿ, ಪ್ರಕರಣದ ಫಿರ್ಯಾದುದಾರರನ್ನು ಪ್ರಾಸಾ–1 ಮತ್ತು ತನಿಖಾಧಿಕಾರಿಯವರನ್ನು ಪ್ರಾಸಾ–2ರನ್ನಾಗಿ ಸಾಕ್ಷಿ ವಿಚಾರಣೆ ನಡೆಸಿ ಪ್ರಕರಣದ ಮುಖ್ಯ ದಾಖಲಾತಿಗಳನ್ನು ನಿಶಾನೆ ಪಿ–1ರಿಂದ ನಿಶಾನೆ ಪಿ–11ಎ ತನಕ ಸಾಕ್ಷಿದಾರರಿಂದ ಗುರುತಿಸಲಾಗಿರುತ್ತದೆ. ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲಿ, ಅವರ ಪರ ಪ್ರತಿನಿಧಿಗಳಾಗಲೀ ಹಾಜರಿರದ ಕಾರಣ ರಕ್ಷಣಾ ಪರ ಸಾಕ್ಷಿಗಳು ಇಲ್ಲವೆಂದು ಪರಿಗಣಿಸಿ, ಅಭಿಯೋಗದ ಪರ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿ, ಸರ್ಕಾರಿ ಅಭಿಯೋಜಕರ ವಾದ ಮಂಡನೆಯನ್ನು ಆಲಿಸಿ ಆ ಕೆಳಗಿನಂತೆ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

1) ದಿನಾಂಕ:07–10–2010ರಂದು ಟಾಟಾ ಇಂಡಿಕಾ ಡಿಎಲ್ಎಸ್ ಕಾರು ನಕಲಿ ನೊಂದಣಿ ಸಂ: KA-19-Z-1636 ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ ?

2) ದಿನಾಂಕ:7–10–2010 ರಂದು ಟಾಟಾ ಇಂಡಿಕಾ ಡಿಎಲ್‌ಎಸ್ ಕಾರು ನಕಲಿ ನೊಂದಣಿ ಸಂ: KA-19-Z-1636 ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕ ವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಜಪ್ತಾದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ, ಮುಖ್ಯ ರಾಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ ಸಹಾಯಕ ರಸಾಯನ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ ವಿಶ್ಲೇಷಕರು,ಅಬಕಾರಿ ಇಲಾಖೆ, ಬೆಂಗಳೂರು ಇವರು ನೀಡಿರುವ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ: ಸಿಸಿಎಲ್–5668/2010, ದಿ:23–10–2010ರಲ್ಲಿ ಮದ್ಯಸಾರದ ತೀಕ್ಷ್ಣತೆ ಅನುಕ್ರಮವಾಗಿ 25.6 ಡಿಗ್ರಿ ಯು.ಪಿ, 24.9 ಡಿಗ್ರಿ ಯು.ಪಿ ಮತ್ತು 25.2 ಡಿಗ್ರಿ ಯು.ಪಿ ಇರುವುದಾಗಿ ದೃಡೀಕರಿಸಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಎಂದು ಸಾಭೀತಾಗಿರುವುದು ಒಂದನೇ ಅಂಶಕ್ಕೆ ಗುಣಾತ್ಮಕವಾಗಿರುತ್ತದೆ.

ಪ್ರಕರಣದ ಫಿರ್ಯಾದುದಾರರು ತಯಾರಿಸಿರುವ ದಾಖಲಾತಿಗಳು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ದಿ:7–10–2010 ರಂದು ವಶಪಡಿಸಿಕೊಂಡಿರುವ ಟಾಟಾ ಇಂಡಿಕಾ ಡಿಎಲ್‌ಎಸ್ ಕಾರಿಗೆ ನಕಲಿ ನೊಂದಣಿ ಫಲಕ ಸಂ: KA-19-Z-1636ನ್ನು ಆಳವಡಿಸಿ ಅಕ್ರಮವಾಗಿ 286.560 ಲೀಟರ್ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪ್ರತವಿಲ್ಲದೆ, ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಜಪ್ತುಪಡಿಸಿಕೊಂಡ ವಾಹನ ನೊಂದಣಿ ಸಂ: KA–19–Z–1636 ಎಂಬ ಫಲಕವನ್ನು ಆಳವಡಿಸಲಾದ ಟಾಟಾ ಇಂಡಿಕಾ ಡಿಎಲ್‌ಎಸ್ ಕಾರು ಇದಕ್ಕೆ ಸಂಬಂಧಿಸಿದಂತೆ ತನಿಖಾದಿಕಾರಿಗಳು ನೊಂದಣಿ ಸಂಖ್ಯೆ ಆಧಾರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು ಸಲ್ಲಿಸಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪರಿಶೀಲಿಸಲಾಗಿ ಸದ್ರಿ ವಾಹನವು ಮಾರುತಿ ಕಂಪೆನಿ ನಿರ್ಮಿತ (ಚಾಸೀಸ್ ಸಂ: MA3EYD81S00911179 ಮತ್ತು ಇಂಜಿನ್ ಸಂ: F8DN3393925) ವಾಹನದಾಗಿದ್ದು , ಜಪ್ತಾದ ವಾಹನವು ಟಾಟಾ ಇಂಡಿಕಾ ಕಂಪೆನಿ ನಿರ್ಮಿತ (ಚಾಸೀಸ್‌ನಂ: 600142CVZP27918 ಮತ್ತು ಇಂಜಿನ್ ನಂ: 475IDI02CVZP21789) ವಾಹನವಾಗಿರುವುದರಿಂದ ಒಂದಕ್ಕೊಂದು ತಾಳೆ ಕಂಡು ಬಾರದೇ ಇರುವುದು ಹಾಗೂ ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಬಿಡಿಯಾಗಿ ಪತ್ತೆಯಾಗಿರುವ ನೊಂದಣಿ ಫಲಕ ಸಂ: KA–19–MK–2277 ಇದಕ್ಕೆ ಸಂಬಂಧಿಸಿದಂತೆ ಪಡೆಯಲಾದ ಬಿ ರಿಜಿಸ್ಟ್ರಾರ್ ವರದಿಗೆ ಅನುಗುಣ ವಾಗಿ ನೊಂದಣಿ ಮಾಲೀಕರಿಗೆ ಪ್ರಾದಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಮಾಲೀಕರಿಂದ ಯಾವುದೇ ಪ್ರತಿಕ್ರಿಯೆ ಇಲ್ಲದೇ ಇರುವುದರಿಂದ ಅಕ್ರಮ ಸಂದರ್ಭದಲ್ಲಿ ಟಾಟಾ ಇಂಡಿಕಾ ಡಿಎಲ್‌ಎಸ್ ಕಾರಿಗೆ ಉದ್ದೇಶಪೂರ್ವಕವಾಗಿ ನಕಲಿ ನಂಬರ್ ಪ್ಲೇಟ್ KA–19–Z–1636ನ್ನು ಆಳವಡಿಸಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ವಾಹನದ ಸುಪರ್ಧಿ ಹೊಂದಿರುವ ವ್ಯಕ್ತಿ ಅಥವಾ ವಾಹನದ ಮಾಲೀಕರು ತಂತ್ರ ಹೂಡಿರುವುದು ಸಾಭೀತಾಗಿರುತ್ತದೆ. ಅಲ್ಲದೇ ಪ್ರಕರಣ ದಾಖಲಾಗಿ 1 ವರ್ಷ ಕಳೆದರೂ ತನ್ನ ವಾಹನವನ್ನು ಪತ್ತೆಹಚ್ಚಲು ಅಥವಾ ಪಡೆಯಲು ಪ್ರಯತ್ನಿಸದೇ ಇರುವುದರಿಂದ ವಾಹನದ ಮಾಲೀಕರು ತಮ್ಮ ತಿಳುವಳಿಕೆಯಿಂದಲೇ ಉದ್ದೇಶ ಪೂರ್ವಕವಾಗಿ ಈ ಅಪರಾಧವನ್ನು ಎಸಗಿ ತದನಂತರದಲ್ಲಿ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದ ಇದೊಂದು 'ವಾರೀಸುದಾರರು ಇಲ್ಲದ ಪ್ರಕರಣವೆಂದು' ಸಾಭೀತಾಗಿರುವುದರಿಂದ ಮೂರನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಲಾಗಿದೆ.

ಪೂರಕ ಅಂಶ:–

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಅರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾದಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರ ದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಕಾರಣ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು , ಮಂಗಳೂರು ಇವರ ಠಾಣಾ ತಕ್ಷೀರು ಸಂಖ್ಯೆ:38/2010 ದಿ:7–10–2010 –ರಂದು ದಾಖಲಿಸಿದ ಪ್ರಕರಣದಲ್ಲಿ ಆರೋಪಿ ಯು 286.560 ಲೀಟರ್ ಅಕ್ರಮ ಮದ್ಯವನ್ನು ಸಾಗಾಣಿಕೆ ಮಾಡುವುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿರುವುದನ್ನು ಪರಿಗಣಿಸಿ ಪ್ರಾಧಿಕಾರವು ಈ ಕೆಳಕಂಡಂತೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ ೪೩ (ಬಿ) ಅಡಿ ಕ್ರಮ ಜರುಗಿಸಿ, ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು, ಮಂಗಳೂರು ಇವರ ಕ್ರೈಂ ಸಂ: 38/2010 ದಿನಾಂಕ: 7–10–2010 –ಜಪ್ತುಪಡಿಸಿಕೊಂಡಿರುವ ನಕಲಿ ನಂಬರು ಪ್ಲೇಟ್ ಸಂ: KA-19-Z-1636 ನ್ನು ಅಳವಡಿಸಲಾದ ಟಾಟಾ ಇಂಡಿಕಾ ಡಿಎಲ್ಎಸ್ ಕಾರು (ಇಂಜಿನ್ ನಂ: 6001 42CVZ27918) ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ: 17–02–2011ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿ: 20–10–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1199

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/220/ಡಿಟಿಸಿಆರ್/2007–08 ದಿನಾಂಕ: 4–8–2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು ಬಂಟ್ವಾಳ ವಲಯ, ಬಂಟ್ವಾಳ

ಆರೋಪಿಗಳು:

1) ಅಶ್ವಿನಿ, ಬಿನ್:ಮಾಧವ ,ಕನ್ಯಾನ ಮನೆ, ಕನ್ಯಾನ ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು (ನೌಕರ)
2) ಶ್ರೀ.ಮಾಧವ ಕೆ, ಬಿನ್:ದಿ:ಅತ್ತಾರ್ ಬೆಳ್ಚಡ, ಕನ್ಯಾನ ಅಂಚೆ ಮತ್ತು ಗ್ರಾಮ, (ಸನ್ನದುದಾರರು)

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ನಿರೀಕ್ಷಕರು ,ಬಂಟ್ವಾಳ ವಲಯ,ಬಂಟ್ವಾಳ ಇವರು ತಮ್ಮ ಸಿಬ್ಬಂಧಿಯವರೊಂದಿಗೆ ದಿನಾಂಕ:12–12–2007ರಂದು ರಾತ್ರಿ 9–00 ಗಂಟೆ ಸಮಯದಲ್ಲಿ ಬಂಟ್ವಾಳ ತಾಲೂಕು ಉಪ್ಪಳ–ಕನ್ಯಾನ ರಸ್ತೆ ಕನ್ಯಾನ ಎಂಬಲ್ಲಿರುವ ಕ.ಸಂ:2–144(1)ರಲ್ಲಿ ಶ್ರೀ.ಮಾಧವ ಕೆ, ಬಿನ್:ದಿ:ಅತ್ತಾರ್ ಬೆಳ್ಚಡ ,ಕನ್ಯಾನ ಮನೆ, ಕನ್ಯಾನ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು ಇವರ ಒಡೆತನಕ್ಕೆ ಸೇರಿದ ಸಿಎಲ್–9 ಸನ್ನದು ಸಂ: ಎಸ್‌ಡಿಕೆ:ಐಎಂಎಲ್ :ಬಿಎನ್‌ಟಿ:12:ಸಿಎಲ್–9:2007–08 ರಲ್ಲಿ ತಪಾಸಣೆ ಕೈಗೊಂಡ ಸಂದರ್ಭದಲ್ಲಿ ವಿವಿಧ ಬ್ರಾಂಡ್‌ನ ಲೇಬಲ್‌ಗಳಿರುವ ಬಾಟಲುಗಳಲ್ಲಿ ಒಟ್ಟು 49.500 ಲೀ ನಕಲಿ ಮದ್ಯವನ್ನು ಅಕ್ರಮವಾಗಿ ಮಾರಾಟದ ಸಲುವಾಗಿ ದಾಸ್ತಾನು ಇಟ್ಟಿರುವುದನ್ನು ಪತ್ತೆಹಚ್ಚಿ,ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,12,13 , 14ರಂತೆ ಅಪರಾಧವಾಗಿದ್ದು, ಕಲಂ 32,34,35,36,43 (ಎ)ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ತಯಾರಿಸಿ, ಸನ್ನದು ಅವರಣದಲ್ಲಿ ಪತ್ತೆಯಾದ ನಕಲಿ ಮದ್ಯವನ್ನು ಮತ್ತು ರಹದಾರಿ ಮೂಲಕ ಪಡೆಯಲಾಗಿದ್ದ ಮದ್ಯ ಹಾಗೂ ಬೀರಿನ ದಾಸ್ತಾನು ಪಟ್ಟಿಯನ್ನು ತಯಾರಿಸಿ, ಸದ್ರಿ ಸನ್ನದಿನಲ್ಲಿ ದಾಸ್ತಾನು ಹೊಂದಲಾಗಿದ್ದ ಅಕ್ರಮ 49.500 ಲೀಟರು ನಕಲಿ ಮದ್ಯ ಹಾಗೂ ಸನ್ನದು ಆವರಣದಲ್ಲಿದ್ದ ಸರ್ಕಾರಕ್ಕೆ ಶುಲ್ಕ ಪಾವತಿಸಿದ ಅಸಲಿ ಮದ್ಯ 440.340 ಲೀ ಮತ್ತು 144.890 ಲೀ ಬಿಯರ್ ದಾಸ್ತಾನನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43(ಎ)ರೀತ್ಯಾ ಸನ್ನದುದಾರರ ಅಧಿಕೃತ ನೌಕರರ ಸಮಕ್ಷಮ ಜಪ್ತುಪಡಿಸಿಕೊಂಡು, ನೌಕರನಾದ ಅಶ್ವಿನ್,ಬಿನ್:ಮಾಧವ , ಕನ್ಯಾನ ಮನೆ, ಕನ್ಯಾನ ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು ಮತ್ತು ಮಾಧವ ಕೆ, ಬಿನ್:ದಿ:ಅತ್ತಾರ್ ಬೆಳ್ಚಡ, ಕನ್ಯಾನ ಮನೆ, ಕನ್ಯಾನ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು ಇವರುಗಳನ್ನು ದಸ್ತಗಿರಿ ಮಾಡಿ ವಶಕ್ಕೆ ತೆಗೆದುಕೊಂಡು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ತಕ್ಷೀರು ಸಂ: 2/2007–08 ದಿ:12–12–07ರಂತೆ ಮೊಕದ್ದಮೆಯನ್ನು ದಾಖಲಿಸಲಾಗಿರುತ್ತದೆ.

ವಶಪಡಿಸಿಕೊಂಡ ಸೊತ್ತುಗಳು:–

1) 750 ಎಂ.ಎಲ್.ನ 40 ಸೀಸೆಗಳಲ್ಲಿ ನಾದನ್ ಮಾಲ್ಟ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ

2) 750 ಎಂ.ಎಲ್.ನ 26 ಸೀಸೆಗಳಲ್ಲಿ ಹನೀ ಮಾಸ್ಟರ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ (ಮೇಲಿನ ಎಲ್ಲಾ ಮದ್ಯದ ಬಾಟಲಿಗಳಿಂದ ತಲಾ 180 ಎಂಎಲ್‌ನಂತೆ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

3) ಸರ್ಕಾರಕ್ಕೆ ಶುಲ್ಕ ಪಾವತಿಸಿದ ಅಸಲಿ ಮದ್ಯ 440.340 ಲೀ ಮತ್ತು 144.890 ಲೀ ಬಿಯರ್ (ವಿವರ ಅನುಬಂಧ–1ರಲ್ಲಿ ತೋರಿಸಲಾಗಿದೆ)

ಸನ್ನದುದಾರರು ಸನ್ನದು ಆವರಣದಲ್ಲಿ ಅಸಲಿ ಮದ್ಯದೊಂದಿಗೆ ನಕಲಿ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿ ಗ್ರಾಹಕರಿಗೆ ವಂಚಿಸಿ ಅವರ ಅರೋಗ್ಯ ಹಾಗೂ ಜೀವ ಹಾನಿ ಮಾಡುವಂತಹ ಅಪರಾಧ ಎಸಗಿರುವುದರಿಂದ ಪ್ರಕರಣದ ತನಿಖೆ ಕಾರ್ಯ ಮತ್ತು ಸನ್ನದು ರದ್ದುಪಡಿಸುವ ಕ್ರಮವನ್ನು ಕಾಯ್ದಿರಿಸಿ ಸನ್ನದುದಾರರ ಸಿಎಲ್–9 ಸನ್ನದನ್ನು ಜಿಲ್ಲಾಧಿಕಾರಿಗಳು ಹಾಗೂ ಸನ್ನದು ಮಂಜೂರಾತಿ ಪ್ರಾಧಿಕಾರಿ ,ದ.ಕ ಜಿಲ್ಲೆ ಮಂಗಳೂರು ಇವರ ಅದೇಶ ಸಂ: ಎಸ್‌ಡಿಕೆ:213:ಡಿಟಿಸಿಆರ್: 2007–08 ದಿ:31–12–2007ರ ಅದೇಶದಲ್ಲಿ 15 ದಿನಗಳ ಅವಧಿಗೆ ಅಮಾನತ್ತುಗೊಳಿಸಿ, ನಂತರದಲ್ಲಿ ದಿನಾಂಕ:14–1–2008ರ ಅದೇಶದಲ್ಲಿ ಸನ್ನದ್ದನ್ನು ಸರ್ಕಾರದ ರಾಜಸ್ವದ ಹಿತದೃಷ್ಟಿಯಿಂದ ದಿ:16–1–2008 ರಿಂದ ಅನ್ವಯವಾಗುವಂತೆ ವ್ಯವಹಾರಕ್ಕೆ ತೆರವುಗೊಳಿಸಿ ಅದೇಶಿಸಲಾಗಿರುತ್ತದೆ.

ಸನ್ನದುದಾರರಾದ ಶ್ರೀ.ಮಾಧವ.ಕೆ ಇವರು ದಿ:1–3–2008ರಂದು ಪ್ರಾಧಿಕಾರಕ್ಕೆ ಅರ್ಜಿಯೊಂದನ್ನು ಸಲ್ಲಿಸಿ ಜಪ್ತುಪಡಿಸಿಕೊಳ್ಳಲಾದ ತೆರಿಗೆ ಪಾವತಿಸಿದ ಮದ್ಯ ಮತ್ತು ಬಿಯರನ್ನು ತಮಗೆ ಮದ್ಯಂತರ ಬಿಡುಗಡೆ ಮಾಡಿಕೊಡಬೇಕಾಗಿ ಹಾಗೂ ಈ ಬಗ್ಗೆ ಪ್ರಾಧಿಕಾರದಿಂದ ನಿಗಧಿಪಡಿಸಿದ ಬ್ಯಾಂಕ್ ಗ್ಯಾರಂಟಿಯನ್ನು ನೀಡಲು ತಾನು ಬದ್ದನಾಗಿರುವುದಾಗಿ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಅದರಂತೆ ಜಪ್ತುಪಡಿಸಿಕೊಳ್ಳಲಾದ ಮದ್ಯ , ಬಿಯರಿನ ಮೌಲ್ಯ ಮಾಪನವನ್ನು ಕೆ.ಎಸ್.ಬಿ.ಸಿ.ಎಲ್ ಪುತ್ತೂರು ಘಟಕದಿಂದ ತನಿಖಾಧಿಕಾರಿಗಳ ಮುಖಾಂತರ ಪಡೆದುಕೊಂಡು ಮೌಲ್ಯ ರೂ.79,550/– ಮೊತ್ತಕ್ಕೆ ಬ್ಯಾಂಕ್ ಗ್ಯಾರೆಂಟಿಯನ್ನು ಒದಗಿಸುವ ಹಾಗೂ ಇತರೆ ಷರತ್ತು ಗಳ ಮೇರಗೆ ಜಪ್ತುಪಡಿಸಿಕೊಳ್ಳಲಾದ 440. 340 ಲೀ ಮದ್ಯ ಹಾಗೂ 144.890 ಬಿಯರ್ ಲೀಟರು ಇವುಗಳನ್ನು ಅಂದಿನ ಅದಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ ಜಿಲ್ಲೆ ಮಂಗಳೂರು ಇವರ ಅದೇಶ ಸಂ: ಎಂಎನ್‌ಜಿ: ಇಐಬಿ: ಡಿಟಿಸಿಆರ್: 220:2007–08, ದಿ:29–3–2008ರಲ್ಲಿ ಮದ್ಯಂತರ ಬಿಡುಗಡೆಗೊಳಿಸಿ ಅದೇಶಿಸಲಾಗಿರುತ್ತದೆ. ಆದರೆ ಸನ್ನದು ದಾರರು ಷರತ್ತಿನಂತೆ ಬ್ಯಾಂಕ್ ಗ್ಯಾರೆಂಟಿಯನ್ನು ನೀಡಿ ಮದ್ಯ ಮತ್ತು ಬಿಯರನ್ನು ಮದ್ಯಂತರ ಸುಪರ್ಧಿಗೆ ಪಡೆದುಕೊಳ್ಳಲು ವಿಫಲರಾಗಿರುತ್ತಾರೆ.

ಪ್ರಕರಣದ ತನಿಖೆ ಮುಂದುವರಿಸಿರುವ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ದಿ: 5–6–2008–ರ ತನಿಖಾ ವರದಿಯೊಂದಿಗೆ ಮೊಕದ್ದಮೆಯಲ್ಲಿ ವಶಪಡಿಸಿ ಕೊಳ್ಳಲಾಗಿದ್ದ 750 ಎಂ.ಎಲ್.ನ 66 ಬಾಟಲ್ ನಕಲಿ ಮದ್ಯಗಳ ಮಾದರಿ ಸೀಸೆಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ದಿನಾಂಕ: 22–12–2007– ರಂದು ಮುಖ್ಯ ರಾಸಾಯನಿಕ ತಜ್ಞರು ಮತ್ತು ಕರ್ನಾಟಕ ಸರಕಾರದ ಪದನಿಮಿತ್ತ ಸಹಾಯಕ ರಾಸಾಯನ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ ಅಬಕಾರಿ ಇಲಾಖೆ, ಬೆಂಗಳೂರು ಇವರಿಂದ ಪಡೆಯಲಾದ ವಿಶ್ಲೇಷಣಾ ವರದಿ ಸಂ: ಸಿಸಿಎಲ್–4973/2007ನ್ನು ಪ್ರಾಧಿಕಾರಕ್ಕೆ ಒಪ್ಪಿಸಿರುತ್ತಾರೆ. ಸದರಿ ರಾಸಾಯನಿಕ ವಿಶ್ಲೇಷಣಾ ವರದಿ ಪ್ರಕಾರ ಜಪ್ತು ಮಾಡಲಾಗಿರುವ 750 ಎಂ.ಎಲ್‌ನ 66 ಬಾಟಲಿಗಳ ಪೈಕಿ 40 ನಕಲಿ ನಾದನ್ ಮಾಲ್ಟ್ ವಿಸ್ಕಿಯ ಬಾಟಲಿಗಳಲ್ಲಿ 25.2 ಡಿಗ್ರಿ ಯು.ಪಿ ಇದ್ದು, ಇದು ಮಾನವನ ಸೇವನೆಗೆ ಯೋಗ್ಯವಾಗಿರುವುದಾಗಿ ಹಾಗೂ 26 ಹನೀ ಮಾಸ್ಟರ್ ವಿಸ್ಕಿಯ ಬಾಟಲಿಗಳಲ್ಲಿ 35.6 ಡಿಗ್ರಿ ಯು.ಪಿ ಇದ್ದು ,ಬಾರತ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿರುದಿಲ್ಲವಾದ್ದರಿಂದ ಇದು ನಕಲಿ ಮದ್ಯವಾಗಿರುತ್ತದೆ ಎಂದು ದೃಢ ಪತ್ರದೊಂದಿಗೆ ವರದಿ ಒಪ್ಪಿಸಿರುತ್ತಾರೆ. ಆದುದರಿಂದ ಸನ್ನದುದಾರರು ನಕಲಿ ಮದ್ಯವನ್ನು ಸನ್ನದು ಆವರಣದಲ್ಲಿದ್ದ ಅಸಲಿ ಮದ್ಯದೊಂದಿಗೆ ಪಾನೀಕರಿಗೆ ಮಾರಾಟ ಮಾಡಲು ಯತ್ನಿಸಿರುವುದರಿಂದ ಸನ್ನದುದಾರರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ಸನ್ನದುದಾರರು ತನ್ನ ಸನ್ನದಿನ ವ್ಯವಹಾರದಲ್ಲಿ ಅಸಲಿ ಮದ್ಯದೊಂದಿಗೆ ನಕಲಿ ಮದ್ಯ ಸಂಗ್ರಹಣೆ ಹಾಗೂ ವಿತರಣೆಗೆ ಅಸ್ಪದ ನೀಡಿರುವುದು ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಭೀತಾಗಿರುವುದರಿಂದ, ಸದರಿ ಪ್ರಕರಣಕ್ಕೆ ಸಂಬಂಧಿಸಿ ಸಾಕ್ಷಿದಾರರನ್ನು ಹಾಗೂ ದಾಖಲೆಗಳನ್ನು ಅವಲಂಬಿಸಿ, ದಿನಾಂಕ: 29–5–2009– ರಂದು ಬಲಿ.ಮಾಧವ ಕೆ, ಸಿಎಲ್–9 ಸನ್ನದುದಾರರು, ಬಿನ್: ದಿ:ಅತ್ತಾರ್ ಬೆಳ್ಚಡ, ಕನ್ಯಾನ ಮನೆ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಕಾಲಂ 43(ಬಿ) ರೀತ್ಯಾ ಕಾರಣ ಕೇಳಿ ನೊಟೀಸ್‌ನ್ನು ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೊಟೀಸಿಗೆ ಸಂಬಂಧಿಸಿದಂತೆ ಶ್ರೀ.ಮಾಧವ ಕೆ ಇವರು ಈ ಕಛೇರಿಗೆ ದಿ: 5–6–2009–ರಂದು ಲಿಖಿತ ಉತ್ತರವನ್ನು ಸಲ್ಲಿಸಿ, ತನ್ನ ವಿರುದ್ದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಸದ್ರಿ ನಕಲಿಯೆಂದು ಹೇಳಲಾದ ಮದ್ಯಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ. ಮತ್ತು ನಕಲಿ ಮದ್ಯವನ್ನು ನಾನು ಯಾವತ್ತೂ ಸಂಗ್ರಹಿಸಿ ಟ್ಟಿರುವುದಿಲ್ಲ. ನನ್ನ ಪರಿಸರದಲ್ಲಿ ನನ್ನ ಮೇಲೆ ವೈಯಕ್ತಿಕ ದ್ವೇಷದಿಂದ ನಕಲಿ ಮದ್ಯವನ್ನು ನನ್ನ ತಿಳುವಳಿಕೆಗೆ ಬಾರದಂತೆ ನನ್ನ ಅಂಗಡಿಯ ಕಂಪೌಂಡಿನ ಗೇಟಿನ ಹತ್ತಿರ ಇಟ್ಟು, ನನ್ನ ಮೇಲೆ ಸುಳ್ಳು ಕೇಸು ಹಾಕಿರುತ್ತಾರೆ. ಸದ್ರಿ ನಕಲಿ ಎಂದು ಹೇಳಲಾಗಿರುವ ಮದ್ಯಕ್ಕೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲದಿರುವುದರಿಂದ ಅವುಗಳನ್ನು ಮುಟ್ಟುಗೋಲು ಹಾಕುವುದಕ್ಕೂ ನನ್ನದೇನು ಅಕ್ಷೇಪವಿರುವುದಿಲ್ಲ. ಸದ್ರಿ ಸಿಎಲ್–9 ಸನ್ನದಿನ ವಿರುದ್ದ ದಾಖಲಿಸಿದ ಮೊಕದ್ದಮೆಯನ್ನು ಇಲಾಖಾ ಮೂಲಕ ಇತ್ಯರ್ಥಪಡಿಸಬೇಕೆಂದು ಹಾಗೂ ತನ್ನ ವಿರುದ್ದ ಕಾರಣ ಕೇಳಿ ನೋಟಿಸಿನಲ್ಲಿ ಉಲ್ಲೇಖಿಸಿದಂತೆ ಕಾನೂನು ಕ್ರಮವನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

ಪ್ರಕರಣ ಸಂದರ್ಭದಲ್ಲಿ ಜಪ್ತುಪಡಿಸಿಕೊಳ್ಳಲಾದ ನಕಲಿ ಮದ್ಯದ ಮಾದರಿಗಳು ಅಧಿಕೃತ ಡಿಸ್ಟಿಲರಿಯಲ್ಲಿ ತಯಾರಾದ ವಿವಿಧ ಬ್ರಾಂಡ್‌ಗಳಲ್ಲಿರುವ ಮದ್ಯಸಾರದ ಅಂಶಕ್ಕೆ ಹೋಲಿಕೆಯಾಗುವುದಿಲ್ಲ ಹಾಗೂ ಸನ್ನದುದಾರರು ನಕಲಿ ಮದ್ಯವನ್ನು ಅಸಲಿ ಮದ್ಯ ದೊಂದಿಗೆ ಕಲಬೆರಕೆ ಮಾಡಿ ಗ್ರಾಹಕರ ಅರೋಗ್ಯಕ್ಕೆ ಹಾಗೂ ಜೀವಕ್ಕೆ ಹಾನಿ ಮಾಡುವಂತಹ ಪ್ರಮಾದ ಎಸಗಿರುವುದರಿಂದ ಹಾಗೂ ಸನ್ನದುದಾರರು ಅಸಲಿ ಮದ್ಯ ಹಾಗೂ ಬಿಯರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸುವರೇ ಯಾವುದೇ ಅಭ್ಯಂತರವಿಲ್ಲ ವೆಂದು ಕಾರಣ ಕೇಳಿ ನೋಟಿಸಿಗೆ ಉತ್ತರ ನೀಡಿರುವುದರಿಂದ ಹಾಗೂ ಮದ್ಯ ಮತ್ತು ಬಿಯರನ್ನು ಜಪ್ತುಪಡಿಸಿಕೊಂಡು ಈಗಾಗಲೇ 2ವರ್ಷಗಳು ಕಳೆದಿರುವುದರಿಂದ ಸದ್ರಿ ಮದ್ಯವು ಗುಣಲಕ್ಷಣವನ್ನು ಕಳೆದುಕೊಂಡು ಯಾವುದೇ ಮಾನವ ಸೇವನೆಗೆ ಯೋಗ್ಯವಾಗದೇ ಇರುವುದರಿಂದ ಸನ್ನದು ಆವರಣದಿಂದ ಜಪ್ತುಪಡಿಸಿ ಕೊಳ್ಳಲಾದ ಎಲ್ಲಾ ನಕಲಿ ಹಾಗೂ ಅಸಲಿ ಮದ್ಯ ಮತ್ತು ಬಿಯರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ತನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು , ಬಂಟ್ವಾಳ ವಲಯ ರವರು ದಿನಾಂಕ:29–8–2009ರಂದು ಈ ಪ್ರಾಧಿಕಾರಕ್ಕೆ ಒಪ್ಪಿಸಿದ ಎರಡನೇ ತನಿಖಾ ವರದಿ ಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ನಂತರ ಪ್ರಕರಣದ ಮುಟ್ಟುಗೋಲು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆಯನ್ನು ಪ್ರಾಧಿಕಾರದಲ್ಲಿ ಪ್ರಾರಂಭಿಸಿ ಅಭಿಯೋಗದ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಸಿ. ಹೆಚ್. ಸೋಮಶೇಖರ,ಅ.ನಿ. ಹಾಲಿ ಪುತ್ತೂರು ಉಪ ವಿಭಾಗ, ಪುತ್ತೂರು , ತನಿಖಾಧಿಕಾರಿಗಳಾದ ಶ್ರೀ.ಕಮಲಾಕ್ಷ ಬಲ್ಯಾಯ, ಅ.ನಿ, ಬಂಟ್ವಾಳ ವಲಯ ಮತ್ತು ಶ್ರೀ.ಹರೀಶ್ ಎನ್, ಅಬಕಾರಿ ರಕ್ಷಕರು, ಬಂಟ್ವಾಳ ವಲಯ ಹಾಗೂ ರಕ್ಷಣಾ ಪರ ಸಾಕ್ಷಿದಾರರಾದ ಶ್ರೀ.ಮಾಧವ ಕೆ, ಸಿಎಲ್–9 ಸನ್ನದು ದಾರರು, ಶಿವಶಕ್ತಿ ಬಾರ್, ಕನ್ಯಾನ ,ಬಂಟ್ವಾಳ ಇವರುಗಳ ವಿಚಾರಣೆಯನ್ನು ನಡೆಸಲಾಗಿರುತ್ತದೆ.

ಪ್ರಕರಣದ ವಿಚಾರಣೆಯನ್ನು ಆರಂಭಿಸಿ ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **<u>ಮೊದಲನೇ ವಿವಾದಾಂಶ:</u>** ದಿ: 12–12–2007–ರಂದು ಶ್ರೀ.ಮಾಧವ .ಕೆ, ಸಿಎಲ್–9 ಸನ್ನದುದಾರರು ಇವರ ಮಾಲೀಕತ್ವದ ಸನ್ನದು ಸಂ:ಎಸ್‌ಡಿಕೆ:ಐಎಂಎಲ್ :12: ಬಿಎನ್‌ಟಿ: ಸಿಎಲ್–9:07–08 ದಿ:30–6–2007ರ ಸನ್ನದು ಆವರಣದಲ್ಲಿ ನಕಲಿ ಮದ್ಯವನ್ನು ದಾಸ್ತಾನು ಇರಿಸಿಕೊಂಡು ಮಾರಾಟ ಮಾಡಲಾಗಿದೆಯೇ?

2) **<u>ಎರಡನೇ ವಿವಾದಾಂಶ:</u>** ಸದರಿ ನಕಲಿ ಮದ್ಯ ಮಾರಾಟವು ಸನ್ನದುದಾರರ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆಯೇ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿ ಮತ್ತು ಸನ್ನದುದಾರರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **<u>ಮೂರನೇ ವಿವಾದಾಂಶ:</u>** ಜಪ್ತುಪಡಿಸಲಾದ 49–.500 ಲೀ ನಕಲಿ ಮದ್ಯ ಮಾನವ ಸೇವನೆಗೆ ಯೋಗ್ಯವಾಗಿಲ್ಲ ಎಂದು ದೃಡೀಕೃತವಾಗಿದೆಯೇ? ಹಾಗೂ ಅಸಲಿ 440–340 ಲೀ. ಮದ್ಯ ಹಾಗೂ 144–890 ಲೀ ಬಿಯರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಸಕರಾತ್ಮಕವಾಗಿ ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

<u>ಪ್ರಾ.ಸ–1:–</u>

ಶ್ರೀ.ಸಿ.ಹೆಚ್.ಸೋಮಶೇಖರ, ಅಂದಿನ ಅಬಕಾರಿ ನಿರೀಕ್ಷಕರು,ಬಂಟ್ವಾಳ ವಲಯ (ಹಾಲಿ ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ,ಪುತ್ತೂರು)ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು, ದಿ:7–9–2010ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡುತ್ತಾ ಪಂಚರ ಸಮಕ್ಷಮ ಪ್ರಕರಣ ಪತ್ತೆ ಹಚ್ಚಿ ಸನ್ನದು ಆವರಣದಲ್ಲಿ ಅಸಲಿ ಮದ್ಯ ಮತ್ತು ಬಿಯರಿನ ಜೊತೆಯಲ್ಲಿ 750 ಎಂಎಲ್ ಗಾತ್ರದ 66 ಬಾಟಲಿಗಳಲ್ಲಿ ಗೋವಾ ರಾಜ್ಯದಲ್ಲಿ ನಿರ್ಮಿತವಾದ ಮದ್ಯವನ್ನು ಪತ್ತೆಹಚ್ಚಿ ಮಹಜರು ಕ್ರಮ ಜರುಗಿಸಿ ಅಬಕಾರಿ ಕಾಯಿದೆ ಕಲಂ 11,12, 13,14 r/w 32,34,35,36 ಮತ್ತು 43 ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ನಂತರ ತನಿಖೆ ಕೈಗೊಂಡು ರಾಸಾಯನಿಕ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅರೋಪಿಗಳ ವಿರುದ್ದ ಜೆ.ಎಂ.ಎಫ್ ಸಿ ಬಂಟ್ವಾಳ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುವ ಬಗ್ಗೆ ಸಾಕ್ಷಿ ನೀಡಿ ಪ್ರಮುಖ ದಾಖಲೆಗಳನ್ನು ನಿ.ಪಿ.1ರಿಂದ ನಿ.ಪಿ–5 ವರೆಗೆ ಗುರುತಿಸಿರುತ್ತಾರೆ.

<u>ಪಾಟೀ ಸವಾಲು:–</u> ರಕ್ಷಣಾ ಪರ ವಕೀಲರು ಪ್ರಾ.ಸಾ–1ರವರನ್ನು ದಿ:7–9–2010ರಂದು ಪಾಟೀ ಸವಾಲು ನಡೆಸಿರುತ್ತಾರೆ.

<u>ಪ್ರಾ.ಸ–2:–</u>

ಶ್ರೀ .ಹರೀಶ್ ಎನ್,ಅಬಕಾರಿ ರಕ್ಷಕ, ಬಂಟ್ವಾಳ ವಲಯ ಇವರು ದಿ:28–9–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡಿತ್ತಾ, ಪ್ರಾಸಾ –1ರವರ ಜೊತೆ ಶ್ರೀ.ಕೆ. ಮಾಧವ ಇವರು ಹೊಂದಿರುವ ' ಸನ್ನದು ಆವರಣಕ್ಕೆ ತಪಾಸಣೆಗೆ ಹೋದ ಸಂದರ್ಭದಲ್ಲಿ ಸನ್ನದು ಅವರಣದೊಳಗಡೆ ಅಸಲಿ ಮದ್ಯ ಮತ್ತು ಬಿಯರಿನ ಜೊತೆ ಗೋವಾ ನಿರ್ಮಿತ ನಕಲಿ ಮದ್ಯ ಪತ್ತೆಯಾಗಿರುವ ಬಗ್ಗೆ ಹೇಳಿಕೆಗಳನ್ನು ನೀಡಿ ಪ್ರಾ.ಸಾ–1ರವರಿಂದ ಗುರುತಿಸಲಾದ ಮಹಜರು ಪ್ರತಿಯನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ–1 ಬಿ ಎಂದು ಗುರುತಿಸಿರುತ್ತಾರೆ. ಸಾಕ್ಷಿದಾರರನ್ನು ರಕ್ಷಣಾ ಪರ ವಕೀಲರು ಪಾಟೀ ಸವಾಲು ನಡೆಸಿರುತ್ತಾರೆ.

ಪ್ರಾ.ಸ–3:–

ಶ್ರೀ ಕಮಲಾಕ್ಷ ಬಲ್ಯಾಯ, ಅ.ನಿ ಬಂಟ್ವಾಳ ವಲಯ ಇವರು ಪ್ರಕರಣದ ತನಿಖಾದಿಕಾರಿಯಾಗಿದ್ದು, ದಿ:19–10–2010ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡುತ್ತಾ, ಮೊಕದ್ದಮೆಗೆ ಸಂಬಂಧಿಸಿದ ದಾಖಲಾತಿ ಸೊತ್ತುಗಳನ್ನುಪ್ರಾ.ಸಾ–1 ರವರಿಂದ ಪಡೆದುಕೊಂಡ ಬಗ್ಗೆ ಹಾಗೂ ಪ್ರಕರಣದಲ್ಲಿ ವಶಪಡಿಸಿದ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಮಾನ್ಯ ಅಧಿಕೃತ ಅಧಿಕಾರಿಗಳಿಗೆ ದಿ:29–8–2009ರಂದು ವರದಿ ಮಾಡಿರುವ ಬಗ್ಗೆ ಸಾಕ್ಷಿ ನೀಡಿ , ಸದ್ರಿ ವರದಿಯನ್ನು ನಿಶಾನೆ ಪಿ–6 ಎಂದು, ಅದರಲ್ಲಿರುವ ಸಹಿಯನ್ನು ನಿಶಾನೆ ಪಿ–6 ಎ ಎಂದು ಗುರುತಿಸಿರುತ್ತಾರೆ. ಹಾಗೂ ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಡಿಡಬ್ಲ್ಯೂ–1:–

ಶ್ರೀ.ಮಾಧವ ಕೆ. ಸಿಎಲ್–9 ಸನ್ನದುದಾರರು ಶಿವಶಕ್ತಿ ಬಾರ್ ,ಕನ್ಯಾನ ಇವರು ದಿ:21–4–2011ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನುಡಿಯುತ್ತಾ, ತಾನು ಸಿಎಲ್–9 ಸನ್ನದುದಾರರನಾಗಿ ಕಳೆದ 11 ವರ್ಷಗಳಿಂದ ಶಿವಶಕ್ತಿ ಎಂಬ ಹೆಸರಿನಲ್ಲಿ ಕನ್ಯಾನ ಉಪ್ಪಳ ರಸ್ತೆಯಲ್ಲಿ ಕನ್ಯಾನ ಎಂಬ ಸ್ಥಳದಲ್ಲಿ ಅಂಗಡಿ ನಡೆಸಿಕೊಂಡು ಬರುತ್ತಿದ್ದೇನೆ. ಈ ಪ್ರಕರಣ ಅಲ್ಲದೇ ನನ್ನ ಮೇಲೆ ಹೇಳಿದ ಅಂಗಡಿ ವಿರುದ್ದ ಅಥವಾ ನನ್ನ ವಿರುದ್ದ ಬೇರೆ ಯಾವುದೇ ಕ್ರಿಮಿನಲ್ ಪ್ರಕರಣ ಇರುವುದಿಲ್ಲ. ದಿ:12–12–2007ರಂದು ರಾತ್ರಿ 9 ಗಂಟೆಗೆ ಅಬಕಾರಿ ಇಲಾಖೆಯ ಅಧಿಕಾರಿಗಳು ಸನ್ನದು ಅಂಗಡಿಗೆ ತಪಾಸಣೆ ಗೆ ಬಂದಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಅಂಗಡಿಯಲ್ಲಿ ತೆರಿಗೆ ಪಾವತಿಸದ ಮದ್ಯದ ಶೇಖರಣೆ ಇರಲಿಲ್ಲ. ಅದರೆ ಸರ್ಕಾರಕ್ಕೆ ತೆರಿಗೆ ಪಾವತಿಸಿದ ಮದ್ಯದ ಶೇಖರಣೆ ಮಾತ್ರ ಇತ್ತು. ಅಬಕಾರಿ ಇಲಾಖೆಯವರು ನನ್ನ ಮೇಲೆ ಅರೋಪಿಸಿದಂತೆ ಆ ದಿವಸ ನನ್ನ ಅಂಗಡಿಯಿಂದ 69–500 ಲೀ ಅಕ್ರಮ ಮದ್ಯ ಸ್ವಾಧೀನ ಪಡಿಸಿಲ್ಲ. ಅಬಕಾರಿ ಇಲಾಖೆಯವರು ಅರೋಪಿದಂತೆ ತನ್ನ ಅಂಗಡಿಯಲ್ಲಿದ್ದ ಕ್ಯಾಶ್ ಕೌಂಟರಿನ ಕೆಳಗೆ ಅಷ್ಟೊಂದು ಪ್ರಮಾಣದ ಮದ್ಯ ಶೇಖರಣೆ ಮಾಡಲು ಸ್ಥಳಾವಕಾಶ ಇದ್ದಿಲ್ಲ. ನನ್ನ ಮತ್ತು ನನ್ನ ತಮ್ಮಂದಿರ ನಡುವೆ ಜಾಗದ ತಕರಾರು ಇದ್ದು, ಆ ದ್ವೇಷದ ಮೇರೆಗೆ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ನನ್ನ ಸನ್ನದು ಆವರಣದಿಂದ ದಿ:12–12–2007ರಂದು ಅಮಾನತುಪಡಿಸಿದ 440–430 ಲೀ ಮದ್ಯ ಮತ್ತು 144–890 ಲೀ ಬೀರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳದೇ ನನಗೆ ಬಿಡುಗಡೆ ಮಾಡಬೇಕಾಗಿ ಪ್ರಾರ್ದಿಸುತ್ತಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದು ರಕ್ಷಣಾ ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು ಎಡಿಪಿರವರಿಂದ :–

ಸರ್ಕಾರಿ ಅಭಿಯೋಗ ಉಪ ನಿರ್ದೇಶಕರ ಪಾಟೀ ಸವಾಲಿಗೆ ಉತ್ತರಿಸುತ್ತಾ ದಿನಾಂಕ: 12–12–2007ರಂದು ಮೇಲೆ ಹೇಳಿದ ತನ್ನ ಸನ್ನದು ಅಂಗಡಿಗೆ ಅಬಕಾರಿ ಇಲಾಖೆಯವರು ದಾಳಿ ಮಾಡಿದಾಗ ತನ್ನ ಮಗ ಆಶ್ವಿನ್ ಅಂಗಡಿಯಲ್ಲಿ ಹಾಜರಿದ್ದ .ಈ ಪ್ರಕರಣದಲ್ಲಿ ಪ್ರಾಸ.–1 ಮತ್ತು 2ರವರ ಪರಿಚಯ ತನಗೆ ಬಹಳ ವರ್ಷಗಳಿಂದ ಇರುತ್ತದೆ. ಆದರೆ ಅವರಿಗೆ ತನ್ನ ಮೇಲೆ ಯಾವುದೇ ವೈಯಕ್ತಿಕ ದ್ವೇಷ ಇರುವುದಿಲ್ಲ. ತನ್ನ ತಮ್ಮಂದಿರ ಚಿತಾವಣೆ ಮೇರೆಗೆ ಅಬಕಾರಿ ಇಲಾಖೆಯವರು ತನ್ನ ಮೇಲೆ ಸುಳ್ಳು ಕೇಸರು ಹಾಕಿದ್ದರು ಎಂಬ ಮಾಹಿತಿಯನ್ನು ತಾನು ಅಬಕಾರಿ ಇಲಾಖೆ ಮೇಲಾಧಿಕಾರಿಗಳಿಗಾಗಲೀ ಹಾಗೂ ವಕೀಲರಾಗಲೀ ನಾನು ಈವರೆಗೆ ನೀಡಿಲ್ಲ. ತಾನು ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟ ಮಾಡಲು ಯೋಗ್ಯವಾದ ಮದ್ಯದ ಬಾಟಲಿಗಳನ್ನು ಸನ್ನದು ಆವರಣದಲ್ಲಿಟ್ಟು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧ ಮಾಡಿರುತ್ತೇನೆಂದರೆ ಸರಿ ಅಲ್ಲ, ಅಬಕಾರಿ ಇಲಾಖೆಯವರು ತನ್ನ ಸನ್ನದಿನಂಗಡಿಗೆ ದಾಳಿ ಮಾಡಿ ನಿ.ಪಿ–1 ರಂತೆ ಒಂದು ವಿವರವಾದ ಮಹಜರು ಬರೆದು ಮೇಲೆ ಹೇಳಿದ ಅಕ್ರಮ ಮದ್ಯದ ಬಾಟಲಿಗಳನ್ನು ಅಮಾನತು ಪಡಿಸಿದರು ಅಂದರೆ ಸರಿಯಲ್ಲ ,ತಾನು ಈ ಪ್ರಕರಣದಲ್ಲಿ ಮುಖ್ಯ ವಿಚಾರನೆಯಲ್ಲಿ ಯಾವುದೇ ಅಪರಾಧ ಮಾಡಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ– 1 ,2 ಮತ್ತು 3 ಹಾಗೂ ರಕ್ಷಣಾ ಪರ ಸಾಕ್ಷಿದಾರರಾದ ಡಿಡಬ್ಲ್ಯೂ–1ರ ಸಾಕ್ಷಿ ವಿಚಾರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಿ ಅಭಿಯೋಜಕರ ಹಾಗೂ ರಕ್ಷಣಾ ಪರ ವಕೀಲರ ವಾದ ವಿವಾದವನ್ನು ಅಲಿಸಿ ಪ್ರಕರಣವನ್ನು ಅಂತಿಮ ಅದೇಶ ಹೊರಡಿಸುವುದು ಸೂಕ್ತವೆಂದು ಪರಿಗಣಿಸಲಾಯಿತು.

ಆರೋಪಿತರಾದ ಶ್ರೀ.ಕೆ.ಮಾಧವ ಗೌಡ, ಸಿಎಲ್–9 ಸನ್ನದುದಾರರು ಸನ್ನದು ಆವರಣದಲ್ಲಿ ಗ್ರಾಹಕರಿಗೆ ರಹದಾರಿ ಮೂಲಕ ಪಡೆದ ಗುಣಮಟ್ಟದ ಮದ್ಯವನ್ನು ಮಾರಾಟ ಮಾಡುವುದು ಅವರ ಬದ್ದತೆಯಾಗಿದ್ದು, ಆದರೆ ಅವರಿಗೆ ನೀಡಿದ ಸನ್ನದನ್ನು ದುರ್ಬಳಕೆ ಮಾಡಿಕೊಂಡು ಗ್ರಾಹಕರಿಗೆ ಇಂತಹ ನಕಲಿ ಮದ್ಯವನ್ನು ಸಂಗ್ರಹಿಸಿಕೊಂಡು, ಅಸಲಿ ಮದ್ಯದ ಜೊತೆಗೆ ಮಾರಾಟ ಮಾಡುವ ಉದ್ದೇಶ ಹೊಂದಿದ್ದು ಗ್ರಾಹಕರಿಗೆ ವಂಚಿಸಿ, ಅವರ ಆರೋಗ್ಯಕ್ಕೆ ಹಾಗೂ ಜೀವಕ್ಕೆ ಹಾನಿ ಮಾಡುವಂತಹ ಕೃತ್ಯ ಎಸಗಿರುವುದು ಅಲ್ಲದೇ ಸರ್ಕಾರದ ಅದಾಯಕ್ಕೆ ನಷ್ಟ ಉಂಟುಮಾಡಿರುವುದು ದಾಖಲಿಸಿರುವ ಪ್ರಕರಣದ ದಾಖಲೆಗಳಿಂದ ಸಾಭೀತಾಗಿರುತ್ತದೆ

ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಎ ಅಡಿ ಸನ್ನದುದಾರರು ಅಸಲಿ ಅಧಿಕೃತ ಮದ್ಯದೊಂದಿಗೆ ತೆರಿಗೆ ರಹಿತ ಮದ್ಯ ಹಾಗೂ ನಕಲಿ ಮದ್ಯವನ್ನು ಹೊಂದಿದ್ದ ಸಂದರ್ಭದಲ್ಲಿ ನಕಲಿ ಹಾಗೂ ತೆರಿಗೆ ರಹಿತ ಮದ್ಯದೊಂದಿಗೆ ಅಸಲಿ ಹಾಗೂ ರಹದಾರಿ ಗೊಳ್ಳಪಟ್ಟ ಮದ್ಯವನ್ನು ಸನ್ನದು ಆವರಣದಲ್ಲಿ ಶೇಖರಿಸಿದ್ದು, ಸದ್ರಿ ಎಲ್ಲಾ ಮದ್ಯವನ್ನು ಸರ್ಕಾರಕ್ಕೆ ವಶಪಡಿಸಿಕೊಂಡು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸನ್ನದುದಾರರು ತನ್ನ ಸನ್ನದಿನ ವ್ಯವಹಾರದಲ್ಲಿ ಅಸಲಿ ಮದ್ಯದೊಂದಿಗೆ ನಕಲಿ ಮದ್ಯ ಸಂಗ್ರಹಣೆ ಮಾಡಿ ಹಾಗೂ ಗ್ರಾಹಕರಿಗೆ ವಿತರಣೆಗೆ ಅಸ್ಪದ ನೀಡಿರುವುದು ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಭೀತಾಗಿರುವುದರಿಂದ ಹಾಗೂ ಜಪ್ತುಪಡಿಸಿಕೊಂಡ ಮದ್ಯವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಎ ರೀತ್ಯಾ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದಾಗಿ ಸನ್ನದುದಾರರಾದ ಶ್ರೀ.ಕೆ.ಮಾಧವ ಸಿಎಲ್–9 ಸನ್ನದುದಾರರು, ಶಿವಶಕ್ತಿ ಬಾರ್, ಕನ್ಯಾನ, ಬಂಟ್ವಾಳ ಇವರಿಗೆ ದಿ:29–5–2009ರಂದು ನೀಡಲಾದ ಕಾರಣ ಕೇಳಿ ನೋಟಿಸಿಗೆ ಅವರು ನೀಡಿರುವ ಉತ್ತರ ಸಮಂಜಸವಾಗಿರುವುದಿಲ್ಲ.

ಸನ್ನದು ಆವರಣದಲ್ಲಿ ಅನಧಿಕೃತವಾಗಿ ದಾಸ್ತಾನು ಇದ್ದ ನಕಲಿ ಮದ್ಯವನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ವಿಶ್ಲೇಷಣಾ ವರದಿಯಲ್ಲಿ ಮಾದರಿಗಳ ಪೈಕಿ 40 ಬಾಟಲಿಗಳಲ್ಲಿ ಇದ್ದ ನಾದನ್ ಮಾಲ್ಟ್ ವಿಸ್ಕಿಯಲ್ಲಿ ಮದ್ಯಸಾರದ ಅಂಶ 25.2 ಡಿಗ್ರಿ ಯು.ಪಿ ಇದ್ದು,ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತದೆ ಎಂದು ಹಾಗೂ ಉಳಿದಂತೆ 26 ಬಾಟಲಿಗಳಲ್ಲಿದ್ದ ಹನೀ ಮಾಸ್ಟರ್ ವಿಸ್ಕಿ ಇದರಲ್ಲಿ ಮದ್ಯಸಾರದ ಅಂಶ 35.6 ಡಿಗ್ರಿ ಯು.ಪಿ ಇದ್ದು, ಬಾರತ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿಲ್ಲದೇ ಅವು ನಕಲಿ ಮದ್ಯವಾಗಿರುತ್ತದೆ ಎಂದು ಸ್ಪಷ್ಟ ಅಭಿಪ್ರಾಯ ನೀಡಿರುವುದರಿಂದ ಹಾಗೂ ಸನ್ನದುದಾರರು ಸನ್ನದು ಆವರಣದಲ್ಲಿ ಅಧಿಕೃತ ಗುಣ ಮಟ್ಟದ ರಹದಾರಿ ಮೂಲಕ ಪಡೆದ ಮದ್ಯ ಮಾರಾಟದ ಜೊತೆಗೆ ಅಧಿಕ ಲಾಭವನ್ನು ಪಡೆಯುವ ಉದ್ದೇಶದಿಂದ ಪಾನೀಕರ ಅರೋಗ್ಯಕ್ಕೆ ಮಾರಕವಾಗುವಂತಹ ಹಾಗೂ ಜೀವ ಹಾನಿಗೆ ಎಡೆಮಾಡಿ ಕೊಡುವಂತಹ ನಕಲಿ ಮದ್ಯವನ್ನು ಮಾರಾಟ ಮಾಡಿ ಸನ್ನದುದಾರರು ತನ್ನ ಸನ್ನದು ಸವಲತ್ತನ್ನು ದುರ್ಬಳಕೆ ಮಾಡಲು ಪ್ರಯತ್ನಿಸಿರುವುದು ಸಾಭೀತಾಗಿರುವ ಕಾರಣ ಸನ್ನದು ಆವರಣ ತಪಾಸಣಾ ದಿ:12–12–2007–ಲಂದು ಜಪ್ತು ಪಡಿಸಿದ ಅಧಿಕೃತ 440.340 ಲೀಟರ್ ಮದ್ಯ ಹಾಗೂ 144.890 ಲೀಟರ್ ಬೀರ್ (ಅನುಬಂಧ–1ರಲ್ಲಿ ನಮೂದಿಸಿದಂತೆ) ಹಾಗೂ ಅವರಣದಲ್ಲಿದ್ದ 49.500 ಲೀಟರು ಅಕ್ರಮ ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂ: ಎಫ್ ಡಿ:06:ಪಿಇಎಸ್:07 ದಿ:13–7–2007ರ ಕಲಂ 3ರಲ್ಲಿ Portable Liqour and Rectified Sprit (1) All confiscated Liquor in sealed bottles or in any other receptacles shall be destroyed ಎಂದು ಆದೇಶಿಸಿರುವುದನ್ನು ಪರಿಗಣಿಸಿ ಮೇಲಿನಂತೆ ಮೊಕದ್ದಮೆಯಲ್ಲಿ ಜಪ್ತು ಪಡಿಸಿಕೊಳ್ಳಲಾದ ಅನಧಿಕೃತ ಮದ್ಯ ಮತ್ತು ಸನ್ನದು ಆವರಣದಲ್ಲಿ ದಾಸ್ತಾನು ಇದ್ದ ಅಧಿಕೃತ ಮದ್ಯ ಹಾಗೂ ಬಿಯರನ್ನು ನಾಶಪಡಿಸಬಹುದಾಗಿದೆ. ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿ ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/ಡಿಟಿಸಿಆರ್/220/2007–08, ದಿನಾಂಕ: 04–08–2011.

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಎ) ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು,ಬಂಟ್ವಾಳ ವಲಯ ಇವರ ತಕ್ಷೀರು ಸಂಖ್ಯೆ:2/2007–08,ದಿ:12–12–2007ರಂದು ವಶಪಡಿಸಿಕೊಂಡ ಈ ಕೆಳಕಂಡ ಮದ್ಯವನ್ನು (ಮಾದರಿಗಳನ್ನು ಹೊರತುಪಡಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

I – ಅನಧಿಕೃತವಾಗಿ ಶೇಖರಿಸಿ ಇಡಲಾದ ನಕಲಿ ಮದ್ಯ

1) 750 ಎಂ.ಎಲ್.ನ 40 ಸೀಸೆಗಳಲ್ಲಿ ನಾದನ್ ಮಾಲ್ಟ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ

2) 750 ಎಂ.ಎಲ್.ನ 26 ಸೀಸೆಗಳಲ್ಲಿ ಹನೀ ಮಾಸ್ಟರ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ .

II. ಸನ್ನದು ಆವರಣದಲ್ಲಿ ಅಧಿಕೃತವಾಗಿ ಸರಬರಾಜು ಆಗಿ ಮಾರಾಟಕ್ಕೆ ಇಡಲಾದ 440.340 ಲೀಟರ್ ಮದ್ಯ ಹಾಗೂ 144.890 ಲೀಟರ್ ಬೀರ್ (ಮದ್ಯ ಮತ್ತು ಬೀಯರಿನ ವಿವರಗಳ ಪಟ್ಟಿ ಅನುಬಂಧ–1ರಲ್ಲಿ ನಮೂದಿಸಿದಂತೆ)

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯ/ಬಿಯರ್‌ನ್ನು ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ:13–7–2007 ರಂತೆ ಮಾರಾಟ ಮಾಡಲು ನಿಷೇದಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶ ಇರುವುದರಿಂದ, ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43(ಊ)3 ರ ಅನ್ವಯ ಅಬಕಾರಿ ಉಪ ಅಧೀಕ್ಷಕರು,ಬಂಟ್ವಾಳ ಉಪ ವಿಬಾಗ, ಬಂಟ್ವಾಳ ಇವಟ್ಟು ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ: 12–9–2005 ರ ಮಾರ್ಗ ಸೂಚಿಗಳನ್ನು ಅನುಸರಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಹಾಗೂ ಕಂದಾಯ ಅಧಿಕಾರಿಗಳು, ವ್ಯವಸ್ಥಾಪಕರು ಕೆ.ಎಸ್.ಬಿ.ಸಿ.ಎಲ್ ಪುತ್ತೂರು ಡಿಪೋ ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾದ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅವರ ಸಮಕ್ಷಮ ಮಹಜರು ಜರುಗಿಸಿ ಮದ್ಯ ಹಾಗೂ ಬಿಯರನ್ನು ನಾಶಪಡಿಸಲು ಆದೇಶಿಸಿದೆ. ಹಾಗೂ ಉಳಿದ ಖಾಲಿ ಸೀಸೆಗಳನ್ನು ಪ್ರಚಲಿತ ಹಳೆಯ ಖಾಲಿ ಸೀಸೆಗಳಿಗೆ ಲಭ್ಯವಾಗುವ ಗರಿಷ್ಠ ಮಾರುಕಟ್ಟೆ ಬೆಲೆಗೆ ಮಾರಾಟ ಮಾಡಿ ಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:04–08–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ –1 : ಶ್ರೀ.ಸಿ.ಹೆಚ್. ಸೋಮಶೇಖರ ,ಅಬಕಾರಿ ನಿರೀಕ್ಷಕರು ಪುತ್ತೂರು ಉಪ ವಿಭಾಗ,ಪುತ್ತೂರು
ಪ್ರಾ.ಸಾ –2 : ಶ್ರೀ.ಹರೀಶ್.ಎನ್ ,ಅ.ರ , ಬಂಟ್ವಾಳ ವಲಯ
ಪ್ರಾ.ಸಾ–3 : ಶ್ರೀ.ಕಮಲಾಕ್ಷ,ಅ.ನಿ,ಬಂಟ್ವಾಳ ವಲಯ

ಅನುಬಂಧ– II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–1 :– ಮಹಜರು ಪ್ರತಿ
ನಿಶಾನೆ ಪಿ–1ಎ :– ಅದರ ಮೇಲಿನ ಸಹಿ (ಪ್ರಾ.ಸಾ–1)
ನಿಶಾನೆ ಪಿ–1ಬಿ :– ಅದರ ಮೇಲಿನ ಸಹಿ (ಪ್ರಾ.ಸಾ–2)
ನಿಶಾನೆ ಪಿ–2 :– ಅನುಬಂಧ–1
ನಿಶಾನೆ ಪಿ–2ಎ :– ಅದರ ಮೇಲಿನ ಸಹಿ
ನಿಶಾನೆ ಪಿ–3 :– ಅನುಬಂಧ–2
ನಿಶಾನೆ ಪಿ–3ಎ :– ಅದರ ಮೇಲಿನ ಸಹಿ
ನಿಶಾನೆ ಪಿ–4 :– ಪ್ರಥಮ ವರ್ತಮಾನ ವರದಿ
ನಿಶಾನೆ ಪಿ–4ಎ :– ಅದರ ಮೇಲಿನ ಸಹಿ
ನಿಶಾನೆ ಪಿ–5 :– ರಾಸಾಯನಿಕ ವಿಶ್ಲೇಷಕರ ವರದಿ
ನಿಶಾನೆ ಪಿ–6 :– ತನಿಖಾ ವರದಿ ದಿ:29–8–2009
ನಿಶಾನೆ ಪಿ–6 ಎ :– ಅದರ ಮೇಲಿನ ಸಹಿ

ಅನುಬಂಧ– III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಡಿಡಬ್ಲ್ಯೂ–1 :– ಮಾಧವ ಕೆ, ಸಿಎಲ್–9 ಸನ್ನದುದಾರರು, ಶಿವಶಕ್ತಿ ಬಾರ್, ಕನ್ಯಾನ, ಬಂಟ್ವಾಳ.

ಅನುಬಂಧ– IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :–

–ಯಾವುದು ಇಲ್ಲ–

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ–1

ಕ್ರ. ಸಂ	ಸನ್ನದು ಆವರದಲ್ಲಿ ದಾಸ್ತಾನು ಇದ್ದ ಮದ್ಯ ದ ಹೆಸರು	ಮದ್ಯದ ಪ್ರಮಾಣ (ಬಾಟಲಿಗಳಲ್ಲಿ)			ಒಟ್ಟು ಲೀಟರು ಗಳಲ್ಲಿ
		750 ML	375 ML	180 ML	
1	ಮ್ಯಾಜಿಕ್ ವಿಸ್ಕಿ	12	–	15	11.700
2	ನಂ.1 ಹೈವೇ ವಿಸ್ಕಿ	–	–	356	64.080
3	ಮೈಸೂರು ಲ್ಯಾನ್ಸರ್ ವಿಸ್ಕಿ	28	8	49	32.820
4	ವಿಂಡ್ಸರ್ ವಿಸ್ಕಿ	–	5	117	22.935
5	ಪ್ರಸ್ಟೇಜ್ ವಿಸ್ಕಿ	–	23	109	28.245

ಕ್ರ. ಸಂ	ಸನ್ನದು ಆವರದಲ್ಲಿ ದಾಸ್ತಾನು ಇದ್ದ ಮದ್ಯ ದ ಹೆಸರು	ಮದ್ಯದ ಪ್ರಮಾಣ (ಬಾಟಲಿಗಳಲ್ಲಿ)			ಒಟ್ಟು ಲೀಟರು ಗಳಲ್ಲಿ
		750 ML	375 ML	180 ML	
6	ಓಲ್ಡ್ ಮಂಕ್ ತ್ರಿಬಲ್ ಎಕ್ಸ್ ರಂ	8	21	58	24.315
7	ಬೋನಿಸ್ ಸ್ಕಾಟ್ ವಿಸ್ಕಿ	18	–	124	35.820
8	ಸೂಪರ್ ಜಾಕ್ ವಿಸ್ಕಿ	–	–	48	8.640
9	ಸೂಪರ್ ಜಾಕ್ XXX ರಂ	–	15	40	12.825
10	ಸೂಪರ್ ಜಾಕ್ ಡ್ರೈ ಜಿನ್	11	–	90	24.450
11	ಗೋಲ್ಡ್ ಕಪ್ ವಿಸ್ಕಿ	10	18	260	61.050
12	ಕ್ಲಬ್ ಚಾಯ್ಸ್ ವಿಸ್ಕಿ	–	9	144	29.295
13	ಡಿ.ಎಸ್.ಪಿ ವಿಸ್ಕಿ	–	23	4	9.345
14	ಬ್ಯಾಗ್ ಪೈಪರ್ ವಿಸ್ಕಿ	–	16	6	7.080
15	ಬ್ಯಾಗ್ ಪೈಪರ್ ಸ್ಯಾಚೇಟ್	–	–	38	6.840
16	ಗ್ರೀನ್ ಲೇಬಲ್ ವಿಸ್ಕಿ	–	–	126	22.680
17	ಎಂ.ಜಿ.ಎಂ ವಡ್ಕ	–	–	9	1.620
18	ಕ್ಲಾಸಿಕ್ ವಿಸ್ಕಿ	–	–	10	1.800
19	ಒರಿಜಿನಲ್ ಚಾಯ್ಸ್ ವಿಸ್ಕಿ	1	–	–	0.750
20	ಗೋಲ್ಕಂಡ ರೂಬಿ ವೈನ್ಸ್	–	–	33	5.940
21	ಮೆಕ್ ಡೆವೆಲ್ ನಂ.1 ವಿಸ್ಕಿ	6	–	–	4.500
22	ಎಂ.ಜಿ.ಎಂ ಗ್ರಾಗರೀನ್ ವಡ್ಕ	1	–	102	19.110
23	ಜಿ.ಡಿ ವಿಸ್ಕಿ	6	–	–	4.500
24	ಒಟ್ಟು	101	138	1738	440.340

ಬಿಯರ್		650 ML	330 ML
1	ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್	72	47
2	ಲಂಡನ್ ಸೂಪರ್ ಸ್ಟ್ರಾಂಗ್	–	40
3	ನಾಕ್ ಔಟ್ ಸ್ಟ್ರಾಂಗ್ ಬೀರ್	91	4
4	ಕಿಂಗ್ ಫಿಶರ್ ಪ್ರಿಮಿಯಂ	–	27
		163	118
ಒಟ್ಟು		**144.890 ಲೀಟರು**	

ಬಿ.ವಿ. ಹೂವಪ್ಪಗೌಡ

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 918

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ, ಮಡಿಕೇರಿ ಇವರ ಕಾರ್ಯಾಲಯ.

ಕ್ರ.ಸಂ:ಡಿಆರ್‌ಐ:ಸಿಬ್ಬಂಧಿ:ಮಾ.ಹ.ಕಾ:2011–12 ದಿನಾಂಕ: 03–01–2012

ಅಧಿಸೂಚನೆ

ವಿಷಯ:– ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 4(1) (ಬಿ) ಅನುಸಾರ ಸಹಕಾರ ಸಂಘಗಳ ಉಪನಿಬಂಧಕರು: ಕೊಡಗು ಜಿಲ್ಲೆ ಮಡಿಕೇರಿ ಇವರ ಕಛೇರಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

ಭಾರತ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ 2005ರ (Central Act 22 of 2005) ಕಲಂ 5(1) 5(2) ಮತ್ತು 19(1)ರ ಪ್ರಕಾರ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಸಹಕಾರ ಇಲಾಖೆಗೆ ಸೇರಿದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಡಿಕೇರಿ. ಉಪವಿಭಾಗ, ಮಡಿಕೇರಿ. ಈ ಕಚೇರಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು, ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ **"ಸಾರ್ವಜನಿಕ ಮಾಹಿತಿ ಅಧಿಕಾರಿ"** ಮತ್ತು **"ಸಹಾಯಕ ಮಾಹಿತಿ ಅಧಿಕಾರಿ"** ಹಾಗೂ **"ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ"** ಈ ಕೆಳಕಾಣಿಸಿದ ಅಧಿಕಾರಿಗಳನ್ನು ನೇಮಿಸಲಾಗಿದೆ.

ಕಚೇರಿಯ ಹೆಸರು	**ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 19(1)ರಡಿಯಲ್ಲಿ ನೇಮಿಸಲಾದ ಮೇಲ್ಮನವಿ ಪ್ರಾಧಿಕಾರ**	**ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ**	**ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ**
ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ಕೊಡಗು ಜಿಲ್ಲೆ, ಮಡಿಕೇರಿ	ಶ್ರೀ ಬಿ.ಎಸ್ ಹರೀಶ್ ಸಹಕಾರ ಸಂಘಗಳ ಜಂಟಿನಿಬಂಧಕರು ಮೈಸೂರು ಪ್ರಾಂತ ಮೈಸೂರು	ಶ್ರೀ ಎಂ. ವೆಂಕಟಸ್ವಾಮಿ, ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ ಮಡಿಕೇರಿ	ಶ್ರೀ ಶ್ರೀಧರ. ಆರ್ ಅಧೀಕ್ಷಕರು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ
	ದೂರವಾಣಿ ನಂ: 0821–2520823	ದೂರವಾಣಿ ನಂ: 08272–228519	ದೂರವಾಣಿ ನಂ: 08272–228519
	email ID: jrcs-mysore-ka@nic.in	**email ID: drcs-kodagu-ka@nic.in**	**email ID: drcs-kodagu-ka@nic.in**

ಮಾಹಿತಿ ಹಕ್ಕು ಅಧಿನಿಮಯ 2005 ಸೆಕ್ಷನ್ 4(1) (ಬಿ) ಅನ್ವಯ

ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ, ಮಡಿಕೇರಿ. ಇವರಿಗೆ ಸಂಬಂಧಿಸಿದ ಮಾಹಿತಿ

ಅಧ್ಯಾಯ–1

ಕಲಂ 4(1) (ಬಿ) (1)

1. **ಕಚೇರಿ ವ್ಯವಸ್ಥೆಯ ಬಗ್ಗೆ ವಿವರಗಳು: ಕಾರ್ಯಗಳು ಮತ್ತು ಕರ್ತವ್ಯಗಳು:–.**

ಕೊಡಗು ಜಿಲ್ಲೆಯ ಕಾರ್ಯ ವ್ಯಾಪ್ತಿಯಲ್ಲಿ ಸಹಕಾರ ಚಳುವಳಿಯು ಉತ್ತಮ ರೀತಿಯಲ್ಲಿ ಮುಂದುವರಿಯುತ್ತಿದ್ದು, ಮಡಿಕೇರಿ, ವೀರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳು ಮಡಿಕೇರಿ ಉಪವಿಭಾಗದ ಕಾರ್ಯವ್ಯಾಪ್ತಿಗೆ ಬರುತ್ತದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು ಜನ ಸಂಖ್ಯೆ 548561 ಈ ಪೈಕಿ, ಮಡಿಕೇರಿ ತಾಲ್ಲೂಕಿನಲ್ಲಿ 142012, ವೀರಾಜಪೇಟೆ ತಾಲ್ಲೂಕಿನಲ್ಲಿ 200628, ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ 205921 ಜನ ಸಂಖ್ಯೆ ಇರುತ್ತದೆ. ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಸಹಕಾರ ಸಂಸ್ಥೆಗಳು ಆರ್ಥಿಕ ಹಾಗೂ ಸಾರ್ವಜನಿಕ ಸೌಲಭ್ಯಗಳು, ಸ್ಥಳೀಯ ಉದ್ಯೋಗ ಸೃಷ್ಠಿಸಿ ಸ್ಥಳೀಯ ಅಭಿವೃದ್ಧಿಗೆ ಒತ್ತು ನೀಡುತ್ತಿವೆ. ಕೃಷಿ ಪತ್ತಿನ ಸಹಕಾರ ಸಂಘಗಳು, ಮಾರಾಟ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕವಾಗಿ ಸಬಲವಾಗಿವೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲಿ ಶೇ. 63ಕ್ಕೂ ಹೆಚ್ಚು ಸಹಕಾರ ಸಂಘಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಕೊಡಗು ಜಿಲ್ಲೆ, ಮಡಿಕೇರಿ ಈ ಕಾರ್ಯವ್ಯಾಪ್ತಿಯಲ್ಲಿ ಮಡಿಕೇರಿ, ವೀರಾಜಪೇಟೆ, ಸೋಮವಾರಪೇಟೆ ತಾಲ್ಲೂಕುಗಳ ವ್ಯಾಪ್ತಿ ಹೊಂದಿದ್ದು, ಸಹಕಾರ ಸಂಘಗಳ /ಸೌಹಾರ್ದ ಸಹಕಾರಿಗಳ, ಹಣಕಾಸು ಸಂಸ್ಥೆಗಳು, ಚೀಟಿನಿಧಿ ಸಂಸ್ಥೆಗಳು, ಕೆಪಿಎಂಆರ್ ಕ್ಯಾಕಾಂಫ್ಯಾಕ್ಟ್ ದಾವಾ ಪ್ರಕರಣಗಳು, ವಿಚಾರಣೆಗಳು ಯಶಸ್ವಿನಿ ಯೋಜನೆ ನಿರ್ವಹಣೆಗೆ ಸಂಬಂಧಿಸಿದ ಆಡಳಿತಾತ್ಮಕ ಕರ್ತವ್ಯವನ್ನು ನಿರ್ವಹಿಸಲಾಗುತ್ತಿದೆ.

ಅ) ಇಲಾಖೆಯ ಹೆಸರು: ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಕೊಡಗು ಜಿಲ್ಲೆ, ಮಡಿಕೇರಿ

ಆ) ರಚನೆ:

ಕ್ರ ಸಂ	ಹುದ್ದೆಯ ವಿವರ	ಮಂಜೂರಾದ ಹುದ್ದೆಗಳು	ಕಾರ್ಯನಿರತ	ಖಾಲಿ ಇರುವ ಹುದ್ದೆಗಳು
1	ಸಹಕಾರ ಸಂಘಗಳ ಉಪನಿಬಂಧಕರು	1	1	–
2	ಸಹಕಾರ ಅಭಿವೃದ್ಧಿ ಅಧಿಕಾರಿ	3	1	2
3	ಅಧೀಕ್ಷಕರು	1	1	–
4	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	3	3	–
5	ಸಹಕಾರ ಸಂಘಗಳ ನಿರೀಕ್ಷಕರು	2	–	2
6	ಪ್ರಥಮ ದರ್ಜೆ ಸಹಾಯಕರು	3	2	1
7	ಶೀಘ್ರ ಲಿಪಿಗಾರರು	1	–	1
8	ಬೆರಳಚ್ಚುಗಾರರು	2	–	2
9	ದ್ವಿತಿಯ ದರ್ಜೆ ಸಹಾಯಕರು	3	1	2
10	ಡಿ ದರ್ಜೆ ನೌಕರರು	2	2	–
	ಒಟ್ಟು	**21**	**11**	**10**

ಅಧ್ಯಾಯ–2

ಕಲಂ 4(1) (ಬಿ) (ii)

ಅಧಿಕಾರಿ/ ಸಿಬ್ಬಂದಿಗಳ ಕರ್ತವ್ಯಗಳು

1. **ಸಹಕಾರ ಸಂಘಗಳ ಉಪನಿಬಂಧಕರು:–**

1. **ಆಡಳಿತಾತ್ಮಕ ಕರ್ತವ್ಯಗಳು:–** ಇಲಾಖಾ ಮುಖ್ಯಸ್ಥರ ನಿರ್ದೇಶನಗಳನ್ನು ನಿಯಮದ ಚೌಕಟ್ಟಿನಲ್ಲಿ

ಜಾರಿಗೊಳಿಸುವ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಹಾಗೂ ಕಚೇರಿಯ ಸಿಬ್ಬಂದಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ. ಇಲಾಖಾ ವಿಚಾರಣೆ, ಇಲಾಖಾ ಸಭೆಗಳು, ಸಹಕಾರ ಸಂಘ/ಬ್ಯಾಂಕ್‌ಗಳ ಸಭೆಗಳು, ಸಮನ್ವಯ ಸಮಿತಿ ಸಭೆಗಳಿಗೆ ಹಾಜರಾಗುವುದು. ಸಾರ್ವಜನಿಕ ದೂರು ಅರ್ಜಿ ವಿಚಾರಣೆ ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ಯೋಜನೆಯ ಫಲಾನುಭವಿಯ ನೊಂದಾಣಿಗಾಗಿ ಕ್ರಮವಿಡುವುದು. ಮತ್ತು ಇಲಾಖಾ ಅಧಿಕಾರಿಗಳು ಆಗಿಂದಾಗ್ಗೆ ನೀಡುವ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪಾಲಿಸುವುದು.

2. **ಕಾರ್ಯನಿರ್ವಾಹಕ ಕರ್ತವ್ಯಗಳು:–**

ಸಹಕಾರ ಸಂಘಗಳ ಮೇಲ್ವಿಚಾರಣೆ ಪರಿವೀಕ್ಷಣೆ ನಡೆಸುವುದು. ಕೇಂದ್ರ, ರಾಜ್ಯ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುವ ಯೋಜನೆಗಳ ಪ್ರಸ್ತಾವನೆಗಳನ್ನು ಸ್ವೀಕರಿಸುವುದು ಮತ್ತು ಅದನ್ನು ಮಂಜೂರಾತಿ ನೀಡುವುದು ಮತ್ತು ಹಣ ಬಿಡುಗಡೆ ಮಾಡುವುದು ಸರ್ಕಾರದ ಸಾಲ ಸರ್ಕಾರಕ್ಕೆ ಪಾವತಿಸಬೇಕಾದ ಪಾಲು ಬಂಡಾವಳ, ಪಾಲು ಮುನಾಫೆಗಳ ವಸೂಲಿಗೆ ಕ್ರಮವಿಡುವುದು. ಮೇಲಾಧಿಕಾರಿಗಳಿಂದ ಬಂದ ಪತ್ರಗಳಿಗೆ ಉತ್ತರ ಹಾಗೂ ಸಂಬಂಧಿಸಿದಂತೆ ವರದಿ ಕಳುಹಿಸುವುದು.

3. **ಶಾಸನಾತ್ಮಕ ಕರ್ತವ್ಯಗಳು:–**

ಸರ್ಕಾರದ ಅಧಿಸೂಚನೆಯಲ್ಲಿ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಜಾರಿಗೆ ತರುವುದು. ಲೇವಾದೇವಿ ಕಾಯ್ದೆ ಮತ್ತು ನಿಯಮ, ಗಿರವಿದಾರರ ಕಾಯ್ದೆ ಮತ್ತು ನಿಯಮ, ಕೆಪಿಎಂಆರ್, ಕ್ಯಾಕಾಂಫ್ಯಾಕ್ಟ್ ಮತ್ತು ನಿಯಮ,

ಚೀಟಿ ನಿಧಿ ಕಾಯ್ದೆ ಮತ್ತು ನಿಯಮಗಳಲ್ಲಿ ಕರ್ತವ್ಯಗಳನ್ನು ನಿರ್ವಹಿಸುವುದು. ಸಂಘಸಂಸ್ಥೆಗಳ ನೊಂದಣಿ ಕಾಯ್ದೆ 1960 ರನ್ವಯ ನೊಂದಣಿ, ಫೈಲಿಂಗ್, ಬೈಲಾ ತಿದ್ದುಪಡಿ, ಶುಲ್ಕ ವಸೂಲಾತಿ, ದೂರು ಅರ್ಜಿ ವಿಚಾರಣೆ ಇತ್ಯಾದಿ

4. **ನ್ಯಾಯಿಕ ಸ್ವರೂಪದ ಕರ್ತವ್ಯಗಳು:**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ಮತ್ತು 70ರ ಪ್ರಕಾರ ದಾಖಲಾದ ದಾವಾ ಪ್ರಕರಣಗಳ ವಿಚಾರಣೆ ನಡೆಸುವುದು. ಇಲಾಖಾಧಿಕಾರಿಗಳಿಂದ ಬಂದ ದಾವಾ ಕಡತಗಳನ್ನು ಇತ್ಯರ್ಥಗೊಳಿಸುವುದು. ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ದಾವೆ ದಾಖಲಿಸಲು ಅಧಿಕಾರ ನೀಡುವುದು.

5. **ಅಭಿವೃದ್ಧಿಪರ ಕರ್ತವ್ಯಗಳು:**

ಸಹಕಾರ ಸಂಘಗಳಿಗೆ ಸ್ನೇಹಿತ, ಗುರು, ಮಾರ್ಗದರ್ಶಿಯಾಗಿ ಸಲಹೆ ಸೂಚನೆಗಳನ್ನು ನೀಡುವುದು. ಸಹಕಾರ ಸಂಘಗಳ ಏಳಿಗೆಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವುದು. ಸಹಕಾರ ಸಂಘದ ಉಪನಿಯಮ ತಿದ್ದುಪಡಿಯ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಶಿಫಾರಸ್ ಮಾಡುವುದು. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 58(ಇ) ಪ್ರಕಾರ ಹೆಚ್ಚುವರಿ ನಿಧಿಗಳನ್ನು ಹೂಡಿಕೆ ಮಾಡಲು ಸಲಹೆಗಳನ್ನು ನೀಡುವುದು.

ಕ್ರ.ಸಂ	ಹುದ್ದೆಯ ವಿವರ	ವಿಷಯ ನಿರ್ವಾಹಕರ ಹೆಸರು ಶ್ರೀ/ಶ್ರೀಮತಿ	ವಿಷಯ ನಿರ್ವಹಣೆ
1	ಸಹಕಾರ ಅಭಿವೃದ್ಧಿ ಅಧಿಕಾರಿ, ಮಡಿಕೇರಿ	--	--
2	ಅಧೀಕ್ಷಕರು	ಆರ್. ಶ್ರೀಧರ್	ಆಡಳಿತ ಮತ್ತು ಸಿಬ್ಬಂದಿ ಶಾಖೆ ಲೇವಾದೇವಿ, ಗಿರವಿ, ಹಣಕಾಸು ಸಂಸ್ಥೆಗಳು ಹಾಗೂ ಚಿಟ್ಸ್, ಮಾಹಿತಿ ಹಕ್ಕು ಕಾಯಿದೆ, ವ್ಯಾಜ್ಯ ಶಾಖೆ , ಲೆಕ್ಕ ಶಾಖೆ, ದೂರವಾಣಿ ಮತ್ತು ಫ್ಯಾಕ್ಸ್‌ಯಂತ್ರ ನಿರ್ವಹಣೆ. ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.
3	ಬೆರಳಚ್ಚುಗಾರರು	--	--
4	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಎಂ.ಎಸ್.ಮೋಹನ್	ಯೋಜನೆ, ವ್ಯಾಪಾರಾಭಿವೃದ್ಧಿ, ವೈದ್ಯನಾಥನ್ ವರದಿ ಅನುಷ್ಠಾನ, ಯಶಸ್ವಿನಿ ಸಹಕಾರ ಸಂಘಗಳ ಕಟ್ಟಡ ನಿರ್ಮಾಣ ಆಡಳಿತಾತ್ಮಕ ಅನುಮೋದನೆ, ಮಾರಾಟ, ವ್ಯಾಜ್ಯ ಶಾಖೆ ಇತ್ಯಾದಿ ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.
5		ಎಂ.ಈ.ಮೋಹನ್	ಆರ್.ಎಸ್.ಆರ್ ಶಾಖೆ. ಸಹಕಾರ ಸಂಘಗಳ ನೋಂದಣಿ, ಬೈಲಾ ತಿದ್ದುಪಡಿ, ನಿ.17, ಸಮಾಪನೆ ವಾಹನ ನಿರ್ವಹಣ, ಉಪನಿಬಂಧಕರ ಪ್ರವಾಸ ಮತ್ತು ದಿನಚರಿ ನಿರ್ವಹಣೆ ಪೀಠೋಪಕರಣಗಳು, ವಾರ್ಷಿಕ ಮಹಾ ಸಭೆ, ಮಹೋತ್ಸವ, ಅಧ್ಯಯನ ಪ್ರವಾಸ, ಹಾಗೂ ಚುನಾವಣೆ ಹಾಗೂ ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.
6		ಸಿ.ಕೆ ಭವಾನಿ	ಸಹಾಯಕ ನಿಬಂಧಕರ ಕಛೇರಿಯಲ್ಲಿ ಕಾರ್ಯನಿರ್ವಹಣೆ
7	ಪ್ರಥಮ ದರ್ಜೆ ಸಹಾಯಕರು	ಪಿ.ಬಿ ಮೋಹನ್ ಕುಮಾರ್	ಸಹಾಯಕ ನಿಬಂಧಕರ ಕಛೇರಿಯಲ್ಲಿ ಕಾರ್ಯನಿರ್ವಹಣೆ
8		ಎಸ್. ನಾಗೇಶ್	
9	ದ್ವಿತೀಯ ದರ್ಜೆ ಸಹಾಯಕರು	ನರಸಿಂಹಮೂರ್ತಿ	ಆಡಿಟ್ , ಎಲ್ಲಾ ವಿಧದ ಸಭೆಗಳು ಹಣದುರುಪಯೋಗ ಮತ್ತು ಸಾರ್ವಜನಿಕ ದೂರು, ಯಿಂದ ಮತ್ತು ಗೆ, ಸ್ಟಾಂಪ್ ನಿರ್ವಹಣೆ, ಲೇಖನ ಸಾಮಗ್ರಿ ನಿರ್ವಹಣೆ ಅಭಿಲೇಖಲಯದ ರಕ್ಷಣೆ ಪತ್ತು ಶಾಖೆ, ಕಲಂ 64,65, ಹಾಗೂ ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.

ಕ್ರಸಂ	ಹುದ್ದೆಯ ವಿವರ	ವಿಷಯ ನಿರ್ವಾಹಕರ ಹೆಸರು ಶ್ರೀ/ಶ್ರೀಮತಿ	ವಿಷಯ ನಿರ್ವಹಣೆ
10	ವಾಹನ ಚಾಲಕರು	--	--
11	ಡಿ.ಗ್ರೂಪ್ ನೌಕರರು	ಸೋಮಯ್ಯ	ಕಚೇರಿಯ ಕೊಠಡಿಗಳನ್ನು ಶುಚಿಯಾಗಿಡುವುದು. ಕಡತ, ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಮತ್ತು ಹೊರಗೆ ಸಂಬಂಧಿಸಿದವರಿಗೆ ತಲುಪಿಸುವುದು. ಕಚೇರಿಯ ಮುಖ್ಯಸ್ಥರು ವಹಿಸುವ ಇತರೆ ಕೆಲಸಗಳ ನಿರ್ವಹಣೆ ಮಾಡುವುದು.
12	ಡಿ.ಗ್ರೂಪ್ ನೌಕರರು	ಕೆ.ಎ.ಸಿದ್ದಿಕ್	
13	ಡಿ.ಗ್ರೂಪ್ ನೌಕರರು	ರಾಜಮ್ಮ	

ಅಧ್ಯಾಯ–3

ಕಲಂ 4(1) (ಬಿ) (iii)

ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು

ಸರ್ಕಾರದ ಅಧಿಸೂಚನೆ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ಆಡಳಿತಾತ್ಮಕ ಮತ್ತು ಶಾಸನಾತ್ಮಕ ವಿಷಯಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವುದು. ಅದರ ಪ್ರಕಾರ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ. ಕಚೇರಿಯಲ್ಲಿ ನಿರ್ವಹಿಸುವ ಎಲ್ಲಾ ಸಂಬಂದಿಸಿದ ಶಾಖೆಗಳ ವಿಷಯಗಳಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರಿ ಉಪ ನಿಬಂಧಕರಾಗಿರುತ್ತಾರೆ.

ಅಧ್ಯಾಯ–4

ಕಲಂ 4(1) (ಬಿ) (iv)

ಕಾರ್ಯನಿರ್ವಹಿಸಲು ಅನುಸರಿಸುವ ಮಾನದಂಡಗಳು

ಕರ್ನಾಟಕ ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ, ಕಾಯಿದೆ ಮತ್ತು ನಿಯಮ, ಲೇವಾದೇವಿ ಮತ್ತು ಕಾಯ್ದೆ ನಿಯಮ, ಗಿರವಿ ಕಾಯ್ದೆ ಮತ್ತು ಚೀಟಿ ನಿಧಿ ಕಾಯ್ದೆ ಮತ್ತು ನಿಯಮ, ಸಂಘಗಳ ನೊಂದಣಿ ಕಾಯ್ದೆ 1960 ರ ನಿಯಮಗಳಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸುವುದು.

ಅಧ್ಯಾಯ–5

ಕಲಂ 4(1) (ಬಿ) (v)

1. ಇಲಾಖೆಯು ರಾಜ್ಯದಲ್ಲಿ ಕೆಳಕಂಡ ಶಾಸನಬದ್ದ ಕಾಯ್ದೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ 1997 ಮತ್ತು ನಿಯಮಗಳು 2004.
3. ಚಿಟ್‌ಫಂಡ್ ಆಕ್ಟ್ 1982 ಮತ್ತು ಚಿಟ್‌ಫಂಡ್ ನಿಯಮಗಳು (ಕರ್ನಾಟಕ) 1983.
4. ಪಾನ್‌ಬ್ರೋಕರ್ಸ್ ಆಕ್ಟ್ 1960 ಮತ್ತು ನಿಯಮಗಳು 1966.
5. ಕರ್ನಾಟಕ ಮನಿಲೆಂಡರ್ಸ್ ಕಾಯ್ದೆ 1961 ಮತ್ತು ನಿಯಮಗಳು 1965.
6. ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆ ಕಾಯ್ದೆ 2004.

2. ಉಪ ನಿಬಂಧಕರ ಕಚೇರಿಯಲ್ಲಿ ನಿರ್ವಹಿಸುತ್ತಿರುವ ಇತರೇ ನಿಯಮಗಳ ವಹಿಗಳು:–

1. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು.
2. ಕರ್ನಾಟಕ ಸಾಮಾನ್ಯ ನೇಮಕಾತಿ ನಿಯಮಗಳು
3. ಕರ್ನಾಟಕ ನಾಗರೀಕ ಸೇವಾ (ವೈದ್ಯಕೀಯ ಹಾಜರಾತಿ) ನಿಯಮಗಳು.
4. ಕರ್ನಾಟಕ ನಾಗರೀಕ ಸೇವೆಗಳು (ಕಾಲಮಿತಿ ಬಡ್ತಿ ನಿಯಮಗಳು).
5. ಕರ್ನಾಟಕ ನಾಗರೀಕ ಸೇವೆಗಳು (ಸ್ವಯಂಚಾಲಿತ ಮುಂಬಡ್ತಿ).
6. ಇಲಾಖೆಯಿಂದ ಹೊರಡಿಸಿರುವ ಮುಖ್ಯ ಆದೇಶಗಳು.

7. ಕರ್ನಾಟಕ ಸಾಮಾನ್ಯ ಭವಿಷ್ಯನಿಧಿ ನಿಯಮಗಳು.
8. ಕರ್ನಾಟಕ ಆರ್ಥಿಕ ಸಂಹಿತೆ.
9. ಕರ್ನಾಟಕ ಸ್ವವಿವರ ಸಾಧಿಲ್ವಾರು ವೆಚ್ಚ ಕೈಪಿಡಿ.

3. ಉಪ ನಿಬಂಧಕರು ಕಚೇರಿಯಲ್ಲಿ ನಿರ್ವಹಿಸುತ್ತಿರುವ ವಹಿಗಳು;–

1. ಯಿಂದಾ ಪುಸ್ತಕ.
2. ರವಾನೆ ಪುಸ್ತಕ.
3. ಸಿಬ್ಬಂದಿ ಸೇವಾ ಪುಸ್ತಕಗಳು
4. ಹಾಜರಾತಿ ಪುಸ್ತಕ.
5. ಸಂಬಳ, ಪ್ರವಾಸಭತ್ಯೆ ಮತ್ತು ಸಾದಿಲ್ವಾರು ಪಾವತಿ ಪುಸ್ತಕ.
6. ನಗದು ಪುಸ್ತಕ.
7. ವಿಷಯ ಪುಸ್ತಕ.
8. ಸಿಬ್ಬಂದಿ ಚಲನವಲನ ಪುಸ್ತಕ.
9. ನಗದೀಕರಣ ಪುಸ್ತಕ.
10. ಚೆಕ್ ಪುಸ್ತಕ.

4. ಇತರೇ ಕಡತಗಳು ಮತ್ತು ದಾಖಲೆಗಳು:–

1. ನೊಂದಣಿ ವಹಿಗಳು
2. ಸಹಕಾರ ಸಂಘಗಳ ನೊಂದಣಿ ಪಟ್ಟಿ.
3. ಬೈಲಾ ತಿದ್ದುಪಡಿ ವಹಿ ಮತ್ತು ಕಡತ.
4. ಹಣ ದುರುಪಯೋಗದ ಕಡತ ಮತ್ತು ತಃಖ್ತೆಗಳು.
5. ಯೋಜನಾ ಶಾಖೆಯ ಅನುಷ್ಠಾನದ ವಹಿ ಮತ್ತು ಕಡತ.
6. ಲೇವಾದೇವಿ ಮತ್ತು ಗಿರವಿ ವಹಿ ಮತ್ತು ಕಡತ.
7. ಸಹಕಾರ ಸಂಘಗಳ ಕಾಯ್ದೆ ಕಲಂ 64,65ರ ವಿಚಾರಣೆ ಪರಿವೀಕ್ಷಣೆ ವಹಿ.
8 ಸಹಕಾರ ಸಂಘಗಳ ಕಾಯ್ದೆ ಕಲಂ 68ರ ಆದೇಶದ ಕಡತ.
9. ಸಹಕಾರ ಸಂಘಗಳ ಕಾಯ್ದೆ ಕಲಂ 29(ಸಿ)ರ ಕಡತ
10. ಸಹಕಾರ ಸಂಘಗಳ ಕಾಯ್ದೆ ಕಲಂ 30(1), 31, 28 (ಎ)ಕ್ಕೆ ಸಂಬಂಧಿಸಿದ ಕಡತಗಳು.
11. ಸಹಕಾರ ಸಂಘಗಳ ಕಾಯ್ದೆ ಕಲಂ 63ರ ಆಡಿಟ್ ವರದಿಯ ವಹಿ.
12. ಸಹಕಾರ ಸಂಘಗಳ ಕಾಯ್ದೆ ಕಲಂ 70ರ ವಹಿ.
13. ಸಹಕಾರ ಸಂಘಗಳ ಕಾಯ್ದೆ ಕಲಂ 69ರ ವಹಿ.
14. ದಾವಾ ಶಾಖೆಯ ನಗದು ಪುಸ್ತಕ.
15. ವಾರ್ಷಿಕ ಅಂಕಿಅಂಶಗಳ ತಃಖ್ತೆ.
16. ಸ್ಟ್ಯಾಂಪ್ ನಿರ್ವಹಣೆಯ ವಹಿ.
17. ದೂರು ಅರ್ಜಿ ವಿಲೇವಾರಿ ವಹಿ, ಕಡತ.
18. ಸಮಾಪನಾ ಸಹಕಾರ ಸಂಘಗಳ ವಹಿ.
19. ಆಡಳಿತ ಮಂಡಳಿ ರಚನೆಯ ವಾಚ್ ರಿಜಿಸ್ಟರ್
20. ಮಹಾಸಭೆಯ ವಹಿ.
21. ಸರ್ಕಾರದಿಂದ ನಾಮನಿರ್ದೇಶನ ಹೊಂದಿರುವ ವಹಿ.
22. ಲೇಖನ ಸಾಮಗ್ರಿ ರಿಜಿಸ್ಟರ್.
23. ವಾರ್ಷಿಕ ಪರಿವೀಕ್ಷಣಾ ಕಡತ.

ಅಧ್ಯಾಯ–6

ಕಲಂ 4(1) (ಬಿ) (vi)

ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ

ಕಚೇರಿಯಲ್ಲಿ ನಿರ್ವಹಿಸಲಾದ ಎಲ್ಲಾ ಅಂತಿಮ ಆದೇಶ ನೀಡಿ, ಮುಕ್ತಾಯಗೊಳಿಸಿದ ನಂತರ ಪ್ರತಿ ಕಡತಗಳ ಪ್ರಾಮುಖ್ಯತೆಯನ್ನನುಸರಿಸಿ ಪ್ರವರ್ಗ ಎ.ಬಿ.ಸಿ.ಡಿ.ಇ ಮತ್ತು ಎನ್ ಎಂದು ದಿ: 15–12–1982, 17–11–1990ರ ನಿಬಂಧಕರ ಸುತ್ತೋಲೆಯ ಪ್ರಕಾರ ವರ್ಗೀಕರಿಸಿ, ನಿರ್ವಹಿಸಲಾಗುತ್ತಿದೆ. ಪ್ರತಿ ವರ್ಗೀಕರಣದ ಅವಧಿ ಈ ಕೆಳಗಿನಂತೆ ಇರುತ್ತದೆ.

1	'ಎ' ಡಿಸ್‌ಪೋಸಲ್	ಶಾಶ್ವತ
2	'ಬಿ' ಡಿಸ್‌ಪೋಸಲ್	30 ವರ್ಷಗಳು
3.	'ಸಿ' ಡಿಸ್‌ಪೋಸಲ್	10 ವರ್ಷಗಳು
4	'ಡಿ' ಡಿಸ್‌ಪೋಸಲ್	5 ವರ್ಷಗಳು
5.	'ಇ' ಡಿಸ್‌ಪೋಸಲ್	1 ವರ್ಷಗಳು
6	'ಎನ್'ಡಿಸ್‌ಪೋಸಲ್	ಪತ್ರ ವ್ಯವಹಾರ ಮಿತಿ

ಇದರಲ್ಲಿ ಬರುವ ಎಲ್ಲಾ ಕಡತಗಳು ಮತ್ತು ಕಚೇರಿ ಕಾರ್ಯಗಳಲ್ಲಿ ಬಳಸುತ್ತಿರುವ ವಿವಿಧ ರೀತಿಯ ವಹಿಗಳು, ತಃಖ್ತೆಗಳು, ಮಾಹಿತಿಗಳು, ನಿಯತಕಾಲಿಕಗಳು, ಸೇವಾ ವಹಿಗಳು, ನಿರ್ವಹಿಸುತ್ತಿರುವ ಕಡತಗಳು, ಅಂಕಿ ಅಂಶ ವಹಿ. ಪೀಠೋಪಕರಣ ವಹಿ, ಗ್ರಂಥಾಲಯ ವಹಿ, ಎಲ್‌ಸಿ/ಎಲ್‌ಎ ಪ್ರಶ್ನೆ ವಹಿ, ಮುಂತಾದುವುಗಳು.

ಅಧ್ಯಾಯ–7

ಕಲಂ 4(1) (ಬಿ) (vii)

ಕಾರ್ಯನೀತಿಯ ರಚನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಹಕಾರಿಗಳೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ವ್ಯವಸ್ಥೆಯ ವಿವರಗಳು.

1. ಯಶಸ್ವಿನಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿ
2. ಸಹಕಾರಿ ಸಪ್ತಾಹ ಆಚರಣೆಗೆ ಸಂಬಂಧಿಸಿದಂತೆ ಸಹಕಾರಿಗಳೊಡನೆ ಸಭೆ
3. ಸಮನ್ವಯ ಸಮಿತಿ ಸಭೆ
4. ಪಿಕಾರ್ಡ್ ಬ್ಯಾಂಕುಗಳ ಅಭಿವೃದ್ಧಿ ಕ್ರಿಯಾ ಯೋಜನ ಸಭೆ ನಡೆಸುವುದು.
5. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಡಿಕೇರಿ ಇದರ ಅಭಿವೃದ್ಧಿ ಕ್ರಿಯಾ ಯೋಜನೆಯಲ್ಲಿ ಭಾಗವಹಿಸುವುದು.
6. ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಯೊಂದಿಗೆ ಜಿಲ್ಲಾ ಸಮನ್ವಯ ಸಮಿತಿ ಸಭೆ ನಡೆಸುವುದು.
7. ವೈದ್ಯನಾಥನ್ ವರದಿ ಅನುಷ್ಠಾನದ ಬಗ್ಗೆ ಜಿಲ್ಲಾ ಉಸ್ತುವಾರಿ ಸಮಿತಿ ಸಭೆ.

ಅಧ್ಯಾಯ–8

ಕಲಂ 4(1) (ಬಿ) (viii)

ಈ ಕಚೇರಿಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಪರ್ಕಜಾಲ (Directory)

ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ, ಮಡಿಕೇರಿ ಇವರ ಕಚೇರಿಯ ಸಿಬ್ಬಂದಿ ವರ್ಗದವರ ವಿವರ

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು	ಪದನಾಮ	ದೂರವಾಣಿ ಸಂಖ್ಯೆ
1	ಶ್ರೀ ಎಂ. ವೆಂಕಟಸ್ವಾಮಿ	ಸಹಕಾರ ಸಂಘಗಳ ಉಪನಿಬಂಧಕರು	08272–228519
2	ಶ್ರೀ ಶ್ರೀಧರ ಆರ್	ಅಧೀಕ್ಷಕರು	08272–228519
3	ಶ್ರೀ ಎಂ.ಎಸ್ ಮೋಹನ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	08272–228519
4	ಶ್ರೀ ಎಂ.ಈ ಮೋಹನ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	08272–228519

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು	ಪದನಾಮ	ದೂರವಾಣಿ ಸಂಖ್ಯೆ
5	ಶ್ರೀ ನರಸಿಂಹ ಮೂರ್ತಿ	ದ್ವಿ.ದ.ಸ	08272–228519
6	ಶ್ರೀ ಕೆ.ಎ ಸಿದ್ದಿಕ್	ಗ್ರೂಪ್ 'ಡಿ' ನೌಕರರು	08272–228519
7	ಶ್ರೀ ಸೋಮಯ್ಯ	ಗ್ರೂಪ್ 'ಡಿ' ನೌಕರರು	08272–228519
8	ಶ್ರೀಮತಿ ರಾಜಮ್ಮ	ಗ್ರೂಪ್ 'ಡಿ' ನೌಕರರು	

ಅಧ್ಯಾಯ–9

ಕಲಂ 4(1) (ಬಿ) (ix)

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಕಚೇರಿಯ ಸಿಬ್ಬಂದಿ ವರ್ಗದವರ ತಿಂಗಳ ವೇತನದ ವಿವರ

ಕ್ರ ಸಂ	ಅಧಿಕಾರಿ/ಸಿಬ್ಬಂದಿ ವಿವರ	ಹುದ್ದೆಯ ವಿವರ	ಗ್ರೇಡ್	ವೇತನ ಶ್ರೇಣಿ	ಮೂಲ ವೇತನ	ಒಟ್ಟು ವೇತನ
1	ಶ್ರೀ ಎಂ. ವೆಂಕಟಸ್ವಾಮಿ	ಸಹಕಾರ ಸಂಘಗಳ ಉಪನಿಬಂಧಕರು	'ಎ'	18150–26925	20550	39354
2	ಶ್ರೀ ಹೆಚ್.ಎನ್ ರಮೇಶ್	ಸಹಕಾರ ಅಭಿವೃದ್ಧಿ ಅಧಿಕಾರಿ	'ಬಿ'	10800–20025	12000	22960
3	ಶ್ರೀ ಶ್ರೀಧರ ಆರ್	ಅಧೀಕ್ಷಕರು	'ಸಿ'	10000–18150	12300	23505
4	ಶ್ರೀ ಎಂ.ಎಸ್ ಮೋಹನ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	'ಸಿ'	8825–16000	10800	20632
5	ಶ್ರೀ ಎಂ.ಈ ಮೋಹನ್		'ಸಿ'	8825–16000	10800	20707
6	ಶ್ರೀಮತಿ ಸಿ.ಕೆ ಭವಾನಿ			8825–16000	10800	21057
7	ಶ್ರೀ ಪಿ.ಬಿ ಮೋಹನ್ ಕುಮಾರ್	ಪ್ರ.ದ.ಸ	'ಸಿ'	7275–13150	8400	16386
8	ಶ್ರೀ ನರಸಿಂಹ ಮೂರ್ತಿ	ದ್ವಿ.ದ.ಸ	'ಸಿ'	5800–10500	7450	14218
9	ಶ್ರೀ ಕೆ.ಎ ಸಿದ್ದಿಕ್	ಗ್ರೂಪ್ 'ಡಿ' ನೌಕರರು	'ಡಿ'	5500–9500	6950	13510
10	ಶ್ರೀ ಸೋಮಯ್ಯ	ಗ್ರೂಪ್ 'ಡಿ' ನೌಕರರು	'ಡಿ'	5500–9500	6650	13385

ಅಧ್ಯಾಯ–10

ಕಲಂ 4(1) (ಬಿ) (x)

ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳ ಅಯವ್ಯಯದ ವಿವರ 2011–12 ನೇ ಸಾಲಿನ ಅಯವ್ಯಯದ ಬಗ್ಗೆ ಟಿಪ್ಪಣಿ

ಕ್ರ ಸಂ	ಲೆಕ್ಕ ಶೀರ್ಷಿಕೆ	ಯೋಜನೆಯ ವಿವರ	ಗುರಿ (ರೂ. ಲಕ್ಷಗಳಲ್ಲಿ)
1	2425–00–101–0–61	ಆಸ್ತಿಗಳ ಸೃಷ್ಟಿಗಾಗಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮಂಜೂರು ಮಾಡಿದ ಸಾಲಗಳ ಮೇಲೆ ಸಹಾಯಧನ	2.00
2	4425–00–101–0–62	ಮಹಿಳಾ ಸಹಕಾರ ಸಂಘಗಳ ಹೂಡಿಕೆಗಳು	0.75
3	2425–00–101–0–30	ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು	0.25
4	2425–00–101–0–28	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯ (ಎನ್.ಸಿ.ಡಿ.ಸಿ ಯೋಜನೆ)	1.50

ಕ್ರ ಸಂ	ಲೆಕ್ಕ ಶೀರ್ಷಿಕೆ	ಯೋಜನೆಯ ವಿವರ	ಗುರಿ (ರೂ. ಲಕ್ಷಗಳಲ್ಲಿ)
6	4425–00–101–0–26	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಸಹಾಯ (ಸಾಮಾನ್ಯ–ನಬಾರ್ಡ್ ಯೋಜನೆ)	1.50
7	4425–00–101–0–29	ಇತರೇ ಸಹಕಾರ ಸಂಘಗಳಿಗೆ ಷೇರು ಬಂಡವಾಳ	3.00
8	6425–00–101–0–27	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಪ್ರೋತ್ಸಾಹ ಮತ್ತು ಅಭಿವೃದ್ಧಿಗಾಗಿ ಆರ್ಥಿಕ ಸಹಾಯ (ಸಾಲ)	3.00
		ಒಟ್ಟು	**12.00**

ಅಧ್ಯಾಯ–11

ಕಲಂ 4(1) (ಬಿ) (xi)

ಹಂಚಿಕೆ ಮಾಡಲಾದ ಮೊಬಲಗುಗಳನ್ನೊಳಗೊಂಡ ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ

ಕ್ರ.ಸಂ	ಯೋಜನೆಯ ವಿವರ	ಸಹಾಯಧನ ಮಂಜೂರಾತಿ ನೀಡಲು ಇರುವ ಅರ್ಹತೆ	ಸಹಾಯಧನ ಮಂಜೂರು ಮಾಡಿದ ಅಧಿಕಾರಿಯ ಹೆಸರು
1	ವಿಶೇಷ ಘಟಕ ಯೋಜನೆ ಶೇ. 60ರ ಸಹಾಯಧನ	ಪಿಕಾರ್ಡ್ ಬ್ಯಾಂಕ್/ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರಾಗಿದ್ದು, ಪರಿಶಿಷ್ಟ ಜಾತಿ ಸದಸ್ಯರು ಪಡೆದ ಸಾಲದ ಮೇಲೆ ಶೇ. 60ರ ಸಹಾಯಧನ 1. ಮಡಿಕೇರಿ ತಾಲ್ಲೂಕು. 2. ಸೋಮವಾರಪೇಟೆ ತಾಲ್ಲೂಕು. 3. ವಿರಾಜಪೇಟೆ ತಾಲ್ಲೂಕು	ಸಹಾಯಕ ನಿಬಂಧಕರು, ಮಡಿಕೇರಿ.

ಅಧ್ಯಾಯ–12

ಕಲಂ 4(1) (ಬಿ) (xii)

ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಕ್ರಮ

ಕ್ರ.ಸಂ	ಯೋಜನೆಯ ವಿವರ	ಅರ್ಜಿಯ ವಿಧಾನಗಳು	ಮಂಜೂರಾತಿಯ ವಿಧಾನ	ವಿತರಿಸುವ ವಿಧಾನ
1	ವಿಶೇಷ ಘಟಕ ಯೋಜನೆ ಶೇ. 60ರ ಸಹಾಯ ಧನ	ಗ್ರಾಮ ಸಭೆಯಲ್ಲಿ ಆಯ್ಕೆಯಾದ ಅರ್ಹತೆಯುಳ್ಳ ಫಲಾನುಭವಿಗಳು	ತಾಲೂಕು ಪಂಚಾಯತ್ ಸಾಮಾಜಿಕ ನ್ಯಾಯ ಸಮಿತಿ ಸಭೆಯಲ್ಲಿ	ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಯವರಿಂದ ಬಿಲ್ಲು ಮೇಲು ರುಜುವಿಗೆ ಕಳುಹಿಸಿ. ಬಳಿಕ ದೃಢೀಕರಣ ಸ್ವೀಕರಿಸಿದ ನಂತರ ವಿಶೇಷ ಠೇವಣಿ ಖಾತೆಯಿಂದ ಬಿಡುಗಡೆಗೊಳಿಸಲಾಗುವುದು.

ಅಧ್ಯಾಯ–13

ಕಲಂ 4(1) (ಬಿ) (xiii)

ಇತರೇ ಮಾಹಿತಿಗಳನ್ನು ಪ್ರತಿ ವರ್ಷ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಕಟಿಸುತ್ತಿರುವ ಬಗ್ಗೆ

1) ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ, ಮಡಿಕೇರಿ ಈ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ವಿವರ:–

ಕ್ರ.ಸಂ	ಸಹಕಾರ ಸಂಘಗಳ ವರ್ಗ	2011–12ಕ್ಕೆ
1	ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್	1
2	ಪ್ರಾ.ಸ.ಕೃ ಅಭಿವೃದ್ಧಿ ಮತ್ತು ಗ್ರಾಮೀಣ ಬ್ಯಾಂಕ್ (ನಿ.,)	3

ಕ್ರ.ಸಂ	ಸಹಕಾರ ಸಂಘಗಳ ವರ್ಗ	2011–12ಕ್ಕೆ
3	ಪ್ರಾ.ಸ.ಕೃ ಅಭಿವೃದ್ಧಿ ಮತ್ತು ಸಹಕಾರ ಬ್ಯಾಂಕ್ (ನಿ.,)	68
4	ಲ್ಯಾಂಪ್ಸ್ ಸಹಕಾರ ಸಂಘಗಳು	3
5	ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು	1
6	ಸಹಕಾರಿ ಗ್ರೇನ್ ಬ್ಯಾಂಕ್‌ಗಳು (ದವಸ ಭಂಡಾರ)	102
7	ಪಟ್ಟಣ ಸಹಕಾರ ಬ್ಯಾಂಕ್‌ಗಳು	4
8	ಇತರೆ ಪತ್ತಿನ ಸಹಕಾರ ಸಂಘಗಳು	7
9	ನೌಕರರ ಪತ್ತಿನ ಸಹಕಾರ ಸಂಘಗಳು	11
10	ತಾಲ್ಲೂಕು ಕೃಷಿ ಮತ್ತು ಹುಟ್ಟುವಳಿ ಮಾರಾಟ ಸಂಘಗಳು	12
11	ಇತರೆ ಮಾರಾಟ ಸಹಕಾರ ಸಂಘಗಳು	3
12	ಲೈವ್‌ಸ್ಟಾಕ್ ಸಹಕಾರ ಸಂಘಗಳು	4
13	ಹಾಲು ಉತ್ಪಾದಕರ ಸಹಕಾರ ಸಂಘಗಳು	31
14	ಸಂಯುಕ್ತ ಬೇಸಾಯ ಸಹಕಾರ ಸಂಘಗಳು	3
15	ಏತ ನೀರಾವರಿ ಸಹಕಾರ ಸಂಘಗಳು	2
16	ನೀರು ಬಳಕೆದಾರರ ಸಹಕಾರ ಸಂಘಗಳು	6
17	ಮೀನುಗಾರಿಕಾ ಸಹಕಾರ ಸಂಘಗಳು	1
18	ಕೈಗಾರಿಕಾ ಸಹಕಾರ ಸಂಘಗಳು	9
19	ಗ್ರಾಹಕರ ಸಹಕಾರ ಸಂಘಗಳು	10
20	ಕೇಂದ್ರ ಸಗಟು ಮಾರಾಟ ಮಳಿಗೆ	1
21	ಗೃಹ ನಿರ್ಮಾಣ ಸಹಕಾರ ಸಂಘಗಳು	1
22	ಜಿಲ್ಲಾ ಸಹಕಾರ ಒಕ್ಕೂಟ	1
23	ಜಿಲ್ಲಾ ಸಹಕಾರ ಮಹಾಮಂಡಳಿ	1
24	ವಿವಿದೋದ್ದೇಶ ಸಹಕಾರ ಸಂಘಗಳು	6
25	ವಿದ್ಯಾರ್ಥಿ ಗ್ರಾಹಕ ಸಹಕಾರ ಸಂಘಗಳು	12
26	ಮಹಿಳಾ ಸಹಕಾರ ಸಂಘಗಳು	12
27	ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು	9
28	ಸಾರಿಗೆ ಸಹಕಾರ ಸಂಘಗಳು	1
29	ಇತರೆ ಸಹಕಾರಿ ಸಂಘಗಳು	7
	ಒಟ್ಟು	**332**

ಅಧ್ಯಾಯ–14

ಕಲಂ 4(1) (ಬಿ) (xiv)

ಕಚೇರಿಯ ಹೆಸರು	ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 19(1)ರಡಿಯಲ್ಲಿ ನೇಮಿಸಲಾದ ಮೇಲ್ಮನವಿ ಪ್ರಾಧಿಕಾರ	ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ಕೊಡಗು ಜಿಲ್ಲೆ, ಮಡಿಕೇರಿ	ಶ್ರೀ ಬಿ.ಎಸ್ ಹರೀಶ್ ಸಹಕಾರ ಸಂಘಗಳ ಜಂಟಿನಿಬಂಧಕರು ಮೈಸೂರು ಪ್ರಾಂತ ಮೈಸೂರು	ಶ್ರೀ ಎಂ. ವೆಂಕಟಸ್ವಾಮಿ, ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ ಮಡಿಕೇರಿ	ಶ್ರೀ ಶ್ರೀಧರ. ಆರ್ ಅಧೀಕ್ಷಕರು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ
	ದೂರವಾಣಿ ನಂ: 0821–2520823	ದೂರವಾಣಿ ನಂ: 08272–228519	ದೂರವಾಣಿ ನಂ: 08272–228519
	email ID: jrcs-mysore-ka@nic.in	**email ID:** drcs-kodagu-ka@nic.in	**email ID:** drcs-kodagu-ka@nic.in

ಅಧ್ಯಾಯ–15

ಕಲಂ 4(1) (ಬಿ) (xv)

ನಿರ್ಧಿಷ್ಟ ಪಡಿಸಬಹುದಾದಂಥ ಇತರೆ ಮಾಹಿತಿಗಳು

ನಾಗರೀಕರಿಗೆ ಉಪಯೋಗವಾಗುವ ಪ್ರಕಟಿಸಲಾದ ಇತರೆ ಮಾಹಿತಿ ಅಥವಾ ಪ್ರಕಟಣೆಗಳು

1. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಬಗ್ಗೆ ವಿವರಗಳು.
2. ಸಂಘಗಳ ನೊಂದಣಿ ಕಾಯ್ದೆ 1960 ಇದರಲ್ಲಿ ದಾಖಲೆಗಳನ್ನು ಫೈಲಿಂಗ್ ಮಾಡಲು ತಿಳುವಳಿಕೆ.

ಎಂ. ವೆಂಕಟಸ್ವಾಮಿ,
ಸಹಕಾರ ಸಂಘಗಳ ಉಪನಿಬಂಧಕರು
ಕೊಡಗು ಜಿಲ್ಲೆ, ಮಡಿಕೇರಿ

ಪಿ.ಆರ್. 03

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಶಿರಸಿ ವಿಭಾಗ, ಶಿರಸಿ ಇವರ ನಡಾವಳಿಗಳು

ವಲಯ ಅರಣ್ಯಾಧಿಕಾರಿ, ಹುಲೇಕಲ್‌ರವರ ಅರಣ್ಯ ಮೊಕದ್ದಮೆ ಸಂಖ್ಯೆ.5/04–05/ದಿ:31–01–2005.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಯಿಂದ (ಜಿ) ವರೆಗೆ

ಉಪಸ್ಥಿತಿ:–

ಶ್ರೀ ಡಿ.ಯತೀಶಕುಮಾರ, ಕ.ಅ.ಸೇ ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ

ವಲಯ ಅರಣ್ಯಾಧಿಕಾರಿ, **ಫಿರ್ಯಾದಿದಾರರು..........**
ಹುಲೇಕಲ್ ವಲಯ, ಹುಲೇಕಲ್. (ಪ್ರತಿನಿಧಿಸಿದವರು : ಸಹಾಯಕ ಸರಕಾರಿ ಅಭಿಯೋಜಕರು,
ಜೆ.ಎಂ.ಎಫ್.ಸಿ ನ್ಯಾಯಾಲಯ,ಶಿರಸಿ)

ಶ್ರೀ ಶ್ರೀಪಾದ ಗಣಪತಿ ಹೆಗಡೆ, ಸಾ:ಯಡಳ್ಳಿ, ವಾನಳ್ಳಿ **ಅರ್ಜಿದಾರರು...........**

ಪ್ರಕರಣದ ಹಿನ್ನೆಲೆ/ಪ್ರಸ್ತಾವನೆ:

ದಿನಾಂಕ:31–01–2005 ನೇ ತಾರೀಖಿನಂದು ಮೆಣಸಿ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಗಣಪತಿ ಹೆಗಡೆ ಸಾ: ಹೆಗ್ಗುಂಬ್ಳಿ ಇವರು ರಾತ್ರಿ ಸುಮಾರು 10.45ರ ಸಮಯಕ್ಕೆ ಸ್ವರ್ಣಗದ್ದೆಯಿಂದ ಶಿರಸಿ ಕಡೆಗೆ ಬರುತ್ತಿರುವ ಜೀಪನ್ನು ತಡೆದು ನಿಲ್ಲಿಸಿ, ಪರಿಶೀಲಿಸಿದಾಗ ಅದರಲ್ಲಿ ಸಾಗವಾನಿ ಕಟ್ಟಿಗೆಯ ಕೊರೆದ ನಡೆಗಳು ಇರುವದನ್ನು ಕಂಡು ಕೂಡಲೇ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಜಾನ್ಮನೆ

ಉಪ ವಿಭಾಗ ಇವರಿಗೆ ಹಾಗೂ ವಲಯ ಅರಣ್ಯಾಧಿಕಾರಿ, ಹುಲೇಕಲ್‌ರವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಂದೇಶ ತಿಳಿಸಿದರು. ಅದರಂತೆ, ಘಟನಾ ಸ್ಥಳಕ್ಕೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಬಂದು ಜೀಪನ್ನು ಪರಿಶೀಲಿಸಲಾಗಿ, ಅದರಲ್ಲಿ ಸಾಗವಾನಿ ನಡೆಗಳು ಇರುವುದನ್ನು ಖಚಿತ ಪಡಿಸಿಕೊಳ್ಳಲಾಯಿತು. ಸದರಿ ನಡೆಗಳನ್ನು ಬ್ಯಾಟರಿ ಬೆಳಕಿನಲ್ಲಿ ಪರಿಶೀಲಿಸಿದ್ದು ಯಾವುದೇ ಇಲಾಖಾ ಛಪ್ಪಾ ವಗೈರೆ ಇರಲಿಲ್ಲ. ಆದ್ದರಿಂದ ಇದು ಅಕ್ರಮ ಕಳ್ಳ ಸಾಗಾಣಿಕೆಯಿಂದ ತಂದಿದ್ದಾಗಿ ಖಚಿತ ಪಟ್ಟಿತು. ಸದರಿ ಜೀಪನ್ನು ಚಲಾಯಿಸುತ್ತಿದ್ದ ವ್ಯಕ್ತಿ ಶ್ರೀ ಶ್ರೀಪಾದ ಗಣಪತಿ ಹೆಗಡೆ ಸಾ:ಯಡಳ್ಳಿ ಮತ್ತು ಜೀಪಿನ ಹಿಂಭಾಗದಲ್ಲಿ ಕುಳಿತ ವ್ಯಕ್ತಿ ಶ್ರೀ ಮಂಜುನಾಥ ಗಣಪತಿ ಶೆಟ್ಟಿ ಸಾ:ಹಲಸಿನಕೊಪ್ಪ, ಮೆಣಸಿ ಅಂತಾ ತಿಳಿಯಿತು. ಸದರ ವಾಹನದ ನೊಂದಣಿ ಸಂಖ್ಯೆ ಜೀಪು ಸಂ.ಕೆ–31 ಎಂ.1249 ಆಗಿದ್ದು ಬಿಳಿ ಬಣ್ಣದ್ದಾಗಿರುತ್ತದೆ. ಸದರ ಜೀಪನ್ನು ವಲಯ ಅರಣ್ಯಾಧಿಕಾರಿ ಹುಲೇಕಲ್ ಕಛೇರಿಗೆ ತಂದು ಕಟ್ಟಿಗೆಗಳನ್ನು ಅಳತೆ ಮಾಡಲಾಗಿ ಅವು 18 = 0.692 ಘ.ಮೀ ಇದ್ದವು. ಸದರ ವಾಹನ ಮಹೀಂದ್ರಾ ಆರಮೋಡಾ ಹಾಗೂ ಮಾಲನ್ನು ಇಲಾಖಾ ವಶಕ್ಕೆ ತೆಗೆದುಕೊಳ್ಳಲಾಗಿದ್ದು ಪ್ರಥಮ ವರ್ತಮಾನ ವರದಿ ತಯಾರಿಸಿ ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಹಾಜರ ಪಡಿಸಲಾಯಿತು.

ತದನಂತರ ದಿ:1–2–2005 ರಂದು ಮುಂದಿನ ಆದೇಶದ ವರೆಗೆ ವಲಯ ಅರಣ್ಯಾಧಿಕಾರಿ, ಹುಲೇಕಲರವರ ಸುರಕ್ಷಿತ ವಶಕ್ಕೆ ಇಲಾಖಾ ಭದ್ರತೆಯಲ್ಲಿಡುವಂತೆ ಆದೇಶಿಸಲಾಗಿತ್ತು.

ವಾಹನ ಮಾಲಿಕರಾದ ಶ್ರೀ ಶ್ರೀಪಾದ ಗಣಪತಿ ಹೆಗಡೆ, ಸಾ:ಮೆಣಸಿ ಇವರು ತಮ್ಮ ವಕೀಲರ ಮೂಲಕ ದಿನಾಂಕ:2–2–2005 ರಂದು ಅರ್ಜಿ ಸಲ್ಲಿಸಿ ವಾಹನವನ್ನು ಮಧ್ಯಂತರ ವಶಕ್ಕೆ ಬಿಟ್ಟುಕೊಡಬೇಕಾಗಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿ ವಾಹನವನ್ನು ಮಾಲಿಕರಿಗೆ ಬಿಟ್ಟುಕೊಟ್ಟಲ್ಲಿ ವಾಹನವನ್ನು ಮಾರಾಟಮಾಡಿ, ಕೇಸಿಗೆ ಸಂಬಂಧಿಸಿದ ದಾಖಲೆಗಳನ್ನು ನಾಶಪಡಿಸಬಹುದಾಗಿದ್ದರಿಂದ ವಾಹನವನನ್ನು ಬಿಟ್ಟುಕೊಡಬಾರದಾಗಿ ಸರಕಾರಿ ಅಭಿಯೋಜಕರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ದಿ:15–4–2005 ರಂದು ತಿರಸ್ಕರಿಸಿ ಆದೇಶಿಸಲಾಗಿತ್ತು.

ತದನಂತರ ಅರ್ಜಿದಾರರು ಸೆಶನ್ ನ್ಯಾಯಾಲಯ ಉತ್ತರ ಕನ್ನಡ ಕಾರವಾರ ಇವರಲ್ಲಿ ಅಪೀಲು ಸಲ್ಲಿಸಿದ್ದು, ಜಿಲ್ಲಾ ಸೆಶನ್ ನ್ಯಾಯಾಲಯವು ದಿ:7–7–2005 ರಂದು ಈ ಕೆಳಕಂಡ ಶರತ್ತಿಗೊಳಪಟ್ಟು ವಾಹನ ಮಹೀಂದ್ರ ಜೀಪು ನಂ.ಕೆಎ–31 ಎಂ.1249 ನ್ನು ಅರ್ಜಿದಾರರಿಗೆ ಮದ್ಯಂತರ ವಶಕ್ಕೆ ಬಿಟ್ಟುಕೊಡಬೇಕಾಗಿ ಆದೇಶ ನೀಡಿತ್ತು

ಶರತ್ತುಗಳು

1. ರೂ.1,00,000–00 ದ ಬ್ಯಾಂಕ್ ಗ್ಯಾರಂಟಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಸಲ್ಲಿಸುವುದು.
2. ಸದರ ಪ್ರಕರಣ ಇತ್ಯರ್ಥವಾಗುವವರೆಗೂ ಪರಭಾರ ಮಾಡುವುದಾಗಲೀ ಮಾರಾಟ ಮಾಡುವುದಾಗಲೀ ಮಾಡಬಾರದು.
3. ಯಾವುದೇ ಬದಲಾವಣೆ, ಬಣ್ಣ, ವಿನ್ಯಾಸ ಬದಲಾಯಿಸಬಾರದು.
4. ಯಾವಾಗ ಪ್ರಾಧಿಕಾರವು ವಾಹನವನ್ನು ಹಾಜರು ಪಡಿಸಲು ತಿಳಿಸಿದರೂ, ಸುಸ್ಥಿತಿಯಲ್ಲಿಟ್ಟು ಹಾಜರ ಪಡಿಸುವುದು.
5. ಈ ನ್ಯಾಯಾಲಯ ವಿಧಿಸುವ ಯಾವತ್ತು ಶರತ್ತಿಗೆ ಬದ್ದವಾಗಿರುವುದು ಎಂಬಿತ್ಯಾದಿ ಶರತ್ತಿನೊಂದಿಗೆ ವಾಹನದ ಮದ್ಯಂತರ ಬಿಡುಗಡೆಗೆ ಆದೇಶಿಸಲಾಗಿತ್ತು.

ವಾಹನ ಮಾಲಿಕರು ಮೇಲ್ಕಂಡ ಯಾವತ್ತು ಶರತ್ತುಗಳನ್ನು ಪೂರೈಸಿ ವಾಹವನ್ನು ತಮ್ಮ ಮದ್ಯಂತರ ವಶಕ್ಕೆ ಪಡೆದುಕೊಂಡಿರುತ್ತಾರೆ.

ತದನಂತರ ವಿಚಾರಣೆಯನ್ನು ಮುಂದುವರೆಸಿ, ವನಪಾಲಕ ಶ್ರೀ ಶೇಖರ ಬಂಗಾರಿ ನೆತ್ರೇಕರ್ ಇವರನ್ನು ವಿಚಾರಣೆಗೆ ಒಳಪಡಿಸಲಾಗಿ ಅವರ ಸಾಕ್ಷಿಯನ್ನು PW–1 ಅಂತ ಗುರುತಿಸಿ ಕೊಂಡಿದ್ದು ಅವರ ಸಾಕ್ಷಿಯ ಸಾರಾಂಶ ಈ ರೀತಿ ಇದೆ.

" ದಿ:31–01–2005 ರಂದು ಬಾತ್ಮಿ ಬಂದ ಮೇರೆಗೆ ನಾನು ಮತ್ತು ಒಬ್ಬ ವಾಚಮನ್ ಸೇರಿ ರಾತ್ರಿ 11–00 ಗಂಟೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಕಳಿಸಿದ ಜೀಪಿನಲ್ಲಿ ಚಪ್ಪರ ಕಟ್ಟೆಗೆ ಬಂದಾಗ ಅಲ್ಲಿ ಜೀಪು ನಿಂತಿತ್ತು. ಜೀಪಿನಲ್ಲಿ ಕಳ್ಳ ಮಾಲು ಇದೆ ಅಂತ ಸತೀಶ ಹೆಗಡೆ ಹೆಗ್ಗುಂಬೈ ಇವರು ಒಂದು ಜೀಪನ್ನು ತಡೆದು ನಿಲ್ಲಿಸಿದ್ದರು. ಶ್ರೀ ಸತೀಶ ಹೆಗಡೆಯವರು ಗ್ರಾಮ ಅರಣ್ಯ ಸಮೀತಿಯ ಅಧ್ಯಕ್ಷರಾಗಿದ್ದರು. ನಿಲ್ಲಿಸಿದ್ದ ಜೀಪಿನ ಬಾಗಿಲು ತೆಗೆದು ನೋಡಿದಾಗ ಅದರಲ್ಲಿ ಸಾಗವಾನಿ ತುಂಡುಗಳು ಇದ್ದವು, ಬ್ಯಾಟರಿ ಬೆಳಕಿನಲ್ಲಿ ತುಂಡುಗಳನ್ನು ಪರಿಸೀಲಿಸಿದಾಗ ಯಾವುದೇ ಛಪ್ಪಾ ಇರುವುದು ಕಂಡುಬರಲಿಲ್ಲ. ಜೀಪಿನಲ್ಲಿ ಶ್ರೀಪಾದ ಗಣಪತಿ ಹೆಗಡೆ ಇವರನ್ನು ಕೇಳಲಾಗಿ ಯಾವುದೇ ಪಾಸ ಯಾ ಪರ್ಮಿಟ್ ಇಲ್ಲವೆಂದು ಹೇಳಿದರು. ನ್ಯಾಯಾಲಯದಲ್ಲಿ ತನ್ನ ಮುಂದೆ ಇರುವ ವ್ಯಕ್ತಿಯೇ ಶ್ರೀ ಶ್ರೀಪಾದ ಗಣಪತಿ ಹೆಗಡೆಯವರಾಗಿರುತ್ತಾರೆ. ಆ ದಿನ ನಾವು ನೋಡಿದ ಪರಿಶೀಲಿಸಿದ ಜೀಪು ಬಿಳಿ ಬಣ್ಣದ ಆರ್ಮೋಡಾ ಜೀಪು ಇದ್ದು ಅದರ ಸಂಖ್ಯೆ ಕೆಎ–31 ಎಂ–1249 ಆಗಿರುತ್ತದೆ. ಅ ಮಾಲು ಮತ್ತು ಜೀಪನ್ನು ಗುರುತಿಸುತ್ತೇನೆ. ಆ ದಿನ ಮಾಲು ಹಾಗೂ ಜೀಪನ್ನು ಪಂಚನಾಮೆ ಮುಖಾಂತರ ಜಪ್ತ ಪಡಿಸಿಕೊಂಡೆವು. ಜೀಪಿನಲ್ಲಿ 18 ಸಾಗವಾನಿ ತುಂಡುಗಳಿದ್ದು ರೇಂಜ್ ಆಫಿಸಿಗೆ ತಂದು ಜೀಪಿನಲ್ಲಿದ್ದ ಸಾಗವಾನಿ ತುಂಡುಗಳನ್ನು ಇಳಿಸಿ ಅದಕ್ಕೆ KNFDF-8 LL ಅಂತ ಗುರುತು ಮಾಡಿದೆವು. ತುಂಡುಗಳಿಗೆ ಹಳದಿ ಬಣ್ಣದ ಚಾಕ್‌ನಿಂದ ನಂಬರ್ ಹಾಕಿದ್ದೇನೆ" ಮರದಿನ ಬೆಳಿಗ್ಗೆ ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದೆವು. ಗುನ್ನೆ ಹಿಡಿದ ದಿನವೇ

ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡೆವು. ಈ ಸಾಕ್ಷಿ ವಿಚಾರಣೆಯಲ್ಲಿ ಪಂಚನಾಮೆಯನ್ನು ಪ್ರಥಮ ವರ್ತಮಾನ ವರದಿಯನ್ನು ಗುರುತಿಸಿದ್ದು. ಅದನ್ನು ಕ್ರಮವಾಗಿ ನಿಶಾನೆ ಪಿ1,ಪಿ2 ಎಂತ ಗುರುತಿಸಲಾಯಿತು.

ಮರು ವಿಚಾರಣೆ ಇಲ್ಲಾ.

ಅಭಿಯೋಜಕರ ಪರ ಎರಡನೇ ಸಾಕ್ಷಿಯಾಗಿ (PW2)ಶ್ರೀ ಸತ್ಯನಾರಾಯಣ ಗಣಪತಿ ಹೆಗಡೆ, ಸಾ:ಹೆಗ್ಗುಂಬೆ ಇವರನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿದಾಗ ಅವರು " ನಾನು ಮೆಣಸಿ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷನಾಗಿರುತ್ತೇನೆ. ದಿ:31–01–2005 ರಂದು ತನಗೆ ಅರಣ್ಯ ಮೂಲ ಕಳ್ಳತನ ಆಗುತ್ತಿರುವ ಬಗ್ಗೆ ಸುದ್ದಿ ಬಂತು ಆದ್ದರಿಂದ ಸೋಣಗಿನ ಮನೆ ಕಡೆ, ಸ್ವರ್ಣಗದ್ದೆ ಕಡೆಯಿಂದ ಶಿರಸಿ ಮಾರ್ಗವಾಗಿ ಒಂದು ಜೀಪು ಬಂತು ಅದನ್ನು ತಡೆದು ನಿಲ್ಲಿಸಿ, ಮನೆಗೆ ಬಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ದೂರವಾಣಿ ಮುಖಾಂತರ ನಡೆದ ಘಟನೆ ಬಗ್ಗೆ ವಿವರಿಸಿದಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಕೆಲವು ಸಿಬ್ಬಂದಿಗಳು ಸೇರಿ ಘಟನೆ ನಡೆದ ಸ್ಥಳಕ್ಕೆ ಬಂದರು. ಸ್ಥಳದಲ್ಲಿ ಬ್ಯಾಟರಿ ಬೆಳಕಿನಲ್ಲಿ ಪಂಚನಾಮೆ ಮಾಡಿ ಜೀಪು ಮತ್ತು ಮಾಲನ್ನು ಜಪ್ತ ಮಾಡಿಕೊಂಡರು. ಹುಲೇಕಲ್ ವಲಯ ಕಛೇರಿಗೆ ತಂದು ಉದ್ದ ಅಗಲ ಅಳತೆ ಮಾಡಿದರು" ಎಂದು ಸಾಕ್ಷಿ ನುಡಿದಿರುತ್ತಾರೆ. ಅವರ ಸಾಕ್ಷಿಯಲ್ಲಿ ಮೂಡಿಬಂದ ಅಂಶಗಳು PW–1 ಸಾಕ್ಷಿಯ ಹೇಳಿಕೆಯನ್ನು ದೃಢಪಡಿಸುತ್ತದೆ. ಈ ಸಾಕ್ಷಿಯು ಜೀಪು ನಂ.ಕೆಎ–31 ಎಂ.1249 ನೇದನ್ನು ಹಾಗೂ ಸಾಗವಾನಿ ಸೈಜುಗಳನ್ನು, ತನ್ನನು ಪಂಚನನ್ನಾಗಿ ಮಾಡಿಕೊಂಡು ತನ್ನ ಸಮಕ್ಷಮ ಜಪ್ತ ಪಡಿಸಿಕೊಂಡ ಬಗ್ಗೆ ವಿಚಾರಣೆಯಲ್ಲಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ1ಬಿ ಎಂದು ಗುರುತಿಸಿಕೊಳ್ಳಲಾಯಿತು, ಮರು ವಿಚಾರಣೆ ಇಲ್ಲಾ.

ತದನಂತರ, ಅಭಿಯೋಜಕರ ಪರ 3ನೇ (PW–3) ಸಾಕ್ಷಿಯಾಗಿ ಶ್ರೀ ಸೀತಾರಾಮ ಗಣಪತಿ ಭಟ್ಟ ಸಾ: ಮೆಣಸಿ, ಕುಂಬಾಳಗದ್ದೆ ಇವರನ್ನು ವಿಚಾರಣೆಗೆ ಒಳಪಡಿಸಿದಾಗ, ಅವರು, ಪಂಚನಾಯೆಯನ್ನು ಚಪ್ಪರಗಟ್ಟೆಯಲ್ಲಿ ಮಾಡಿದರು. ಪಂಚನಾಮೆಗೆ ಬೆಳಿಗ್ಗೆ ಸುಮಾರು 10– 10.30 ಘಂಟೆ ಹೊತ್ತಿಗೆ ಮನೆಯಲ್ಲೆ ಸಹಿ ಮಾಡಿರುತ್ತೇನೆ. ನಾನು ಯಾವುದೇ ಕಟ್ಟಿಗೆ ವಶಪಡಿಸುವ ಕಾಲಕ್ಕಾಗಲಿ, ವಾಹನ ವಶಪಡಿಸುವ ಕಾಲಕ್ಕಾಗಲೀ ಹೋಗಿಲ್ಲ. ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಂಚನಮೆಯನ್ನು ಗುರುತಿಸಿದ್ದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಶಾನೆ ಪಿ1(ಸಿ) ಎಂದು ಗುರುತಿಸಲಾಗಿರುತ್ತದೆ. ಮರುವಿಚಾರಣೆ ಇಲ್ಲಾ.

ಅಭಿಯೋಜಕರ ಪರ 4ನೇ ಸಾಕ್ಷಿಯಾಗಿ (ಪಿಡಬ್ಲ್ಯು–4) ಶ್ರೀ ರವೀಂದ್ರ ನಾಯರ್, ಆಗಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರನ್ನು ವಿಚಾರಣೆಗೆ ಒಳಪಡಿಸಿದಾಗ, " ದಿ:31–01–2005 ರಂದು ರಾತ್ರಿ 10.45ಘಂಟೆಗೆ ದೂರವಾಣಿ ಸಂದೇಶ ಬಂದ ಮೇರೆಗೆ ಚಪ್ಪರಗಟ್ಟೆ ಬಸ್ ನಿಲ್ದಾಣದ ಬಳೀ ವಾಹನವನ್ನು ಕಟ್ಟಿಗೆ ಸಮೇತ ಹಿಡಿದು ನಿಲ್ಲಿಸಿದ ಸ್ಥಳಕ್ಕೆ ಹೋದಾಗ ವಾಹನದಲ್ಲಿ ಸಾಗವಾನಿ ಕಟ್ ಸೈಜುಗಳೂ ಇರುವುದು ಕಂಡು ಬಂತು. ಬ್ಯಾಟರಿ ಬೆಳಕಿನಲ್ಲಿ ವಾಹನವನ್ನು ಪರಿಶೀಲಿಸಿ ನಂತರ ವಾಹನದಲ್ಲಿದ್ದ ಕಟ್ಟಿಗೆ ತುಂಡುಗಳನ್ನು ಹೊರತೆಗೆದು ಅದಕ್ಕೆ ನಂಬರ್ ಹಾಕಿ ಛಪ್ಪಾ ಹೊಡೆದು ಕೆಂಪು ಬಣ್ಣದಿಂದ ನಿಶಾನೆ ಮಾಡಲಾಯಿತು. ಪಂಚನಾಮೆಯನ್ನು ತಯಾರಿಸಲಾಯಿತು" ಎಂದು ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ1(ಡಿ) ಎಂದು ಗುರುತಿಸಲಾಯಿತು.

ಅಭಿಯೋಜಕರ ಪರ 5ನೇ ಸಾಕ್ಷಿಯಾಗಿ (ಪಿಡಬ್ಲ್ಯು–5) ಶ್ರೀ ಚಂದ್ರಶೇಖರ ನಾರಾಯಣ ನಾಯ್ಕ ಆಗಿನ ವಲಯ ಅರಣ್ಯಾಧಿಕಾರಿ ಇವರನ್ನು ವಿಚಾರಣೆಗೆ ಒಳಪಡಿಸಿದಾಗ ಅವರ ಸಾಕ್ಷಿಯಲ್ಲಿ ನುಡಿದ ಅಂಶಗಳು ಪಿಡಬ್ಲ್ಯು–1 ಸಾಕ್ಷಿಯ ಹೇಳಿಕೆಯನ್ನು ದೃಡಪಡಿಸುತ್ತವೆ. ಪಂಚನಾಮೆಯಲ್ಲಿಯ ಈ ಸಾಕ್ಷಿಯ ಸಹಿಯನ್ನು ನಿಶಾನೆ ಪಿ1(ಇ) ಎಂದು ಗುರುತಿಸಲಾಯಿತು.

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಅಭಿಯೋಜಕರ ಪರ ಸಾಕ್ಷಿಯ ಹೇಳಿಕೆ ಪಡೆದಿದ್ದರಿಂದ ಹಾಗೂ ಅರ್ಜಿದಾರರ ಪರ ವಕೀಲರ ಪಾಟಿ ಸವಾಲುಗಳನ್ನು ಪರಿಗಣಿಸಿದ ನಂತರ ಈ ಪ್ರಕರಣದ ವಿಚಾರಣೆಯಲ್ಲಿ ಸಾಕ್ಷಿಗಳ ಹೇಳಿಕೆ ಮತ್ತು ಪಂಚನಾಮೆಯಲ್ಲಿರುವ ವಿಷಯಗಳನ್ನು ಪರಿಶೀಲಿಸಿದಾಗ ಪಿಡಬ್ಲ್ಯು–1 ಸ್ಥಳದಲ್ಲಿ ಪಂಚನಾಮೆ ಬರೆದಿದ್ದಾಗಿ ಹೇಳಿದ್ದಾರೆ. ಆದರೆ, ಸ್ಥಳದಲ್ಲಿ ಪಂಚನಾಮೆ ಬರೆದು ಪಂಚರ ಸಹಿ ಪಡೆದಿರುವುದಿಲ್ಲ ಎಂದು ಪಿಡಬ್ಲ್ಯು–3 ರವರ ಹೇಳಿಕೆಯಿಂದ ತಿಳಿದು ಬರುತ್ತದೆ. ಮತ್ತು ಪಿಡಬ್ಲ್ಯು –1 ರವರು ಹಳದಿ ಬಣ್ಣದ ಚಾಕ್ ತುಂಡಿನಿಂದ ಜಪ್ತ ಮಾಲಿಗೆ ನಿಶಾನೆ ಮಾಡಿದ್ದಾಗಿ ಹೇಳಿದರೆ, ಪಿಡಬ್ಲ್ಯು–4 ಕೆಂಪುಬಣ್ಣದಿಂದ ನಿಶಾನೆ ಮಾಡಲಾಯಿತೆಂದು ಸಾಕ್ಷಿ ನುಡಿದಿರುತ್ತಾರೆ.

ಈ ಪತ್ರದಲ್ಲಿ ನಿರೂಪಿಸಲಾದ ಸಾಕ್ಷಿಗಳ ಹೇಳಿಕೆ ಮತ್ತು ಪಾಟೀ ಸವಾಲುಗಳನ್ನು ಹಾಗೂ ಗುರುತಿಸಲಾದ ದಾಖಲೆಗಳನ್ನು ಪರಿಸೀಲಿಸಿದಾಗ ಉದ್ಭವವಾಗುವ ಪ್ರಶ್ನೆಗಳು ಈ ಕೆಳ ಕಂಡಂತಿರುತ್ತದೆ.

1. ಈ ಪ್ರಕರಣದಲ್ಲಿ ಅರಣ್ಯ ಅಪರಾಧವನ್ನು ಸಾಬೀತು ಪಡಿಸಲಾಗಿದೆಯೇ?
2. ಈ ಪ್ರಕರಣದಲ್ಲಿ ವಾಹವನ್ನು ಬಿಡುಗಡೆ ಮಾಡಬಹುದೇ?

ಮೊದಲನೇ ಪ್ರಶ್ನೆಗೆ ನಕರಾತ್ಮಕವಾಗಿ ಹಾಗೂ ಎರಡನೇ ಪ್ರಶ್ನೆಗೆ ಹೌದು ಎಂದು ಉತ್ತರಿಸುತ್ತೇನೆ.

ಮೊದಲನೇ ಪ್ರಶ್ನೆಗೆ ವಿವರಣೆ ಏನೆಂದರೆ, ಯಾವುದೇ ಅಪರಾಧ ಪ್ರರಕಣದಲ್ಲಿ, ಅಪರಾಧವು ನಿಸ್ಸಂಶಯವಾಗಿ ನಡೆದಿದೆ ಎನ್ನುವುದನ್ನು ಸಾಬೀತು ಪಡಿಸಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜಕರು ನಿರೂಪಿಸಿದ ಸಾಕ್ಷಿಗಳಲ್ಲಿ ಪಿಡಬ್ಲ್ಯು–3 ಇವರು ಪಂಚರಾಗಿ ಪ್ರತಿಕೂಲ ಹೇಳಿಕೆ ನೀಡಿರುತ್ತಾರೆ ಹಾಗೂ ಪಿಡಬ್ಲ್ಯು2 ಮತ್ತು ಪಿಡಬ್ಲ್ಯು–1 & ಪಿಡಬ್ಲ್ಯು–4ರವರ ಹೇಳಿಕೆಗಳಲ್ಲಿ ಹೊಂದಾಣಿಕೆ ಇರುವುದಿಲ್ಲ. ಪಿಡಬ್ಲ್ಯು–1 ರವರು ಹಳದಿ

ಬಣ್ಣದಲ್ಲಿ ಚಾಕ್‌ನಿಂದ ಬರೆದಿರುವುದಾಗಿ ಹೇಳಿದ್ದಾರೆ. ಪಿಡಬ್ಲ್ಯು–1ರವರು ಪಂಚನಾಮೆಯನ್ನು ಹುಲೇಕಲ್ ವಲಯದಲ್ಲಿ ಬರೆದಿರುವುದಾಗಿ ಹೇಳಿದರೆ ಪಿಡಬ್ಲ್ಯು–2 ರವರು ಸ್ಥಳದಲ್ಲಿಯೇ ಬರೆದಿರುವುದಾಗಿ ಹೇಳಿದರೆ, ಪಿಡಬ್ಲ್ಯು–3 ರವರು ಸ್ಥಳದಲ್ಲಿ ಮಹಜರ್ ಮಾಡಲೇ ಇಲ್ಲವೆಂದು ತಿಳಿಸಿರುತ್ತಾರೆ. ಯಾವುದೇ ಅಪರಾಧವನ್ನು ಪತ್ತೆ ಮಾಡಿದಾಗ, ಸ್ಥಳದಲ್ಲಿಯೇ ಮಹಜರ ಮಾಡುವುದು ಅತೀ ಅವಶ್ಯ, ಈ ಪ್ರಕರಣದಲ್ಲಿ ಜೀಪಿನ ಬೆಳಕಿದ್ದರೂ ಮಹಜರನ್ನು ಸ್ಥಳದಲ್ಲೆ ಮಾಡದಿರುವುದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಹಾಗೂ ಯಾವುದೇ ಬಾತ್ಮಿ ಬಂದರು ಸಾರ್ವಜನಿಕರು ಮೊದಲು ಅರಣ್ಯ ಅಧಿಕಾರಿಗಳಿಗೆ ತಿಳಿಸಿ, ನಂತರ ಅಪಾರಾದಿಗಳನ್ನು ಬಂಧಿಸಲು ಕ್ರಮ ಕೈಗೊಳ್ಳಬಹುದು, ಆದರೆ ಈ ಪ್ರಕರಣದಲ್ಲಿ ಅರಣ್ಯ ಅಧಿಕಾರಿಗಳಿಗೆ ತಿಳಿಸದೇ, ಅವರೇ ಆರೋಪಿಗಳನ್ನು ಹಿಡಿದು ನಂತರ ಅರಣ್ಯ ಅಧಿಕಾರಿಗಳಿಗೆ ತಿಳಿಸಿರುತ್ತಾರೆ. ಹೀಗೆ ಪ್ರತಿಯೊಂದು ಅಂಶಗಳನ್ನು ಗಮನಿಸಿದಾಗ ಅಭಿಯೋಜಕರು ಇದರಲ್ಲಿ ಆರೋಪವನ್ನು ನಿಸ್ಸಂಶಯವಾಗಿ ಸಾಬೀತು ಪಡಿಸಲು ವಿಫಲರಾಗಿರುತ್ತಾರೆ. ಸ್ವಲ್ಪವಾದರೂ ಸಂಶಯ ಬಂದರೆ ಆ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಬೇಕಾಗಿರುತ್ತದೆ. ಹಾಗಾಗಿ ಈ ಪ್ರಕರಣದಲ್ಲಿ ಅಭಿಯೋಜಕರು ನಿಸ್ಸಂಶಯವಾಗಿ ಆರೋಪವನ್ನು ಸಾಬೀತು ಪಡಿಸಿಲ್ಲವೆಂದು ತೀರ್ಮಾನಿಸುತ್ತೇನೆ.

ಆರೋಪವನ್ನು ನಿಸ್ಸಂಶಯವಾಗಿ ಸಾಬೀತು ಪಡಿಸಿಲ್ಲವಾದ್ದರಿಂದ ವಾಹವನ್ನು ಮಾಲೀಕರ ಸುಪರ್ದಿಗೆ ನೀಡಬೇಕಾಗಿ ತೀರ್ಮಾನಿಸುತ್ತೇನೆ. ಮೇಲೆ ವಿವರಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಆದೇಶ

ಆದೇಶ

ಈ ಮೇಲಿನ ಪ್ರಸ್ತಾವನೆಯಲ್ಲಿನ ಅಂಶಗಳ ಹಾಗೂ ವಿವರಣೆಗಳ ಹಿನ್ನೆಲೆಯಲ್ಲಿ ವಲಯ ಅರಣ್ಯಾಧಿಕಾರಿ, ಹುಲೇಕಲ್ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.5/2004–05/ ದಿ:31–05–2005ಕ್ಕೆ ಸಂಬಂಧಿಸಿದಂತೆ ಈ ಪ್ರಕರಣದಲ್ಲಿ ಆರೋಪವನ್ನು ಸಾಬೀತು ಪಡಿಸಿಲ್ಲವಾದ ಕಾರಣದಿಂದ ಸರಕಾರದ ಪರ ಅಮಾನತ್ತು ಪಡಿಸಲಾಗಿದ್ದ ವಾಹನ ಆರ್ಮೋಡಾ ಜೀಪು ಸಂ.ಕೆ–31 ಎಂ.1249 ನ್ನು ಮಾಲೀಕರ ಸುಪರ್ದಿಗೆ ಬಿಟ್ಟು ಕೊಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:24–12–2011 ರಂದು ಈ ಪ್ರಾಧಿಕಾರದ ಮೊಹರು ಹಾಕಿ ಹೊರಡಿಸಲಾಗಿದೆ.

ಡಿ.ಯತೀಶ್‌ಕುಮಾರ್.,ಕ.ಅ.ಸೇ.,
ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ

ಪಿ.ಆರ್. 1410

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಶಿರಸಿ ವಿಭಾಗ, ಶಿರಸಿ ಇವರ ನಡಾವಳಿಗಳು

ವಲಯ ಅರಣ್ಯಾಧಿಕಾರಿ, ಸಿದ್ದಾಪುರ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.3/95–96/ ದಿ:13–07–1995

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಯಿಂದ (ಜಿ) ವರೆಗೆ

ಉಪಸ್ಥಿತಿ

ಶ್ರೀ ಡಿ.ಯತೀಶಕುಮಾರ, ಕ.ಅ.ಸೇಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಲ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ.

ವಲಯ ಅರಣ್ಯಾಧಿಕಾರಿ, ಸಿದ್ದಾಪುರ ವಲಯ, ಸಿದ್ದಾಪುರ. **ಫಿರ್ಯಾದಿದಾರರು..........**

(ಪ್ರತಿನಿಧಿಸಿದವರು : ಸಹಾಯಕ ಸರಕಾರಿ ಅಭಿಯೋಜಕರು, ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿರಸಿ)

ಶ್ರೀ ಡಿ.ಶಿವರಾಮ, **ಅರ್ಜಿದಾರರು............**

ಬಿನ್.ಎಂ.ದಿವಾಕರ ಶಾಸ್ತ್ರಿ ಪ್ಯಾಲೇಸ್ ರೋಡ್ ಪ್ರಭುವೈನ್, ಸಾ:ವಿಟ್ಲ, ತಾ:ಬಂಟವಾಳ (ದ.ಕ)

ಪ್ರಕರಣದ ಹಿನ್ನೆಲೆ/ಪ್ರಸ್ತಾವನೆ:

ದಿನಾಂಕ:13–7–1995ರ ಬೆಳಿಗ್ಗೆ 10.20ಗಂಟೆ ಸಮಯದಲ್ಲಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಿದ್ದಾಪುರ ಮತ್ತವರ ಸಿಬ್ಬಂದಿಗಳು ಸಿದ್ದಾಪುರ–ಶಿರಸಿ ಮಾರ್ಗವಾಗಿ ಬರುತ್ತಿರುವಾಗ, ಒಂದು ಬಿಳಿಬಣ್ಣದ ಅಂಬಾಸಿಡರ್ ಕಾರು ಡಿಕ್ಕಿಯಲ್ಲಿ ಭಾರವಾದ ವಸ್ತುಗಳನ್ನು ತುಂಬಿಕೊಂಡಿರುವಂತೆ ಬಾಸವಾಗುತ್ತಿತ್ತು ಮತ್ತು ವೇಗವಾಗಿ ಚಲಿಸಿತು. ಅದನ್ನು ಕಂಡು ಅನುಮಾನದಿಂದ ಸರಕಾರಿ ವಾಹನ ಕೆಎ–31 ಜಿ–32 ನೇದರಲ್ಲಿ ಸದರ ಕಾರನ್ನು ಅಟ್ಟಿಸಿಕೊಂಡು ಸಾಗುತ್ತಿದ್ದಂತೆ, ಕೋಲಸಿರ್ಸಿ ಕ್ರಾಸಿನ ಹತ್ತಿರ ಕಾರನ್ನು ನಿಲ್ಲಿಸಿ, ಕಾರಿನಲ್ಲಿದ್ದವರು ಓಡಿಹೋಗಿದ್ದರು. ಸದರ ಸ್ಥಳದ ಆಸುಪಾಸು ಶೋಧನೆ ನಡೆಸಿದಾಗ, ಹಲಗಡಿಕೊಪ್ಪ 1991ನೇ ಸಾಲಿನ ನೆಡುತೋಪಿನಲ್ಲಿ ಅಡಗಿ ಕುಳಿತ ಒಬ್ಬ ವ್ಯಕ್ತಿಯನ್ನು ಹಿಡಿಯಲಾಯಿತು. ಅವನನ್ನು ವಿಚಾರಿಸಲಾಗಿ, ತಾನು ಅದೇ ಕಾರಿನಲ್ಲಿ ಇದ್ದವನಾಗಿದ್ದು, ರಮೇಶ ಶ್ರೀನಿವಾಸ ನಾಯ್ಕ, ಸಾ: ವಿಟ್ಲ, ಬಂಟವಾಳ ಎಂಬುದಾಗಿ ತಿಳಿಸಿದನು. ಸದರಿ ವ್ಯಕ್ತಿಯನ್ನು ಹಿಡಿದು ನಿಲ್ಲಿಸಿಕೊಂಡು, ಕಾರನ್ನು ಪರಿಶೀಲಿಸಲಾಗಿ, ಸದರ ಕಾರಿನ ನಂಬರ್ MYH–6786 ಎಂದು ಬರೆದಿತ್ತು ಮತ್ತು ಕಾರಿನ ಮುಂದಿನ ಮತ್ತು ಹಿಂದಿನ ಸೀಟಿನಲ್ಲಿ ಹಾಗೂ ಡಿಕ್ಕಿಯಲ್ಲಿ ಒರಟು ಕೆತ್ತನೆಯಿಂದ ಕೂಡಿದ ಕೆಸರು ಲೇಪಿತ ಕಟ್ಟಿಗೆ ತುಂಡುಗಳೂ ಇದ್ದವು. ಸದರ ತುಂಡುಗಳನ್ನು

ಸ್ವಚ್ಚಗೊಳಿಸಿ, ಮೂಸಿ ನೋಡಲಾಗಿ, ಶ್ರೀಗಂಧದ ತುಂಡುಗಳೆಂದು ಖಚಿತವಾಯಿತು ಮತ್ತು ಈ ಬಗ್ಗೆ ಯಾವುದೇ ಪಾಸ ವ ಪರ್ಮಿಟ್ ಇಲ್ಲದಿರುವುದು ಕಂಡುಬಂತು. ಇದರಿಂದ ಇದು ಕಳ್ಳಸಾಗಾಣಿಕೆಯಿಂದ ಸಾಗಿಸುತ್ತಿದ್ದೆಂದು ಖಚಿತವಾಯಿತು. ಕಾರಿನ ವಿವಿಧ ಭಾಗಗಳಾದ ಇಂಜಿನ್, ಚಾಸಿಸ್ ಮತ್ತು ಟೈಪ್ ಪರಿಶೀಲಿಸಲಾಗಿ ಇಂಜಿನ ನಂ.6ED004313, ಚಾಸಿಸ್ ನಂ.111–485216 ಟೈಪ್–AMBOHY ಎಂದು ಬರೆದಿತ್ತು. ಅಷ್ಟರಲ್ಲಿ ಸಿದ್ದಾಪುರದಿಂದ ತೂಕದ, ಸಾಧನ, ಬಣ್ಣ, ಇತ್ಯಾದಿಗಳನ್ನು ಸಿಬ್ಬಂದಿಯವರು ತಂದಿದ್ದು, ಸ್ಥಳದಲ್ಲೇ ಶ್ರೀಗಂಧದ ತುಂಡುಗಳಿಗೆ FOC 19/95–96 ಹಾಗೂ 'C' ಎಂದು ಕೆಂಪು ಬಣ್ಣದಿಂದ ಗುರುತು ಹಾಕಿ ಇಲಾಖಾ ಛಪ್ಪಾ ಹೊಡೆದು ತೂಕ ಮಾಡಲಾಗಿ, 46 ಅಳತೆಗೆ ಬಾರದ ಚೂರುಗಳು ಸೇರಿ 187kg. ಶ್ರೀಗಂಧದ ತುಂಡುಗಳು ಇದ್ದವು. ಅವುಗಳ ಅಂದಾಜ ಮೌಲ್ಯ '₹25000–00ಹಾಗೂ ಕಾರಿನ ಅಂದಾಜು ಮೌಲ್ಯ '₹75000–00 ಎಂದು ಅಂದಾಜಿಸಲಾಯಿತು. ಮತ್ತು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಾಯ್ದೆ 80,81, 84,85, 86, 71(a) to 71(g), ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144 ರಂತೆ ಅರಣ್ಯ ಮೊಕದ್ದಮೆ ಸಂಖ್ಯೆ.3/95–96/ದಿ:13–07–1995 ರಂತೆ ಗುನ್ನೆ ದಾಖಲಿಸಿ ವಾಹನವನ್ನು ತುಂಡುಗಳ ಸಮೇತ ಮುಂದಿನ ಕ್ರಮಕೈಗೊಳ್ಳಲು ಈ ಪ್ರಾಧಿಕಾರದ ಸಮಕ್ಷಮ ಹಾಜರಪಡಿಸಲಾಯಿತು.

ಈ ಪ್ರಾಧಿಕಾರವು ಸದರ ವಾಹನ MYH–6786 ಹಾಗೂ ಶ್ರೀಗಂಧದ ತುಂಡು 187kg. ಗಳನ್ನು ಇಲಾಖಾ ಭದ್ರತೆಯಲ್ಲಿ ಸಿದ್ದಾಪುರ ವಲಯ ಕಛೇರಿಯಲ್ಲಿ ಇಡುವಂತೆ ಆದೇಶಿಸಿತು.

ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ವಾಹನದ ಮಾಲಿಕತ್ವದ ಬಗ್ಗೆ ಮಾಹಿತಿ ಕೋರಲಾಗಿ, ಸದರ MYH–6786 ವಾಹನವು ಶ್ರೀ ಡಿ.ಶೀವರಾಂ, ಪ್ಯಾಲೇಸ್ ರೋಡ್, ಪ್ರಭುವೈನ್ಸ್, ವಿಟ್ಲ, ಬಂಟವಾಳ ತಾಲೂಕು ಇವರದ್ದೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ತಿಳಿದು ಬಂತು. ದಿನಾಂಕ:26–08–1995 ರಂದು ವಾಹನ ಮಾಲೀಕರು ವಾಹನದ ಬಿಡುಗಡೆ ಕೋರಿ ತಮ್ಮ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ, ಸಂಬಂಧಿಸಿದವರಿಗೆ ನೋಟೀಸ್ ಜ್ಯಾರಿ ಮಾಡಲಾಯಿತು. ವಾಹನ ಮಾಲೀಕರು, ತಾನು ಮುಗ್ಧನಾಗಿದ್ದು, ಸದರ ವಾಹನವು ಟೂರಿಸ್ಟ್ ವಾಹನವಾಗಿದ್ದು, ಪ್ರಕರಣದ ಅರಿವು ಇರುವುದಿಲ್ಲ. ಮತ್ತು ಸದರ ವಾಹನದಿಂದಲೇ ಜೀವನ ನಡೆಯಬೇಕೆಂದು, ಸದರ ವಾಹನವನ್ನು ಬಿಟ್ಟುಕೊಡಬೇಕಾಗಿ ತಮ್ಮ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ, ಸಹಾಯಕ ಸರಕಾರಿ ಅಭಿಯೋಜಕರು, ಸದರ ವಾಹನವನ್ನು ಬಿಟ್ಟುಕೊಟ್ಟಲ್ಲಿ ವಾಹನ ಮಾಲಿಕನು ವಾಹನವನ್ನು ಮಾರಬಹುದಾಗಿದ್ದು ಸದರ ವಾಹನವು ಮುಂದಿನ ವಿಚಾರಣೆಗೆ ಮುಖ್ಯ ಸಾಕ್ಷಿಯಾಗಿದ್ದು, ಅದನ್ನು ಬಿಟ್ಟುಕೊಡಬಾರದಾಗಿ ವಿನಂತಿಸಿಕೊಂಡಿರುತ್ತಾರೆ.

ದಿ:8–12–1995 ರಂದು ಈ ಕಛೇರಿ ನ್ಯಾಯಲಯದಲ್ಲಿ ಪ್ರಕರಣದ ವಿಚಾರಣೆ ನಡೆಸಿ ವಾಹನವನ್ನು ಮದ್ಯಂತರ ವಶಕ್ಕೆ ಬಿಡಲು ಕೋರಿದ ಅರ್ಜಿಯನ್ನು ತಿರಸ್ಕರಿಸಲಾಯಿತು.

ನಂತರ, ಅರ್ಜಿದಾರರು, ಮಾನ್ಯ ಸೆಶನ್ ಕೋರ್ಟ, ಕಾರವಾರದಲ್ಲಿ ಅಪೀಲ ಸಲ್ಲಿಸಿದ್ದು, ಮಾನ್ಯ ಕೋರ್ಟ ಆದಷ್ಟು ಬೇಗನೇ ವಾಹನವನ್ನು ಮದ್ಯಂತರ ವಶಕ್ಕೆ ಬಿಟ್ಟುಕೊಡುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ನಿರ್ದೇಶಿಸಿ ಆದೇಶಿಸಿತು. ಅದರಂತೆ, ಬಿ7/ಎಫ್.ಓ.ಸಿ/ಸಿಆರ್–3/95–96/ದಿ:30–6–1997 ರಂತೆ ರೂ.1,00,000–00 ಬ್ಯಾಂಕ್ ಗ್ಯಾರಂಟಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ನೀಡುವುದು, ವಾಹನದ ಆಕಾರ, ಬಣ್ಣ , ವಿನ್ಯಾಸ ಬದಲಾಯಿಸದೇ ಇರುವುದು. ವಾಹನವನ್ನು ಯಾವಾಗ ಈ ನ್ಯಾಯಾಲಯವು ಕೇಳಿದರೂ ಹಾಜರು ಪಡಿಸುವುದು ಮುಂತಾದ ಶರತ್ತುಗಳನ್ನು ವಿಧಿಸಿ ಮದ್ಯಂತರ ವಶಕ್ಕೆ ಬಿಡಲು ಆದೇಶ ನೀಡಲಾಯಿತು.

ಆದಾಗ್ಯೂ ವಾಹನ ಮಾಲೀಕರು ಇದರ ಬಗ್ಗೆ ಯಾವುದೇ ಆಸಕ್ತಿ ತೋರಿಸದೇ ವಾಹವನ್ನು ಬಿಡಿಸಿಕೊಂಡು ಹೋಗಿರುವುದಿಲ್ಲ ಮತ್ತು ದಿ:25–11–2006 ರಂದು ವಿಚಾರಣೆ ಕರೆದರೂ ಹಾಜರಾಗಿದ್ದು ಇರುವುದಿಲ್ಲ. ಕಾರಣ 17–7–2009 ರಂದು ಇನ್ನೊಮ್ಮೆ ಸದರ ವಾಹನವು ಬೇಕಾದಲ್ಲಿ ಈ ನ್ಯಾಯಾಲಯ ವಿಧಿಸಿದ ಶರತ್ತುಗಳಿಗೊಳಪಟ್ಟು 30 ದಿನಗಳ ಒಳಗಾಗಿ ವಾಹನವನ್ನು ಬಿಡಿಸಿಕೊಂಡು ಹೋಗಲು ಅವಕಾಶ ನೀಡಿ ಅರ್ಜಿದಾರರಿಗೆ ಪತ್ರಿಸಲಾಗಿತ್ತು. ಆದರೆ ಈ ವರೆಗೂ ಯಾವುದೇ ಉತ್ತರ ಬಂದಿರುವುದಿಲ್ಲ. ಹಾಗೂ ನ್ಯಾಯಾಲಯಕ್ಕೆ ಯಾರು ಹಾಜರಾಗಿರುವುದಲ್ಲ. ಈ ಕುರಿತು ದಿ:29–06–2011 ರಂದು ಕೊನೆಯದಾಗಿ ವಿಚಾರಣೆಗೆ ಕರೆದಿದ್ದು, ವಾಹನ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಯಾರೂ ಹಾಜರಾಗಿದ್ದು ಇರುವುದಿಲ್ಲ. ಇದರಿಂದ ಸದರ ವಾಹನ ಮಾಲೀಕರಿಗೆ ವಾಹನದ ಬಗ್ಗೆ ಯಾವುದೆ ಆಸಕ್ತಿ ಇಲ್ಲದಿರುವುದು ಸ್ಪಷ್ಟವಾಗುತ್ತದೆ. ಕಾರಣ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ

ಪ್ರಕರಣದ ಹಿನ್ನೆಲೆಯಲ್ಲಿ ವಿವರಿಸಿದಂತೆ ವಲಯ ಅರಣ್ಯಾಧಿಕಾರಿ, ಸಿದ್ದಾಪುರ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.3/95–96ಕ್ಕೆ ಸಂಬಂಧಿಸಿದಂತೆ, ಜಪ್ತ ಪಡಿಸಲಾಗಿದ್ದ ಅಂಬಾಸಿಡರ್ ಕಾರು ನಂ.MYH–6786 ಹಾಗೂ 187ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಈ ಆದೇಶ ತಲುಪಿದ ದಿನಾಂಕದಿಂದ 30 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸದೇ ಇದ್ದಲ್ಲಿ ಇದೇ ಅಂತಿಮ ಆದೇಶವಾಗಿ ಊರ್ಜಿತವಾಗುತ್ತದೆ. ತದನಂತರ ವಾಹನ ಹಾಗೂ ಶ್ರೀಗಂಧದ ತುಂಡುಗಳನ್ನು ಕಾನೂನು ರೀತ್ಯಾ ವಿಲೆಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಈ ಪ್ರಾಧಿಕಾರದ ಮೊಹರು ಹಾಕಿ ದಿ:. 2–8–11ರಂದು ಹೊರಡಿಸಲಾಗಿದೆ.

ಡಿ.ಯತೀಶ್‌ಕುಮಾರ್.,ಕ.ಅ.ಸೇ.,

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,

ಶಿರಸಿ ವಿಭಾಗ, ಶಿರಸಿ

ಪಿ.ಆರ್. 821

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 05 (ಪೋಲೀಸ್)/2011–12, ದಿನಾಂಕ : 20–10–2011.

ಉಪಸ್ಥಿತರು: **ಡಾ॥ ವೈ.ಮಂಜುನಾಥ್,** ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ.		ಪರಾರಿ

ಪ್ರಕರಣದ ಮುಖ್ಯಾಂಶಗಳು :–

ದಿನಾಂಕ : 05–07–2011 ರಂದು ಬೆಳಿಗ್ಗೆ 10–45 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೆಚ್.ಡಿ.ಕೋಟೆ ತಾ॥, ಸರಗೂರು ಟೌನ್‌ನಲ್ಲಿ ಗಸ್ತಿನಲ್ಲಿರುವಾಗ್ಗೆ ಭಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ, ಹೆಚ್.ಡಿ.ಕೋಟೆ ತಾ॥, ಸರಗೂರು ಟೌನ್, ಮುಸ್ಲಿಂ ಸ್ಮಶಾನದ ಹತ್ತಿರ, ಟಿ.ನರಸೀಪುರ ರಸ್ತೆಯಲ್ಲಿ **ಕೆಎ–09/ಯು–4439 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನದಲ್ಲಿ ಅಕ್ರಮವಾಗಿ 10 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 42/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 07–07–2011ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 13–07–2011 ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿ: 05–07–11ರಂದು ಹೆಚ್.ಡಿ.ಕೋಟೆ ತಾ॥, ಸರಗೂರು ಟೌನ್, ಮುಸ್ಲಿಂ ಸ್ಮಶಾನದ ಹತ್ತಿರ, ಟಿ.ನರಸೀಪುರ ರಸ್ತೆಯಲ್ಲಿ **ಕೆಎ–09/ಯು–4439 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನದಲ್ಲಿ ಅಕ್ರಮವಾಗಿ 10 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 38(ಎ)ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (3) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ : ಡಿಟಿಸಿಆರ್/05 (ಪೋಲೀಸ್)/2011–12, ದಿನಾಂಕ : 20–10–2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 42/2011, ದಿನಾಂಕ: 05–07–2011ರಂದು ವಶಪಡಿಸಿಕೊಂಡ **ಕೆಎ–09/ಯು–4439 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1253

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 276 (ಪೋಲೀಸ್)/2010–11, ದಿನಾಂಕ : 20–10–2011.

ಉಪಸ್ಥಿತರು: ಡಾ|| ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ		ನಂದೀಶ್ ಬಿನ್ ಬಸವರಾಜು

ಪ್ರಕರಣದ ಮುಖ್ಯಾಂಶಗಳು :–

ದಿನಾಂಕ : 02–06–2011ರಂದು ರಾತ್ರಿ 9–30 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರಿಗೆ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಮಗ್ಗೆ ಗ್ರಾಮದ ಬಸ್ ನಿಲ್ದಾಣದ ಬಳಿ **ಕೆಎ–21/ಎಂ–1666 ನೋಂದಣಿ ಸಂಖ್ಯೆಯ ಕಮಾಂಡರ್ ಜೀಪ್ ವಾಹನದಲ್ಲಿ** ಅಕ್ರಮವಾಗಿ 25.380 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ನಂದೀಶ್ ಬಿನ್ ಬಸವರಾಜು ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 33/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 04–06–11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 07–06–11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 02–06–2011 ರಂದು ಹೆಚ್.ಡಿ.ಕೋಟೆ ತಾಲ್ಲೂಕು, ಮಗ್ಗೆ ಗ್ರಾಮದ ಬಸ್ ನಿಲ್ದಾಣದ ಬಳಿ **ಕೆಎ–21/ಎಂ–1666 ನೋಂದಣಿ ಸಂಖ್ಯೆಯ ಕಮಾಂಡರ್ ಜೀಪ್ ವಾಹನದಲ್ಲಿ** ಅಕ್ರಮವಾಗಿ 25.380 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ನಂದೀಶ್ ಬಿನ್ ಬಸವರಾಜು ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (4) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/276 (ಪೋಲೀಸ್)/2010–11, ದಿನಾಂಕ : 20–10–2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 33/2011, ದಿ: 02–06–11 ರಂದು ವಶಪಡಿಸಿಕೊಂಡ **ಕೆಎ–21/ಎಂ–1666 ನೋಂದಣಿ ಸಂಖ್ಯೆಯ ಕಮಾಂಡರ್ ಜೀಪ್ ವಾಹನವನ್ನು** ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ|| ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1254

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 267 (ಪೋಲೀಸ್)/2010–11, ದಿನಾಂಕ : 20–10–2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ, ಹೆಚ್.ಡಿ.ಕೋಟೆ.		ಕೃಷ್ಣ ಬಿನ್ ಚಂದ್ರಹಾಸ

ಪ್ರಕರಣದ ಮುಖ್ಯಾಂಶಗಳು :–

ದಿನಾಂಕ : 06–02–2011 ರಂದು ಮಧ್ಯಾಹ್ನ 12–30 ಗಂಟೆ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ ಇವರು ಠಾಣಾ ಉಸ್ತುವಾರಿಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ಟೌನ್, ಹುಣಸೂರು ರಸ್ತೆಯಲ್ಲಿ **ಕೆಎ–11/ಕೆ–8704 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್ ವಾಹನದಲ್ಲಿ** ಅಕ್ರಮವಾಗಿ 21.780 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಕೃಷ್ಣ ಬಿನ್ ಚಂದ್ರಹಾಸ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 37/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 17–05–11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 18–05–11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 06–02–2011 ಹೆಚ್.ಡಿ.ಕೋಟೆ ಟೌನ್, ಹುಣಸೂರು ರಸ್ತೆಯಲ್ಲಿ **ಕೆಎ–11/ಕೆ–8704 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್ ವಾಹನದಲ್ಲಿ** ಅಕ್ರಮವಾಗಿ 21.780 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಆ ಸಂದರ್ಭದಲ್ಲಿ ಆರೋಪಿಯಾದ ಕೃಷ್ಣ ಬಿನ್ ಚಂದ್ರಹಾಸ ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (8) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/267 (ಪೋಲೀಸ್)/2010–11, ದಿನಾಂಕ : 20–10–2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 37/2011, ದಿ: 06–02–11 ರಂದು ವಶಪಡಿಸಿಕೊಂಡ **ಕೆಎ–11/ಕೆ–8704 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್ ವಾಹನವನ್ನು** ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1255

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 241 (ಪೋಲೀಸ್)/2010–11, ದಿನಾಂಕ : 20–10–2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ನಿರೀಕ್ಷಕರು, ನಿಷೇಧ ವಿಭಾಗ, ಮೈಸೂರು ಜಿಲ್ಲೆ		ಶ್ರೀನಿವಾಸಗೌಡ @ ಸೀನ ಬಿನ್ ಲೇಟ್ ಓಬಳೇಗೌಡ

ಪ್ರಕರಣದ ಮುಖ್ಯಾಂಶಗಳು :–

ದಿನಾಂಕ : 14–04–2011 ರಂದು ಸಂಜೆ 5–15 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಠಾಣೆಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಕಟ್ಟೆಹುಣಸೂರು ಗ್ರಾಮದ ಬಸ್ ನಿಲ್ದಾಣದ ಬಳಿ **ಹೀರೋ ಜೆಟ್ ಸೈಕಲ್‌ನಲ್ಲಿ** ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಶ್ರೀನಿವಾಸಗೌಡ @ ಸೀನ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 23/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಸೇಂದಿಯನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 18–04–11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ :27–04–11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

